# ಸದ್ವೈಷ್ಣವ ಹರಿದಾಸ ಮಹಿಳೆಯರು

## ಬಳ್ಳಾರಿ ಜಿಲ್ಲೆಯ ಹರಿದಾಸಿಯರು



ಲೇಖಕಿ :

ಡಾ॥ ಶ್ರೀಮತಿ ರುಕ್ಮಿಣಿ ಗಿರಿಮಾಜಿ

ಪ್ರಕಾಶಕರು :

ಡಿ.ಎಲ್.ಎನ್.ರಾವ್., ಬೆಂಗಳೂರು

Rarest Archives

# ಸದ್ವೈಷ್ಣವ ಹರಿದಾಸ ಮಹಿಳೆಯರು

## ಬಳ್ಳಾರಿ ಜಿಲ್ಲೆಯ ಹರಿದಾಸಿಯರು

(ಹರಪನಹಳ್ಳಿ ಭೀಮವ್ವ, ಓರವಾಯಿ ಲಕ್ಷ್ಮೀದೇವಮ್ಮ, ದೊಡ್ಡಿಸುಧಾಬಾಯಿ, ಕೋಲಾರ ಪದ್ಮಾಬಾಯಿ, ರಾಧಾಬಾಯಿ ಹಾಗೂ ಸೀತಾಬಾಯಿ)

ಲೇಖಕಿ:

**ಡಾ॥ ಶ್ರೀಮತಿ ರುಕ್ಮಿಣಿ ಗಿರಿಮಾಜಿ**

ವಿದ್ಯಾವಾಚಸ್ಪತಿ, ಮಧ್ವಸಮಾಜ ಸೇವಾ ರತ್ನ, ಸಾಹಿತ್ಯ-ಸಂಸ್ಕೃತಿ ಪ್ರಚಾರ ಪ್ರವೀಣೆ, ಗುರುಗೋವಿಂದ ದಾಸಪ್ರಶಸ್ತಿ ಇತ್ಯಾದಿ ಅನೇಕ ಬಿರುದಾಂಕಿತ ಲೇಖಕರು ಮತ್ತು ಹರಿದಾಸಸಾಹಿತ್ಯ ಸಂಶೋಧಕರು.

ಪ್ರಕಾಶಕರು:

**ಡಿ.ಎಲ್.ಎನ್. ರಾವ್**

Rarest Archiver

**SADVAISHNAVA HARIDASA MAHILEYARU - Haridasin's belongs to Bellary District.**

**Written by:**
**Dr. Rukmini Girimaji**
No. 701, 'L' Block, "Brindavana"
Sri Rama Samrudhi Apartment, Vartur Main Road,
Tubara Halli Post, Bangalore - 66, Phone: 080-28542582

© **Reserved, Author**

**First Edition: 2008**

**Typeset : Tulasi Impressions**

**Printed at: Parimala Printers, Bangalore**

Published by :
**D.L.N. Rao(Hari)**, Advocate
11th Main, 11th 'B'Cross
Malleswaram, BANGALORE-560 003

Rarest Archiver

ಅರ್ಪಣೆ

ಕರ್ನಾಟಕದ ಸಮಸ್ತ ಹರಿದಾಸ ಹಾಗೂ
ಹರಿದಾಸ ಮಹಿಳೆಯರಿಗೆ

Rarest Archiver

# ನನ್ನ ಮೊದಲ ಮಾತು.....

ನನ್ನ ಆತ್ಮೀಯ ಗೆಳೆಯರಾದ ಶ್ರೀಮತಿ ರುಕ್ಮಿಣಿ ಗಿರಿಮಾಜಿ ಅವರು ನನಗೆ 25 ವರ್ಷಗಳಿಂದ ಪರಿಚಯ. ಇವರು ಬಹಳ ಸರಳ ಸ್ವಭಾವದವರು. ನಿರ್ಗರ್ವಿಗಳು, ಭಾಳಾ ವಿದ್ಯಾವಂತರು. ನನ್ನನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅನೇಕ ಸಂಘ ಸಂಸ್ಥೆಗಳಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ನಮ್ಮ ಸ್ನೇಹವು ಬೆಳೆಯಿತು. ಇವರು ನನ್ನ ಮೇಲಿನ ಅಭಿಮಾನದಿಂದ ಈ ಪುಸ್ತಕವನ್ನು ಬರೆದಿರುವುದು ನೋಡಿದರೆ ನನಗೆ ಬಹಳ ಸಂತಸವಾಯಿತು. ನಾನು ಹೆಚ್ಚು ಓದಿದಾಕೆ ಅಲ್ಲ. ನನ್ನ ತಾಯಿ ಮನೆ ಮತ್ತು ಅತ್ತೆಯಮನೆ ಎರಡು ಸಾಂಪ್ರದಾಯ ಕುಟುಂಬಗಳು. ನಮ್ಮ ಯಜಮಾನರಾದ ಶ್ರೀ ದೊಡ್ಡಿ ಗುಂಡೂರಾಯರು ಬಳ್ಳಾರಿಯಲ್ಲಿ ಪ್ರಸಿದ್ಧ ವಕೀಲರಾಗಿದ್ದರು. ಈಗ ಅವರು ಇಲ್ಲ. ಇವರ ತಂದೆ, ಮಾವಂದಿರಾದ ದೊಡ್ಡಿ ಗೋವಿಂದರಾಯರು ಕೂಡ ಹೆಸರಾಂತ ವಕೀಲರಾಗಿದ್ದರು. ಭೀಮೇಶ ವಿಠಲದಲ್ಲಿ ಅಧ್ಯಯನ ಮಾಡಿದ್ದರು. ಪಾಠ ಪ್ರವಚನ ಸಂಸ್ಕೃತಪಂಡಿತರಾಗಿದ್ದರು. ಇವರು ಇದ್ದಾಗ ಮನೆಯಲ್ಲಿ ಶ್ರೀ ಲಕ್ಷ್ಮೀಶತೀರ್ಥರು ಕುಂದಾಪುರ ಮಠ. ಇವರು ಮನೆಯಲ್ಲಿ 4 ತಿಂಗಳು ಚಾತುರ್ಮಾಸಕ್ಕೆ ಕುಳಿತಿದ್ದರು. ನಮಗೆ 7 ಜನ ಮಕ್ಕಳು. ಎಲ್ಲರೂ ವಿದ್ಯಾಬುದ್ಧಿವಂತರು. ನಮ್ಮ ಹಿರಿಯ ಮಗನಾದ ದೊಡ್ಡಿ ವೇಣುಗೋಪಾಲ ಗೋವಾದಲ್ಲಿ ದೊಡ್ಡ ಕೆಲಸವನ್ನು ಮಾಡಿ, ನಿವೃತ್ತರಾಗಿ, ಮನೆಯಲ್ಲೆ ಸಂಸ್ಕೃತ ಪಾಠ ಪ್ರವಚನ ಪಂಡಿತಗೋಷ್ಠಿ, ಭಜನೆ, ಕನ್ನಡ ಸಂಘ ಎಲ್ಲವನ್ನು ನಡೆಸುವರು, ಶ್ರೀ ವೆಂಕಟರಮಣದೇವರ ಗುಡಿ ಕಟ್ಟಿಸುವ ಪ್ರಯತ್ನ ನಡೆಸುತ್ತಿರುವರು. ಇನ್ನು ವೆಂಕಟಗಿರಿ, ಹರಿ, ವಾಮನ ಇವರು ಸದ್ಗುಣಸಂಪನ್ನರಾಗಿ ಉತ್ತಮ ಕಾರ್ಯಗಳಲ್ಲಿ ನಿರತರಾಗಿರುವರು. ನನ್ನ ಅಜ್ಜಿ ಕಮಲಮ್ಮನ ಹಿಂದಿನವರಾದ ಸತ್ಯಜಿತ್‌ರಾವ್ ಅವರು ಶಿವಾಜಿ ಹತ್ತಿರ ದಿವಾನರಾಗಿದ್ದರು.

ಶ್ರೀಮತಿ ರುಕ್ಮಿಣಿ ಗಿರಿಮಾಜಿಯವರನ್ನು ನನ್ನ ಒಡಹುಟ್ಟಿದ ತಂಗಿಯಂತೆ ಭಾವಿಸಿರುವೆನು. ಇವರಿಗೆ ನನ್ನ ಮನಃಪೂರ್ವಕ ಆಶೀರ್ವಾದಗಳು. ಇವರನ್ನು ದೇವರು ಆಯುರಾರೋಗ್ಯ ಕೊಟ್ಟು ಸುಖವಾಗಿ ಇಟ್ಟಿರಲಿ. ನಮ್ಮ ಆತ್ಮೀಯರಾದ ನನ್ನ ಕೃತಿ ಸಂಗ್ರಹ **"ಕಪಿಲಾಂತರಂಗ ಸುಧಾ"** ಎಂಬ ಗ್ರಂಥವನ್ನು ಸುಂದರವಾಗಿ ಹೊರತರಲು ಸಹಕರಿಸಿದ ಹಾಗೂ ನನ್ನ ಎಲ್ಲದಕ್ಕೂ ಹಿತಚಿಂತಕರಾದ ಚಿ|| ಎ.ಬಿ. ಶ್ಯಾಮಾಚಾರ್ಯ ಅವರು ಈ ಕಿರುಪುಸ್ತಕವನ್ನು ಅಲ್ಪಕಾಲದಲ್ಲಿ ಹೊರಬರಲು ಕಾರಣರಾಗಿರುತ್ತಾರೆ. ಇವರಿಗೆ ನನ್ನ ಆಶೀರ್ವಾದಗಳನ್ನು ತಿಳಿಸುತ್ತಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**-ಶ್ರೀಮತಿ ದೊಡ್ಡಿ ಸುಧಾಬಾಯಿ ಗುಂಡೂರಾವ್**

Rarest Archiver

## ಲೇಖಕಿಯ ಕಡೆಯಿಂದ.....

ಹೀಗೆಯೇ ಕುಳಿತುಕೊಂಡು ನಮ್ಮ ನೆಚ್ಚಿನ ಹರಿದಾಸವಾಹಿನಿಗೆ ಯಾವ ಲೇಖನವನ್ನು ಬರೆದು ಕಳುಹಿಸೋಣವೆಂದು ಯೋಚಿಸುತ್ತಿದ್ದಾಗ ನನ್ನ ಮನಸ್ಸಿಗೆ ಥಟ್ಟನೆ ಹೊಳೆದದ್ದು ಬಳ್ಳಾರಿಯ ಮಹಿಳಾ ಹರಿದಾಸರ ಬಗ್ಗೆ ಬರೆಯೋಣ ಎಂದು. ಈಗಾಗಲೇ ನಾನು ಬರೆದ ಬಳ್ಳಾರಿಯ ಓರವಾಯಿ ಲಕ್ಷ್ಮೀದೇವಮ್ಮ ನವರ ''ಜೀವನ ಮತ್ತು ಕೃತಿಗಳು'' ಪುಸ್ತಕವನ್ನು ಪರಮಪೂಜ್ಯ ಶ್ರೀಗಳಾದ ಪೇಜಾವರ ಶ್ರೀಗಳು ಪೂರ್ಣಪ್ರಜ್ಞ ಪ್ರತಿಷ್ಠಾನದ ವತಿಯಿಂದ ಅದನ್ನು ಪ್ರಕಟಿಸಿದರು. ನಂತರ ಬರೆದ ''ಕರ್ನಾಟಕದ ವೈಷ್ಣವ ಅನುಭಾವೀ ಕವಯಿತ್ರಿಯರು'' ಎಂಬ ಮೂರು ಜನ ಮಹಿಳೆಯರ ಬಗ್ಗೆ ಅಂದರೆ ''ಹೆಳವನ ಕಟ್ಟೆ ಗಿರಿಯಮ್ಮ, ಹರಪನ ಹಳ್ಳಿಯ ಭೀಮವ್ವ ಮತ್ತು ಓರವಾಯಿ ಲಕ್ಷ್ಮೀದೇವಮ್ಮ'' ಎಂಬ ಪಾಕೆಟ್ ಸೈಜಿನ ಕೃತಿಯನ್ನು ಅಖಿಲ ಭಾರತ ಮಾಧ್ವ ಮಹಾಮಂಡಲದ ಕಾರ್ಯದರ್ಶಿಗಳಾಗಿದ್ದ ಶ್ರೀ ಭಾರತೀರಮಣಾಚಾರ್ಯರು ಪ್ರಕಟಿಸಿದರು. ಆಗ ಪ್ರಯೋಗಾರ್ಥವಾಗಿ ಪಾಕೆಟ್ ಸೈಜ್ ಪುಸ್ತಕಗಳನ್ನು ಬರೆಸುವ ಒಂದು ಯೋಜನೆಯನ್ನು ಪೂಜ್ಯ ಶ್ರೀಗಳು ಪ್ರಾರಂಭಿಸಿದ್ದರು. ಅದರ ಅಡಿಯಲ್ಲಿ ಅನೇಕ ವಿದ್ವಾಂಸರ ಕೃತಿಗಳು ಬರೆಯಲ್ಪಟ್ಟವು. ಅದರಲ್ಲಿ ನನ್ನ ಕೃತಿಯೂ ಒಂದಾಗಿತ್ತು. ಪ್ರತಿ ಪುಸ್ತಕದ ಬೆಲೆ ಕೇವಲ ಮೂರು ರೂಪಾಯಿಗಳಾಗಿದ್ದುದ ರಿಂದ ಬಹಳ ಜನರು ಅವುಗಳನ್ನು ಕೊಳ್ಳತೊಡಗಿದರು. ಕೆಲವು ವರ್ಷಗಳ ನಂತರ ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಡೆಯಿಂದ ಸಮಗ್ರ ಹರಿದಾಸರ ಜೀವನ ಮತ್ತು ಒಟ್ಟು ಸಾಹಿತ್ಯದ ಬಗ್ಗೆ ಸಂಪುಟಗಳನ್ನು ಬರೆಯಿಸುವಾಗ ನನಗೂ ಬರೆಯಲು ಕರೆ ಬಂದಿತು. ಆಗ ಇಡೀ ಕರ್ನಾಟಕದ ಅನೇಕ ಮಹಿಳಾ ಹರಿದಾಸರು ಬೆಳಕಿಗೆ ಬಂದರು. ಎಂಟನೆಯ ಸಂಪುಟದಲ್ಲಿ ನಾನು ಯಥಾಪ್ರಕಾರ ರಾಧಾಬಾಯಿ ಮತ್ತು ಓರವಾಯಿ ಲಕ್ಷ್ಮೀದೇವಮ್ಮನವರ ಜೊತೆಯಲ್ಲಿ ನಂಜನಗೂಡು ತಿರುಮಲಾಂಬಾ ಅವರನ್ನೂ (ಅವರು ಶ್ರೀವೈಷ್ಣವರು) ಬರೆಯಲು ಸಂಪುಟಗಳ ನಿರ್ವಾಹಕರಾದ ಡಾ || ಶ್ರೀಮತಿ ಟಿ.ಎನ್. ನಾಗರತ್ನರವರು ನನ್ನನ್ನು ಪ್ರೇರೇಪಿಸಿದ್ದರಿಂದ ಅದನ್ನೂ ಬರೆಯಲಾಯಿತು. ಈಗ ಮತ್ತೆ ಕೇವಲ ವೈಷ್ಣವ ಸ್ತ್ರೀಯರನ್ನೇ ತೆಗೆದುಕೊಂಡು ''ಹರಪನಹಳ್ಳಿ ಭೀಮವ್ವ, ಓರವಾಯಿ ಲಕ್ಷ್ಮೀದೇವಮ್ಮ, ದೊಡ್ಡಿ ಸುಧಾಬಾಯಿ, ಕೋಲಾರ ಪದ್ಮಾಬಾಯಿ ಮತ್ತು ರಾಧಾಬಾಯಿ ಇವರನ್ನು ಕುರಿತು–ಇವರೆಲ್ಲರೂ

Rarest Archiver

ಬಳ್ಳಾರಿ ಜಿಲ್ಲೆಯವರೇ ಆದ್ದರಿಂದ ಇವರ ಬಗ್ಗೆ ಈ ಪುಸ್ತಕವನ್ನು ಹೊರ ತಂದಿದ್ದೇನೆ. ಇವರ ಜೊತೆಗೆ ಬಳ್ಳಾರಿಯ ಸತ್ಯನಾರಾಯಣ ಪೇಟೆ ಬೀದಿಯಲ್ಲಿ - ಸತ್ಯನಾರಾಯಣ ಗುಡಿಯನ್ನು ಕಟ್ಟಿಸಿರುವ ಸೀತಾಬಾಯಿ ಎಂಬುವರನ್ನೂ ಸೇರಿಸಿದ್ದೇನೆ. ಆಕೆ ಲೇಖಕಿಯಲ್ಲ, ಆದರೆ ಗುಡಿಯ ನಿರ್ಮಾಪಕಿ - ಹರಿಭಕ್ತೆ ಎಂಬ ಕಾರಣದಿಂದ.

ನಾನು ಈ ಪುಸ್ತಕದಲ್ಲಿ ಮೇಲ್ಕಂಡ ಮಹಿಳಾ ಹರಿದಾಸರ ಸಮಗ್ರ ಸಾಹಿತ್ಯವನ್ನು ಬರೆದಿಲ್ಲ. ಅದನ್ನು ಬರೆಯಹೋದರೆ ಒಬ್ಬೊಬ್ಬರದೇ ಒಂದು ಸಂಪುಟವಾಗುತ್ತದೆ. ಶತಮಾನದ ಹಿಂದೆಯೂ ನಮ್ಮ ವೈಷ್ಣವ ಲೇಖಕಿಯರು ತತ್ವದ ಬಗ್ಗೆ ಎಷ್ಟು ತಿಳಿದಿದ್ದರು. ಅಕ್ಷರ ಜ್ಞಾನವೇ ಇಲ್ಲದವರು ಎಂಥಾ ಪ್ರತಿಭಾವಂತರಾಗಿದ್ದರು ಎಂಬ ಮಾರ್ಗದರ್ಶನವನ್ನು ಮಾತ್ರ ಮಾಡಿದ್ದೇನೆ. ಇವರಲ್ಲಿ ರಾಧಾಬಾಯಿಯವರ ಕೇವಲ ಅರವತ್ತು ಹಾಡುಗಳು ಮಾತ್ರ ದೊರೆತಿವೆ. ನಾನು ಅವರ ಕೃತಿಯಲ್ಲಿನ ಯಾವತ್ತೂ ಬಳ್ಳಾರಿಯ ಪ್ರಾದೇಶಿಕ ಭಾಷೆಯು ಹೇಗಿತ್ತು ಎಂಬುದನ್ನು ತೋರಿಸಲಿಕ್ಕಾಗಿ ಕೇವಲ ಎರಡು ಪದಗಳನ್ನು ಮಾತ್ರ ತೆಗೆದುಕೊಂಡಿದ್ದೇನೆ. ಅರವತ್ತು ಹಾಡುಗಳು ಮಹಿಳಾ ಸಂಪುಟದಲ್ಲಿ ಬಂದಿವೆ. ಅವರು ಎಂಭತ್ತು ವಯಸ್ಸಿನ ನಂತರ ಬರೆಯತೊಡಗಿದರು ಎಂಬುದೊಂದು ಪ್ರತೀತಿ ಮಾತ್ರ. ಯಾಕೆಂದರೆ ಬಹಳ ಮಹಿಳಾ ಹರಿದಾಸರಿಗೆ ತಮ್ಮ ಕೃತಿಗಳನ್ನು ಪ್ರಕಟಮಾಡಲು ಸಂಕೋಚವೂ ಇತ್ತು ಭಯವೂ ಇತ್ತು.

ಇಷ್ಟು ಜನ ಹರಿದಾಸರಲ್ಲಿ ಶ್ರೀಮತಿ ದೊಡ್ಡಿ ಸುಧಾಬಾಯಿಯವರು ಈಗಲೂ ಇದ್ದಾರೆ. ಕೋಲಾರ ಪದ್ಮಾಬಾಯಿಯವರು ಇಲ್ಲ. ನಾನು ಇವರಿಬ್ಬರನ್ನು ಮಾತ್ರ ಪ್ರತ್ಯಕ್ಷವಾಹಿ ನೋಡಿರುವುದೇ ಅಲ್ಲದೆ ಅವರ ಒಡನಾಡಿಯೂ ಆಗಿದ್ದೇನೆ. ಹೇಗೆಂದರೆ ಪೂಜ್ಯ ಪೇಜಾವರ ಶ್ರೀಗಳು ನಮಗೆ ಮಾಧ್ವ ಮಹಿಳಾ ಶಾಖೆಗಳನ್ನು ಇಡೀ ಕರ್ನಾಟಕದಲ್ಲಿ ತೆಗೆಯಬೇಕು ಎಂದು ಮಾರ್ಗದರ್ಶನ ಮಾಡಿದಾಗ ಮಾಧ್ವ ಮಹಿಳಾಶಾಖೆಯ (ಕೇಂದ್ರ) ಕೆಲವು ಮಹಿಳೆಯರಾದ ನಾವುಗಳು ಅನೇಕ ಕಡೆ ಶಾಖೆಗಳನ್ನು ಆರಂಭಿಸಿ ಬಳ್ಳಾರಿಯಲ್ಲೂ ಅದನ್ನು ಆರಂಭಿಸಿದಾಗ ಸಹಜವಾಗಿ ಇವರ ಒಡನಾಟವಾಯಿತು.

ಈ ಪುಸ್ತಕದಲ್ಲಿ ಈ ಎಲ್ಲ ದಾಸ ಮಹಿಳೆಯರ ಸಂಕ್ಷಿಪ್ತ ಜೀವನ ಮತ್ತು ಕೆಲವೇ ಕೃತಿಗಳಿವೆ.

Rarest Archiver

ಇವು ನಮ್ಮ ಮುಂದಿನ ಮಹಿಳಾ ಜನಾಂಗಕ್ಕೆ ದಿಕ್ಸೂಚಿಯಾಗಲಿ. ಅವರಲ್ಲಿಯೂ ಸಹಾ ಅನೇಕರು ಬರೆಯುವಂತಾಗಲಿ. ಈಗ ಬರೆದಿರುವ ದಾಸಮಹಿಳೆಯರ ಕೃತಿಗಳನ್ನು ಓದಿ ಮನನ ಮಾಡಿಕೊಂಡು ಅಂತಹ ಒಂದು ಶುದ್ಧ ಜೀವನವನ್ನು ನಡೆಸಿ ಪರಮಾತ್ಮನ ಕೃಪೆಗೆ ಪಾತ್ರರಾಗಲಿ. ಹಾಗೆಯೇ ತಮ್ಮ ಮುಂದಿನ ಜನಾಂಗಕ್ಕೂ ಪ್ರೇರಣೆ ಮಾಡುವರಾಗಲಿ. ಈ ಒಂದು ಭಗವಂತನ ಸೇವೆ ಎಲ್ಲರಿಗೂ ದೊರೆತು ಹೀಗೆಯೇ ಮಾಧ್ವ ಹರಿದಾಸಸಾಹಿತ್ಯವು ನಿಂತ ನೀರಾಗದೆ ಜ್ಞಾನವಾಹಿನಿಯಾಗಿ ನಿರತಂರ ಹರಿಯುತ್ತಿರಲಿ ಎಂಬುದೇ ನನ್ನ ಹಿರಿಯ ಆಸೆ ಮತ್ತು ಆಕಾಂಕ್ಷೆ.

ಎಲ್ಲ ಲೇಖಕ - ಲೇಖಕಿಯರಿಗೂ ಬರುವ ಪ್ರಶ್ನೆ ಒಂದೇ. ಬರೆದಂತೂ ಆಯ್ತು. ಅದನ್ನು ಪ್ರಕಟಿಸುವರಾರು? ಓದುವರಾರು? ಬರೆದ ಪುಸ್ತಕಗಳೆಲ್ಲಾ ಬೆಚ್ಚಗೆ ಅಟ್ಟದ ಮೇಲೆ ಕೂತಿರುತ್ತವೆ. ಆದರೆ ಪರಮಾತ್ಮನು ಯಾವುದೋ ರೂಪದಲ್ಲಿ ತನ್ನ ನುಡಿಸೇವೆಯನ್ನು ಮಾಡುವವರನ್ನು ಕೈ ಬಿಡುವುದಿಲ್ಲ. ಯಾವುದೋ ರೂಪದಿಂದ ಬರುತ್ತಾನೆ. ನನ್ನ ಈ ಕೃತಿಯನ್ನು - ಲೇಖನ ಮಾಲೆಯನ್ನು - ತುಂಬು ಹೃದಯದಿಂದ ಹರಿದಾಸವಾಹಿನಿಯ ಸಂಪಾದಕರಾದ ಶ್ರೀಯುತ. ಎ.ಬಿ. ಶ್ಯಾಮಾಚಾರ್ಯರು ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದಾರೆ. ಇದು ಪುಸ್ತಕ ರೂಪದಲ್ಲೂ ಬರಬೇಕು ಎಂದು ಮಾತು ಬಂದಾಗ ಹಿಂದೆ ಮುಂದೆ ನೋಡದೆ ಶ್ರೀಮತಿ. ಸುಧಾಬಾಯಿಯವರ ಹಿರಿಯ ಚಿರಂಜೀವಿ ಶ್ರೀ ವೇಣುಗೋಪಾಲರಾಯರು "ನಾವು ಪ್ರಕಟಿಸುತ್ತೇವೆ" ಎಂದು ಹೇಳಿಯೇಬಿಟ್ಟರು. ಮಾರನೆಯ ದಿನವೇ ಇನ್ನೊಬ್ಬ ಮಗ ಹಣವನ್ನು ತಾಯಿಯ ಕೈಯಲ್ಲಿಟ್ಟೇಬಿಟ್ಟರು. ನಮ್ಮ ಶ್ಯಾಮಾಚಾರ್ಯರು ಮುದ್ರಿಸಲು ತಯಾರಾಗಿಯೇಬಿಟ್ಟರು. ಹರಿಯ ಸತ್ಯಸಂಕಲ್ಪವೆಂದರೆ ಇದೇನೇ.

ಹೀಗಾಗಿ ನಾನು ಪ್ರಾಯೋಜಕರಾದ ಸುಧಾಬಾಯಿ ಮತ್ತು ಅವರ ಪುತ್ರರಿಗೆ, ಮಧ್ವಶಾಸ್ತ್ರ ಸಂಪನ್ನರಾದ ಶ್ರೀಯುತ. ಶ್ಯಾಮಾಚಾರ್ಯರಿಗೆ, ಮುನ್ನುಡಿಯಲ್ಲಿ ಅನುಗ್ರಹಿಸಿದ ಮಧ್ವಶಾಸ್ತ್ರ ಸಂಪನ್ನ ಉತ್ತರಾದಿ ಮಠದ ಶ್ರೀಯುತ. ಸತ್ಯಧ್ಯಾನ ಕಟ್ಟಿಯವರಿಗೆ, ಮುದ್ರಕರಿಗೆ ಆಭಾರಿಯಾಗಿದ್ದೇನೆ. ನನ್ನ ಈ ಕೃತಿಯಿಂದ ಸಜ್ಜನರಿಗೆ ಏನಾದರೂ ಪ್ರಯೋಜನವಾದರೆ ಅದು ನನ್ನ ಭಾಗ್ಯ.

ಇಂತು ನಮಸ್ಕಾರಗಳು

-ರುಕ್ಮಿಣೀ ಗಿರಿಮಾಜಿ

Rarest Archiver

Rarest Archiver

# ಸದ್ವೈಷ್ಣವ ಹರಿದಾಸ ಮಹಿಳೆಯರು

(ಸುಡುಬಿಸಿಲ, ಘಟ್ಟಿ ನೆಲದ ಬಳ್ಳಾರಿ ಜಿಲ್ಲೆಯಲ್ಲಿ ಸುಮಧುರವಾದ ಭಕ್ತಿ ಕಾವ್ಯಗಳ ಮಂದಾರ ಕುಸುಮಗಳನ್ನು ಅರಳಿಸಿದ ಹಾಗೂ ದೇವಾಲಯಗಳನ್ನು ನಿರ್ಮಿಸಿದ ಸದ್ವೈಷ್ಣವ ಮಹಿಳೆಯರು)

ಬಳ್ಳಾರಿ ಎಂದ ಕೂಡಲೇ ಮೈಸೂರು ಕರ್ನಾಟಕದ ಜನಗಳು ಬೆಚ್ಚಿ ಬೀಳುತ್ತಾರೆ. ಅಲ್ಲಿಯ ಸುಡುಬಿಸಿಲು, ಘಟ್ಟಿ ಮಾತು. ಓಯಸಿಸ್‌ನಂತೆ ಬಹಳ ಆಳದಲ್ಲಿ ಅದು ನೀರೋ ಅಥವಾ ಬಿಸಿಲ್ಗುದುರೆಯೋ ಎಂಬಂತಿರುವ ಭಾವಿಗಳು ಇವುಗಳನ್ನು ನೆನೆಸಿಕೊಂಡರೇ ''ಸಾಕು ಬೇಡವಪ್ಪಾ ಬಳ್ಳಾರಿ'' ಎನ್ನುತ್ತಾರೆ.

ಆದರೆ ಇದೆಲ್ಲಾ ತೊಂದರೆಗಳಿದ್ದರೂ ಕೂಡಾ ಜನರು ಬಹಳ ಸುಸಂಸ್ಕೃತರು, ಕಟ್ಟಾ ದೇಶಾಭಿಮಾನಿಗಳು, ಜನಗಳಲ್ಲಿ ಪ್ರೀತಿಯಿರುವವರು. ಮಹಿಳೆಯರಂತೂ ಅತಿಥಿಗಳ ಸೇವೆ ಮಾಡುವುದೆಂದರೆ ಸಂತಸ ಪಡುವವರು. ಒಳಹೊಕ್ಕು ನೋಡಿದಾಗ ನಮಗೆ ಇದೆಲ್ಲಾ ತಿಳಿಯಬರುತ್ತದೆ. ಮೆಚ್ಚಬೇಕಾದ ಮಂದಹಾಸ, ರಸವತ್ತಾದ ಅಡುಗೆ ಮಾಡುವ ನೈಪುಣ್ಯ, ಕೈಗೆಲಸಗಳು, ಹಾಡುಗಳು ಮುಂತಾದವುಗಳು ಮನಸೆಳೆಯುತ್ತವೆ. ಇಂತಹ ನೆಲದಲ್ಲಿ ಜನ್ಮ ತಾಳಿ ಸಾರ್ಥಕ ಜೀವನವನ್ನು ನಡೆಸಿದ, ನಡೆಸುತ್ತಿರುವ ಕೆಲವು ಮಹಿಳಾ ಮಣಿಗಳನ್ನು ಕರ್ನಾಟಕಕ್ಕೆ ಪರಿಚಯಿಸಬೇಕು ಎಂದುಕೊಂಡು ನಾನು ಈ ಲೇಖನಕ್ಕೆ ಹರಪನಹಳ್ಳಿ ಭೀಮವ್ವ, ಓರಬಾಯಿ ಲಕ್ಷ್ಮೀದೇವಮ್ಮ, ದೊಡ್ಡಿ ಸುಧಾಬಾಯಿ, ರಾಧಾಬಾಯಿ, ಕೋಲಾರ ಪದ್ಮಾಬಾಯಿ ಹಾಗೂ ಸೀತಾಬಾಯಿಯರನ್ನು ಆರಿಸಿಕೊಂಡಿ ದ್ದೇನೆ. ಇವರಲ್ಲಿ ಈಗ ಉಳಿದಿರುವವರು ದೊಡ್ಡಿ ಸುಧಾಬಾಯಿಯವರೊಬ್ಬರೆ. ಅವರು ಈಗ ಎಂಭತ್ತೈದು ವಸಂತಗಳನ್ನು ಕಂಡವರು ನಮ್ಮೊಂದಿಗಿದ್ದಾರೆ. ಈಗ ಬಳ್ಳಾರಿ ಕರ್ನಾಟಕದ ಒಂದು ಜಿಲ್ಲೆಯಾಗಿದೆ. ಹರಪನಹಳ್ಳಿ ಭೀಮವ್ವನವರಿಂದ ಆರಂಭಿಸೋಣ.

Rarest Archiver

# ಹರಪನ ಹಳ್ಳಿ ಭೀಮವ್ವ - 1882 - 1903

ಹರಪನಹಳ್ಳಿ ಬಳ್ಳಾರಿ ಜಿಲ್ಲೆಯಲ್ಲಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ ''ನಾರಾಯಣದೇವರ ಕೆರೆ'' ಎಂಬುವ ಒಂದು ಗ್ರಾಮವಿತ್ತು. ತುಂಗಭದ್ರಾನದಿಗೆ ಅಣೆಕಟ್ಟು ಕಟ್ಟುವಾಗ ಆ ಗ್ರಾಮವು ನದಿಯಲ್ಲಿ ಮುಳುಗಿಹೋಯಿತು. ಸುಭೀಕ್ಷವಾಗಿದ್ದ ಹಳ್ಳಿಯ ಜನರು ಮನೆ, ಮಠ, ಜಮೀನು, ನಾರಾಯಣದೇವರು ಎಲ್ಲವನ್ನು ಬಿಟ್ಟು ಬೇರೆ ಬೇರೆ ಸ್ಥಳಗಳಿಗೆ ಹೊರಟುಹೋದರು. ನಾರಾಯಣದೇವರನ್ನು ನೆರೆಯ ಊರಾದ ಮರಿಯಮ್ಮನ ಹಳ್ಳಿಯಲ್ಲಿ ಸ್ಥಾಪಿಸಿದರು.

ಈ ಊರಲ್ಲಿ ರಾಘವ್ವ ಹಾಗೂ ರಘುನಾಥಾಚಾರ್ಯರಿಗೆ ಒಂದು ಹೆಣ್ಣುಮಗು ಹುಟ್ಟಿತು. ಅದನ್ನು ಕಮಲಾಕ್ಷಿ ಎಂದು ಕರೆದರು. ಮುಂದೆ ಅವಳನ್ನು 'ಭೀಮಾ' ಎಂದೂ ಕರೆಯುತ್ತಿದ್ದರು. ಕೊನೆಗೆ ಆ ಹೆಸರೇ ಶಾಶ್ವತವಾಯಿತು. ಭೀಮವ್ವನಿಗೆ ಬಾಲ್ಯದಿಂದಲೇ ಬಹಳ ಸ್ಮರಣಶಕ್ತಿ ಇತ್ತು. ಒಂದು ವರ್ಷದ ಕೂಸಾಗಿದ್ದಾಗ ತಂದೆ ತನಗೆ ಎಂತಹ ಬಟ್ಟೆ ತಂದಿದ್ದರೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಹೇಳುತ್ತಿದ್ದಳು. ಎರಡನೇ ಹುಟ್ಟು ಹಬ್ಬಕ್ಕೆ ಒಂದು ಬಂಗಾರದ ಮುಂದಲಿಯನ್ನು ಮಾಡಿಸಿ ಹಾಕಿದ್ದರು. ಹುಟ್ಟುಹಬ್ಬ ಬಹಳ ವಿಜೃಂಭಣೆಯಿಂದ ನಡೆಯಿತು. ರಾತ್ರಿ ಬಹಳ ಹೊತ್ತಿನವರೆಗೂ ಆರತಕ್ಷತೆ, ಊಟ ನಡೆಯುತ್ತಲೇ ಇತ್ತು. ಎಲ್ಲರಿಗೂ ಬಹಳ ಆಯಾಸವಾಗಿತ್ತು. ಕೂಸಿಗೂ ನಿದ್ದೆ ಬಂದುಬಿಟ್ಟಿತು. ಮುಂದಲಿಯನ್ನು ತೆಗೆದಿಡಬೇಕೆಂಬ ವಿಚಾರ ಎಲ್ಲರಿಗೂ ಮರೆತೇ ಹೋಯಿತು. ರಾತ್ರಿ ಸರಿಹೊತ್ತಿನಲ್ಲಿ ಕೂಸು ''ಚೇಳು, ಚೇಳು'' ಎಂದು ಒದರಹತ್ತಿತು. ದೊಡ್ಡವರು ಎದ್ದು ದೀಪ ಹಿಡಿದುಕೊಂಡು ಮನೆಯನ್ನೆಲ್ಲಾ ಜಾಲಾಡಿದರೂ ಚೇಳು ಸಿಗಲಿಲ್ಲ. ಅಷ್ಟರಲ್ಲೇ ಒಬ್ಬರು ಆ ಕೂಸನ್ನೇ ''ಎಲ್ಲಿದೆ ಚೇಳು'' ಎಂದು ಕೇಳಿದರು. ಭೀಮವ್ವ ತನ್ನ ತಲೆಯಲ್ಲಿದ್ದ ಮುಂದಲಿಯನ್ನು ತೋರಿಸಿ ಇದರ ಕೆಳಗಿದೆ ಎಂದಳು. ಅದನ್ನು ಹಗುರವಾಗಿ ಬಿಚ್ಚಿನೋಡಿದಾಗ ಮುಂದಲಿಯ ತಗ್ಗಿನಲ್ಲಿ ಚೇಳು ಕೊಂಡಿಯಾಡಿಸುತ್ತಾ ಕುಳಿತಿದ್ದಿತು. ಭೀಮವ್ವ ನಾಲ್ಕು ವರ್ಷದ ಬಾಲೆಯಾಗಿದ್ದಳು. ಮನೆಯ ಮುಂದೆ ಸಮ ವಯಸ್ಸಿನ ಮಕ್ಕಳೊಡನೆ ಆಟವಾಡುತ್ತಿದ್ದಳು. ಆಗ ಸಿಪಾಯಿಗಳ ಒಂದು ದಂಡು ಹರಪನಹಳ್ಳಿ ಮಾರ್ಗವಾಗಿ ಇನ್ನೆಲ್ಲಿಗೋ ಹೋಗುತ್ತಿತ್ತು. ಅದರಲ್ಲಿನ ಒಬ್ಬ ಸಿಪಾಯಿ ಭೀಮವ್ವನ ಮೈ ಮೇಲಿದ್ದ ಬಂಗಾರದ ಒಡವೆಗಳನ್ನು ನೋಡಿ ಅವಳನ್ನು

Rarest Archive

ಎತ್ತಿಕೊಂಡು ಹೊರಟುಹೋದ. ಮಿಕ್ಕ ಮಕ್ಕಳು ಮನೆಗಳಿಗೆ ಓಡಿದುವು. ಸಿಪಾಯಿಯು ಭೀಮವ್ವನನ್ನು ಎತ್ತಿಕೊಂಡು ಸ್ವಲ್ಪದೂರ ಹೋಗುವ ವೇಳೆಗೆ ಅವನಿಗೆ ಎರಡೂ ಕಣ್ಣುಗಳ ದೃಷ್ಟಿ ಹೋಗಿಬಿಟ್ಟಿತು. ಅವನು ಅಲ್ಲೇ ನಿಂತ. ಆಚೀಚೆ ಓಡಾಡುತ್ತಿದ್ದ ಜನಗಳನ್ನು ಕೂಗಿ ಕರೆದು ನನಗೆ ಈ ಮಗುವಿನ ಮನೆ ಎಲ್ಲಿದೆ ತೋರಿಸಿ ಎಂದು ಬೇಡಿಕೊಳ್ಳುತ್ತಿದ್ದ. ಸಿಪಾಯಿಯು ಭೀಮವ್ವನನ್ನು ಎತ್ತಿಕೊಂಡು ಅವರ ಮನೆಗೆ ಹೋಗಿ ತಂದೆ ತಾಯಿಗಳಿಗೆ ವಿಷಯವನ್ನು ತಿಳಿಸಿ ಕಾಪಾಡಿರೆಂದು ಕೇಳಿಕೊಂಡ. ತನ್ನಲ್ಲಿದ್ದ ಹಣವನ್ನೆಲ್ಲಾ ಭೀಮವ್ವನಿಗೆ ಕೊಟ್ಟ. ಸ್ವಲ್ಪ ಸಮಯವಾದ ಮೇಲೆ ಅವನ ಕಣ್ಣುಗಳು ಕಾಣಿಸತೊಡಗಿದವು. ಮುಂದೆ ಹೋದ.

ಹುಡುಗಿ ಬೆಳೆಯುತ್ತಾ ಬಂದಂತೆ ಅವಳಿಗೆ ವಿಚಿತ್ರ ಅನುಭವಗಳಾಗತೊಡಗಿದವು. ಒಂದೊಮ್ಮೆ ದ್ವಾದಶಿ ಪಾರಣೆ ಮುಗಿಸಿಕೊಂಡು ಅವಳ ತಂದೆ ಹಜಾರದಲ್ಲಿ ಕುಳಿತರು. ಮಗಳನ್ನೂ ತಮ್ಮ ಬಳಿ ಕೂಡಿಸಿಕೊಂಡರು. ಅಷ್ಟರಲ್ಲಿ ಯಾವುದೋ ಪ್ರಕಾಶವು ಕಂಡುಬಂದಿತು. ಭೀಮವ್ವ ತಂದೆಯನ್ನು 'ಇದೇನು' ಎಂದು ಕೇಳಿದಳು. ಅವರು ''ವ್ಯಾಸದೇವರು ಬಂದಿದ್ದಾರೆ ನೋಡಮ್ಮಾ. ಅವರು ಕಾಷಾಯ ವಸ್ತ್ರಗಳನ್ನು ಧರಿಸಿದ್ದಾರೆ. ಕೈಯಲ್ಲಿ ಕಮಂಡಲು ಇದೆ ಎಂದರು. ಆದರೆ ಅವಳಿಗೇನೂ ಕಾಣಿಸಲಿಲ್ಲ. ಮತ್ತೆ ಅವಳ ಮೇಲೆ ಬೆಳಕನ್ನು ಚೆಲ್ಲಿದಂತಾಯ್ತು. ಆಗಿನಿಂದ ಅವಳ ಚಿತ್ತವೃತ್ತಿಯೇ ಬದಲಾಯಿತು. ಆಟ, ನಗು, ಹರಟೆ ಎಲ್ಲಾ ಮಾಯವಾಗಿ ಹೋದವು. ಎಲ್ಲಿಯಾದರೂ ಪುರಾಣ, ಭಜನೆ, ಹರಿಕಥೆಗಳಾದರೆ ಅಲ್ಲಿ ಹೋಗುವಳು. ಬೇಸರವಿಲ್ಲದೆ ಕೊನೆಯವರೆಗೂ ಕುಳಿತಿರುವಳು. ಕೇಳಿದ್ದನ್ನೆಲ್ಲಾ ಮನನ ಮಾಡಿಕೊಳ್ಳುವಳು. ಒಂದು ಹಾಡನ್ನು ಒಮ್ಮೆ ಕೇಳಿದರೆ ಸಾಕು. ಅದು ಕಂಠಸ್ಥವಾಗಿಬಿಡುತ್ತಿತ್ತು. ಆಗಿನ ಕಾಲದ ಪದ್ಧತಿಯಂತೆ ಚಿಕ್ಕ ವಯಸ್ಸಿನಲ್ಲೇ ಮುನಿಯಪ್ಪ ಎಂಬುವರೊಡನೆ ವಿವಾಹವಾಯಿತು. ಆತನಿಗೆ ಆಗ ನಲವತ್ತೈದು ವಯಸ್ಸಾಗಿತ್ತು. ಅಷ್ಟು ಹೊತ್ತಿಗಾಗಲೇ ಆತನು ಮೂರು ಮದುವೆಗಳನ್ನು ಮಾಡಿಕೊಂಡಿದ್ದ. ಮುವ್ವರಿಗೂ ಮಕ್ಕಳಾಗಿ ಆಗಿ ಹೋಗಿಬಿಟ್ಟವು. ಆತ ಮತ್ತೆ ಸಂತಾನ ಪ್ರಾಪ್ತಿಗಾಗಿ ಭೀಮವ್ವನನ್ನು ಮದುವೆಯಾದ. ಆಗಿನ ಕಾಲದಲ್ಲಿ ಇಂತಹ ಇಜ್ಜೋಡು ಮದುವೆಗಳು ಸರ್ವೇ ಸಾಮಾನ್ಯವಾಗಿದ್ದವು.

ಭೀಮವ್ವನಿಗೆ ಸುಬ್ಬಾಬಾಯಿ ಎಂಬ ಮಗಳೂ ಸೋಮರಾಯನೆಂಬ ಮಗನೂ ಹುಟ್ಟಿದರು. ಸಂಸಾರ ನೆಮ್ಮದಿಯಿಂದ ಸಾಗುತ್ತಿತ್ತು. ಸೋಮರಾಯನಿಗೆ ಸಕಾಲದಲ್ಲಿ ಉಪನಯನವಾಯಿತು. ಅದಾದ ಮೂರು ವರ್ಷಗಳ ನಂತರ ಮುನಿಯಪ್ಪನವರು ದಿವಂಗತರಾದರು. ಅಂದರೆ ಅವರು ಭೀಮಾಬಾಯಿಯವರ ಜೊತೆ ಇಪ್ಪತ್ತೈದು ವರ್ಷ ಸಂಸಾರ ನಡೆಸಿದ್ದರು.

Rarest Archive

ಆಗಿನ ಸಂಪ್ರದಾಯದಂತೆ ಭೀಮವ್ವನವರು ಮಡಿಯಾದರು. ತಮ್ಮ ಜೀವನವನ್ನು ವ್ರತ, ಉಪವಾಸ, ನೇಮ ನಿಷ್ಠೆ ಪುರಾಣ ಶ್ರವಣ, ದೇವ-ಬ್ರಾಹ್ಮಣರ ಸೇವೆ ಇವುಗಳಲ್ಲಿಯೇ ಕಳೆಯುತ್ತಾ ಈ ಕಡೆ ಮಕ್ಕಳನ್ನೂ ಸಂರಕ್ಷಿಸುತ್ತಿದ್ದರು.

ಒಂದು ದಿನ ಮಧ್ಯಾಹ್ನದಲ್ಲಿ ಮಲಗಿರುವಾಗ ಒಂದು ವಿಚಿತ್ರವಾದ ಕನಸನ್ನು ಕಂಡಳಂತೆ. ತಾನು ಒಂದು ಮರದ ಕೆಳಗೆ ಮಲಗಿದ್ದಾಳೆ. ಒಬ್ಬ ಕಾಷಾಯಧಾರೀ ವ್ಯಕ್ತಿ ತಂಬೂರಿ ಹಿಡಿದುಕೊಂಡು ಬಂದರಂತೆ. ಅವರು ಅಲ್ಲಿ ಹರಿಯುತ್ತಿದ್ದ ಒಂದು ಕೃಷ್ಣ ಸರ್ಪವನ್ನು ಕಂಡು ಆಕೆಯ ನಾಲಿಗೆಯ ಮೇಲೆ ಬರೆಯುವಂತೆ ಹೇಳಿದರಂತೆ. ಅದು ತನ್ನ ನಾಲಿಗೆಯ ಮೇಲೆ ಏನೋ ಬರೆಯುವಂತೆ ಸ್ವಪ್ನದಿಂದ ಎಚ್ಚೆತ್ತಾಗ ಆಕೆಯ ಬಾಯಿಂದ ತಾನಾಗಿಯೇ ಪದಗಳು ಬರತೊಡಗಿದುವಂತೆ. ಇನ್ನೊಂದು ದಿನ ಒಬ್ಬ ವಿಪ್ರರು ತಂಬೂರಿ ಸ್ವಪ್ನದಲ್ಲಿ ಕಾಣಿಸಿಕೊಂಡು ಈಕೆಗೆ ಜೀವೇಶ ಕೃಷ್ಣನೆಂಬ ಅಂಕಿತ ಕೊಟ್ಟರಂತೆ. ಭೀಮವ್ವನಿಗೆ ಆಗಾಗ ಕೆಲವು ಸಲ ಪ್ರತಿದಿನ ದೃಶ್ಯಗಳು ಕಂಡಾಗ ಆಗಲೇ ಅವಳು ಹಾಡತೊಡಗುತ್ತಿದ್ದಳಂತೆ. ಅತ್ತೆ ಮನೆಯವರು ಹೀಗೆ ಹಾಡುಗಳನ್ನು ಹೇಳುತ್ತಿದ್ದರೆ ಬಲವಾಗಿ ಬಯ್ಯುತ್ತಿದ್ದರಂತೆ, ನಿಂದಿಸುತ್ತಿದ್ದರಂತೆ. ಆಗ ಹೋಗಲಿ ಬಿಡು ನನಗೇಕೆ ಈ ಉಸಾಬರಿ ಎಂದು ಹಾಡುವುದನ್ನು ನಿಲ್ಲಿಸೋಣವೆಂದರೆ ತಕ್ಷಣ ವಾಂತಿಯಾಗುತ್ತಿತ್ತಂತೆ. ಹೊಟ್ಟೆಯಲ್ಲಿ ಅಸಾಧ್ಯ ನೋವಾಗುತ್ತಿತ್ತಂತೆ. ಹಾಡಿದರೆ ಸರಿಹೋಗುತ್ತಿತ್ತಂತೆ. ಅತ್ತೆ ಮನೆಯವರು ದಂಡಿಸಿ ದಂಡಿಸಿ ಸಾಕಾಗಿ ಸುಮ್ಮನಾಗಿಬಿಟ್ಟರಂತೆ.

ಭೀಮವ್ವ ಹಾಡುಗಳನ್ನು ಪ್ರಕಟವಾಗಿ ಹೇಳಲು ಭಯಪಡುತ್ತಿದ್ದಳಂತೆ. ನಂತರ ಸಂಕೋಚವಿಲ್ಲದೆ ಆಕೆ ಹಾಡುತ್ತಿದ್ದಳಂತೆ. ಬಾಯಲ್ಲಿ ಓತಪ್ರೋತವಾಗಿ ಪದಗಳು ಬರುತ್ತಿದ್ದುವಂತೆ. ಭೀಮವ್ವ ನಿರಕ್ಷರಕುಕ್ಷಿ. ಅವಳಿಗೆ ಓದು-ಬರಹಗಳು ಬರುತ್ತಿರಲಿಲ್ಲ. ಆದರೆ ಅವಳ ಅತ್ಯದ್ಭುತವಾದ ಹಾಡುಗಳನ್ನು ಕೇಳಿದರೆ ದಿಗ್ಭ್ರಮೆಯಾಗುತ್ತಿತ್ತು. ಅವಳ ಸ್ನೇಹಿತರಾದ, ಅವಳಲ್ಲಿ ಹಾಡುಗಳನ್ನು ಹೇಳಿಸಿಕೊಳ್ಳುತ್ತಿದ್ದ ಇಬ್ಬರು ಅಕ್ಕ ತಂಗಿಯರು ತಾವಾಗೇ ನಿತ್ಯವೂ ಬಂದು ಅವಳ ಹಾಡುಗಳನ್ನು ಬರೆದುಕೊಳ್ಳುತ್ತಿದ್ದರಂತೆ. ನಂತರ ಅವಳೆದುರಿಗೆ ಹಾಡಿ ತೋರಿಸಿ ಅವಳು ಸರಿಯಾಗಿದೆ ಎಂದಾಗ ಅದನ್ನು ಬರೆದಿಡುತ್ತಿದ್ದರಂತೆ. ಅವರು ಭೀಮವ್ವನ ನೆರೆಮನೆಯವರೇ ಆಗಿದ್ದರು. ಅವರ ಹೆಸರು ಶ್ರೀಮತಿ. ಬಾದನಕಟ್ಟಿ ಸೀತಾಬಾಯಿ ಮತ್ತು ಕೋಳೂರು ಗಂಗಾಬಾಯಿ. ಹರಪನಹಳ್ಳಿಯಲ್ಲಿ ಆಗಿನ ಕಾಲದಲ್ಲಿಯೂ ಶಾಲೆಗೆ ಹೋಗಿ ಕಲಿತಿದ್ದ ತರಳೆಯರು ಇವರಿಬ್ಬರೇ. ಹಾಗೆ ಇವರು ಶ್ರಮಪಟ್ಟು ಭೀಮವ್ವನ ಹಾಡುಗಳನ್ನು ಬರೆದಿಡದಿದ್ದರೆ ನಮಗೆ ಇಂತಹ ಮನೋಹರವಾದ ಸಾಹಿತ್ಯ ದೊರೆಯುತ್ತಲೇ ಇರಲಿಲ್ಲ.

Rarest Archiver

ಭೀಮವ್ವನ ಬಾಯಿಯಿಂದ ಬರುತ್ತಿದ್ದ ಹಾಡುಗಳು ಒಂದೇ ಎರಡೇ – ದೇವರನಾಮಗಳು, ಉಗಾಭೋಗಗಳು, ಬಿಡಿ ಕವನಗಳು, ಕಥನ ಕವನಗಳು, ಲಾಲಿ ಹಾಡುಗಳು, ನಿಂದಾಸ್ತುತಿಗಳು, ಮಂಗಳ ಪದಗಳು, ಮುಯ್ಯದ ಹಾಡುಗಳು ಪ್ರತಿಹಾಡಿಗೆ ಒಂದು ಹಿನ್ನೆಲೆ, ಒಂದು ಕಂಡ ದೃಶ್ಯ ಹೀಗೆ ನೂರಾರು ಹಾಡುಗಳು. ಆಕೆಯ ಒಂದು ನೂರಾ ಐವತ್ತು ಹಾಡುಗಳು ಸಿಕ್ಕಿವೆ. ಸಿಗದೆ ಇರುವುದು ಇನ್ನೆಷ್ಟೋ. ಈಕೆಯು ರಚಿಸಿರುವ ದೀರ್ಘ ಕೃತಿಗಳಲ್ಲಿ ನವ ವಿಧ ಭಕ್ತಿಯನ್ನು ಕಾಣಬಹುದು. ಅಲಂಕಾರ, ಪ್ರಾಸ, ಯಮಕ ಗಳು ತಾವೇ ತಾವಾಗಿ ಬಂದಿವೆ. ಈಕೆಯ ಕೃತಿಗಳಲ್ಲಿ ರಸವತ್ತಾದ ಸಂಭಾಷಣೆಗಳಿವೆ.

ಸುವ್ವಾಲಿ ಧಾಟಿಯು 'ಸ್ತುತಿ ಮಣಿಮಾಲಿಕೆ' ಯಂತೂ ಅತ್ಯದ್ಭುತ. ''ಒಂದು ನೂರಾ ಹನ್ನೊಂದು ನುಡಿಗಳ ಕಾವ್ಯದಲ್ಲಿ ಈಕೆ ಮಹಾಭಾರತ, ಧ್ರುವ, ಪ್ರಹ್ಲಾದ, ಅಜಾಮಿಳ ಇವರೆಲ್ಲರನ್ನು ಭಗವಂತನು ಹ್ಯಾಗೆ ಸಂರಕ್ಷಿಸಿದನೆಂದು ಹೇಳಿ, ''ಕುಚೇಲನು ತಂದ ಅವಲಕ್ಕಿಯನ್ನು ತಿಂದು ದಾರಿದ್ರ್ಯವನ್ನು ತರಿದು ಅವನಿಗೆ ದೊರೆತನವ ಕೊಟ್ಟಿರುವಿ, ನದಿಯಲ್ಲಿ ಅಕ್ರೂರನಿಗೆ ವಿಶ್ವರೂಪವನ್ನು ತೋರಿಸಿ, ಗಂಧಕ್ಕೆ ಒಲಿದು ಕುಬ್ಜೆಯ ಡೊಂಕನ್ನು ತಿದ್ದಿದಿ, ಅಹಲ್ಯೆಯನ್ನು ಚೆಲುವಿ ಮಾಡಿದಿ, ಎಲ್ಲೋ ಗುಹೆಯಲ್ಲಿ ಮಲಗಿದ್ದ ಮುಚುಕುಂದನಿಗೆ ಕೈವಲ್ಯ ಕೊಟ್ಟಿ ನೀನು ಮಗ್ಗವನ್ನು ಹಾಕಿಲ್ಲ ಬಟ್ಟೆಯನ್ನು ನೇದಿಲ್ಲ, ರೊಕ್ಕವನ್ನೂ ಕೊಟ್ಟಿಲ್ಲ, ಆದರೂ ದ್ರೌಪದಿಗೆ ಅಕ್ಷಯಾಂಬರ ಕೊಟ್ಟಿ. ಎಷ್ಟೆಷ್ಟು ಬಾಯ್‌ಬಿಟ್ಟು ಹೇಳಿಕೊಂಬೆ, ಒಂದಿಷ್ಟು ಬ್ಯಾಸರಿಸದೆ, ಕೇಳಿನ್ನು ಕೇಳುತಲಿ ನಾ ಬೇಡಿದಿಷ್ಟಾರ್ಥ ಫಲ ನೀಡುತಿರೇಕಾಂತ, ನಾವು ನವವಿಧ ಭಕ್ತಿಯಿಂ ನಿನ್ನಾ ನಾಮದಾವಾಗ ಬಿಡದೇ ಸ್ತುತಿಸುತ್ತ, ಸ್ತುತಿಸಿ ಕೊಂಡಾಡುತಿರೆ ದೇವಕಿಸುತ ತಾ ನೊಲಿವ.

ಹೀಗೆ ಆಕೆಯು ವಿಪುಲವಾದ ಸಾಹಿತ್ಯವನ್ನು ಹೇಗೆ ರಚಿಸಿದಳೋ ಅದು ಅವಳಿಗೂ ತಿಳಿಯದು. ಒಂದು ವಿರಾಟ್ ಶಕ್ತಿ ಆಕೆಯ ಅಧಿಷ್ಠಾನದಲ್ಲಿ ನಿಂತು ಬರೆಸಿದೆ ಎನ್ನಿಸುವುದಿಲ್ಲವೆ? ನಿಜವಾಗಿಯೂ ಆಕೆ ಒಬ್ಬ ಸಿದ್ಧ ಪುರುಷರಾಗಿದ್ದಾಳೆ.

ಅವಳು ಮಾಡಿರುವ ಸೀರೆಗಳ ವರ್ಣನೆಯು ಮನಮೋಹಕ. ಅಡುಗೆಗಳ ವಿವರ, ರತ್ನಾಭರಣಗಳ ಕಣ್ಣುಕೋರೈಸುವಿಕೆಯೋ, ಈಗಿನ ಕಾಲದಲ್ಲಿ ಅವುಗಳ ಹೆಸರೂ ತಿಳಿಯದು.

**ಒಂದೆರಡು ಉದಾಹರಣೆಗಳು**

ಸಾರಾವಳೀ ಸೀರೆ, ರಾಗಾವಳೀ ಸೀರೆ, ದ್ವಾರಮನಿ ಸೀರೆ, ಗೋಧಿ ನುಗ್ಗೀ ಸೀರೆ, ಗುಬ್ಬಿಗಣ್ಣಿನ ಸೀರೆ, ಕಡ್ಡಿಪೈಠನಿ ಸೀರೆ, ತಬಕ ಹೂವಿನ ಸೀರೆ ಹೀಗೆ –

Rarest Archiver

ಶುಕ್ರವಾರದ ಹಾಡಿನಲ್ಲಿ ಅಡುಗೆಯ ವೈಶಿಷ್ಟ್ಯವನ್ನು ಕಾಣಬಹುದು.

'ಭಕ್ಷ್ಯ ಶಾವಿಗೆ-ಚಿತ್ರಾನ್ನ ಸಣ್ಣಕ್ಕಿ ಶಾಲ್ಯಾನ್ನ, ಸೂಪಗಳು, ಚಕ್ಕುಲಿ, ಗಿಲಗಂಜಿ, ಉಬ್ಬಿರುವ ಹಪ್ಪಳ, ಸಂಡಿಗೆ, ಆಂಬೊಡೆಗಳು, ಸಕ್ಕರೆ ಘೃತ ಕ್ಷೀರ, ಸಕಲ ಪಕ್ವಾನ್ನ ಮಂಡಿಗೆ, ಗುಳ್ಳೋರಿಗೆ, ಬೀಸೂರಿಗೆ, ಚಂದ್ರನಂತ್ಹೊಳೆವ ಶಾವಿಗೆ ಫೇಣಿ, ಬೂಂದಿ, ಬುರಬುರಿ, ಅನ್ನರಸ, ಬೇಸನ್ನು ಬಿಳಿಯ ದಳೇದುಂಡಿ, ಮೋತೀಚೂರು, ಚುರ್ಮಾ ಲಾಡು, ಜಿಲೇಬಿ, ಹೋಳಿಗಿ, ಎಣ್ಣೂರಿಗೆ, ಹೊಯ್ದೋಸೆ, ಕಾಯಿಹಾಲು, ಹೂರಣ ಕಡುಬು, ಸುರುಳಿ ಹೋಳಿಗಿ, ಉದ್ದಿನಬೇಳೆ, ಮೆಣಸಿನ ಕಾಯಿ, ಇಂಗಿನಿಂದೊಪ್ಪುವ ಕಡಬು, ಸಾರು, ಸಾಂಬಾರು, ಸಾಸಿವೆಕಾಯಿ ಪಲ್ಯ, ಉಪ್ಪೇರಿ, ಉಪ್ಪಿನಕಾಯಿ ರಸ, ಮಾಲತಿ, ಪರಡಿ ಪಾಯಸ ಪರಮಾನ್ನ ಆರು ವಿಧದ ಚಟ್ನಿಗಳು, ಕೋಸಂಬರಿ, ಹಾಗಲಕ ಾಯಿ ಸೌತೇಕಾಯಿ, ಬಾಳೆಕಾಯಿ, ಕುಂಬಳಕಾಯಿ ಹಾಕಿ ಮಾಡಿದ ಮೇಲೋಗರ, ಗೆಣಸು, ಗುಳ್ಳದ ಕಾಯಿಗಳ ಬಜ್ಜಿಗಳು, ನಿಂಬೆಭಾತು, ಸೌತೆ ಭಾತು, ಕೇಸರೀಬಾತು, ಕೆನೆ ಕೆನೆ ಮೊಸರನ್ನ ಇವನ್ನೆಲ್ಲಾ ಲಕ್ಷ್ಮೀದೇವಿಗೆ ನೈವೇದ್ಯ ಮಾಡಿ, ಶುದ್ಧ ಸುಣ್ಣ ಎಲೆ, ಅಡಿಕೆ, ಯಾಲಕ್ಕಿ, ಜಾಕಾಯಿ, ಲವಂಗ, ಕಾಚುಗಳನ್ನು ಕೂಡಿಸಿದ ವೀಳ್ಯವನ್ನು ಕೊಡಬೇಕಂತೆ.

ನಮ್ಮ ಈಗಿನ ನವ ಯುವತಿಯರು ಬ್ಯೂಟಿ ಪಾರ್ಲರ್‌ಗೆ ಹೋಗಿ ಅಥವಾ ಮನೆಯಲ್ಲಾದರೂ ಸರಿಯೆ ಅಂಗಡಿಯಲ್ಲಿ ಮಾರುವ ರಾಸಾಯನಿಕ ಕ್ರೀಮ್‌ಗಳು, ಪೌಡರ್ ಗಳೂ, ತಲೆಗೆ ಉಗುರುಗಳಿಗೆ ಬಣ್ಣ, ಕಣ್ಣಿಗೆ ಕಾಡಿಗೆಯನ್ನೂ ಹಚ್ಚಿಕೊಂಡು ಮುಖಾಲಂಕಾರ ವನ್ನು ಮಾಡಿಕೊಳ್ಳುತ್ತಾರೆ. ಕೆಲವು ಸಮಯದ ಮೇಲೆ ತಲೆಹೊಟ್ಟು, ಕೂದಲು ಉದುರುವುದು, ಮುಖ ಕಪ್ಪಾಗಿಬಿಡುತ್ತದೆ. ಇವರು - ಐದು ಶುಕ್ರವಾರದ ದಿನ ಲಕ್ಷ್ಮೀದೇವಿಯು ಬಡವರ ಮನೆಗೆ ಬರುವಾಗ (ಊಟಕ್ಕೆ) ಎಂತಹ ಅಲಂಕಾರವನ್ನು ಮಾಡಿಕೊಂಡಳು? ಇದನ್ನು ಭೀಮವ್ವ ವರ್ಣಿಸುವುದನ್ನು ಕೇಳಿ. ಇದು ಶುದ್ಧ ಆಯುರ್ವೇದಿಕ್. ನೀವೂ ಮಾಡಿ ನೋಡಿ.

ಮಹಾಲಕ್ಷ್ಮಿಯು ಸೂರ್ಯನು ಮುಳುಗುವ ಕಾಲವನ್ನು ನಿರೀಕ್ಷಿಸಿ ನಂತರ ಪಚ್ಚಕರ್ಪೂರ, ಪುನಗಿನ ಎಣ್ಣೆ, ಸಂಪಂಗಿ ತೈಲ, ಇವುಗಳನ್ನೆಲ್ಲಾ ಬೆರೆಸಿ ಸುಖೋಷ್ಣವಾದ ನೀರಿನಲ್ಲಿ ಅರಿಶಿನ ಹಾಕಿ ಎರೆದುಕೊಂಡಳು. ನಂತರ ತನ್ನ ಸುರುಳಿಗಳನ್ನು ಚೆನ್ನಾಗಿ ಬಾಚಿ, ಬೈತಲೆ ತಿದ್ದಿ ಚಳುಪನ್ನು (ಇದೊಂದು ಒಡವೆ) ಹಾಕಿ, ಚೌರಿ, ರಾಗುಟಿ, ಗೊಂಡ್ಯವನ್ನು ಇಟ್ಟು ಮುಡಿಯನ್ನು ಕಟ್ಟಿದಳಂತೆ. ಆ ಮುಡಿಗೆ ಗಿಳಿಗೆಜ್ಜೆ, ಹೆರಳು ಭಂಗಾರವನ್ನಿಟ್ಟು ಅದರ ಮೇಲೆ ಅರಳು ಮಲ್ಲಿಗೆ ಮಾಲೆ ಮುಡಿದಳು. ಅಚ್ಚ ವಜ್ರದ ಸೆರಗಿದ್ದ ಬಿಳಿಯ ಪೀತಾಂಬರವನ್ನು ಉಟ್ಟು ಕುತ್ತನಿ ಕುಪ್ಪುಸ ತೊಟ್ಟಳು. ಅದಕ್ಕೆ ಮುತ್ತಿನ ಗೊಂಡೆಯಿತ್ತು

Rarest Archiver

ತೋಳುಗಳಿಗೆ ಬಾಜೋಬಂದನ್ನು ಕಟ್ಟಿ ವಜ್ರದ ವಂಕಿ ಇಟ್ಟಳು. ಕೊರಳಲ್ಲಿ ಕೆಂಪಿನ ಮೇಲಡ್ಡಿಕೆ (ನೆಕ್‌ಲೇಸ್), ಹಾಕಿಕೊಂಡಾಗ ಅದು ಥಳಕ್ - ಪಳಕ್ ಎಂದು ಹೊಳೆಯುತ್ತಿತ್ತು. ನಂತರ ಪುತ್ಥಳಿ ಸರ, ಮೋಹನ ಮಾಲೆ, ಕಟ್ಟಾಣಿ, ಪಟ್ಟಿ ಮಾಣಿಕ್ಯದ ಪದಕವನ್ನಿಟ್ಟಳು. ಕೈಗಳಲ್ಲಿ ಕಡಗ ಕಂಕಣಗಳನ್ನು ಧರಿಸಿದಳು. ನಡುವಿಗೆ ನವರತ್ನದ ಪಟ್ಟಿಯನ್ನು ಕಟ್ಟಿದಳು. ಕಿವಿಗಳಿಗೆ ಜಿಡಿ ಮುತ್ತು ಬಿಗಿದಿದ್ದ ವಜ್ರದ ಓಲೆ ಬುಗುಡಿ, ಮುತ್ತಿನ ಸರಪಳಿಗಳನ್ನು ಹಾಕಿಕೊಂಡಳು. ಮೂಗಿನಲ್ಲಿ ಕುಂದಣದ ಮುತ್ತಿನ ಬುಲಾಕನ್ನು ಇಟ್ಟಳು. ಅದರ ತುದಿಯಲ್ಲಿ ವಜ್ರದ ಹರಳಿತ್ತು. ನಂತರ ಕಾಲುಗಳಲ್ಲಿ ಪಿಲ್ಲಿ, ಕಾಲುಂಗುರ, ಪೈಜಣ, ರುಳಿಗಳನ್ನು ಧರಿಸಿದಳು. ಆಮೇಲೆ ಕಣ್ಣುಗಳಿಗೆ ಕಾಡಿಗೆಯನ್ನು ತೇದು ಹಚ್ಚಿದಳು. ಹಣೆಯಲ್ಲಿ ಜೋಳದ ಕುಡಿಯಾಕಾರದಲ್ಲಿ ಕುಂಕುಮವನ್ನು ಮಾಟವಾಗಿ ಹಚ್ಚಿದಳು. ನಂತರ ಕಾಲುಂಗುರಗಳು, ಗೆಜ್ಜೆಗಳು, ಘಲ್ ಘಲ್ ಎಂದು ಶಬ್ದ ಮಾಡುತ್ತಿರಲು, ಲೀಲಾಕಮಲವನ್ನು ಹಿಡಿದು ಈ ಕಡೆ ಆಕಡೆ ಇರುವ ಜನಗಳನ್ನು ಓರೆನೋಟದಿಂದ ನೋಡುತ್ತಾ ಬರುತ್ತಿದ್ದರೆ ಜನಗಳು ಬೆಕ್ಕಸ ಬೆರಗಾಗಿ "ಯಾರಪ್ಪಾ ಈಕೆ? ವೈಕುಂಠದ ಮಹಾಲಕ್ಷ್ಮಿಯಂತಿದ್ದಾಳೆ" ಕೈ ಕೈ ಮುಗಿಯುತ್ತಿದ್ದರು. ಭೀಮವ್ವನ ಕಥನ ಕಾವ್ಯಗಳಲ್ಲಿ ಈ ತರಹದ ವರ್ಣನೆಗಳೆಲ್ಲಾ ಸಂದರ್ಭಾನುಸಾರ ಬರುತ್ತಿರುತ್ತದೆ.

ಭೀಮವ್ವ ಹುಟ್ಟಿದ್ದು ನಾರಾಯಣದೇವರ ಡೇರೆಯಲ್ಲಿ (ಊರಿನ ಹೆಸರು) ಆ ಹಳ್ಳಿಯಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಿದಾಗ ಆ ಗ್ರಾಮದ ಜನರೆಲ್ಲಾ ತಮ್ಮ ತಮ್ಮ ನೆಲೆಗಳನ್ನು ಹುಡುಕಿಕೊಂಡು ಹೋದಂತೆ ಅವಳ ತಾಯಿ ತಂದೆಯರೂ ಹರಪನಹಳ್ಳಿಗೆ ಬಂದುಬಿಟ್ಟರು. ಹರಪನಹಳ್ಳಿಯೇ ಅವರ ನೆಲೆಯಾಯಿತು. ಅಲ್ಲೇ ಆಕೆಗೆ ವಿವಾಹವೂ ಆಯಿತು. ಭೀಮವ್ವ ಅನೇಕ ಕ್ಷೇತ್ರಗಳಿಗೆ ಹೋಗಿದ್ದಳು. ಹೋಗಿದ್ದಾಗ ಅಲ್ಲಿ ಆಯಾ ಮೂರ್ತಿಗಳ ದರ್ಶನ ಮಾಡಿ ಹಾಡುಗಳನ್ನು ಅಲ್ಲೇ ರಚಿಸಿಬಿಡುತ್ತಿದ್ದಳು. ಒಂದು ಸುಂದರವಾದ ಹಾಡು -

## ಎಷ್ಟು ಹೇಳಲೇ ವೆಂಕಟಗಿರಿಯ

**ಎಷ್ಟು ಹೇಳಲೆ ವೆಂಕಟಗಿರಿಯ - ದೃಷ್ಟಿಗೆ ಬಹುಸಿರಿಯ**
**ಬೆಟ್ಟವನೇ ಮನಸಿಟ್ಟೇರಲು ಬೇಡಿ-ದಿಷ್ಟಾರ್ಥಗಳ ನೀಡ್ಯಾಡುವ ಧೊರಿಯ ॥ ಪ ॥**

**ಚಿತ್ರವಿಚಿತ್ರದ ಮಹಾದ್ವಾರ-ಚಿನ್ನದ ಗೋಪುರ**
**ಸ್ವಚ್ಛವಾದ ಸ್ವಾಮಿ ಪುಷ್ಕರಣಿಯ ತೀರಾ-ಸುತ್ತಲಿ ಪ್ರಾಕಾರ।**
**ಹೆಚ್ಚಿನ ಪರ್ವತವೇ ಮನೋಹರ-ಮೂರುವ ವಿಸ್ತಾರ**
**ಚಿತ್ತಜನಾಭನ ಶೈಲವೆ-ದೂರದಿಂದ್ಹತ್ತಿ ಬರುವ್ಹೋದೀತನ ಪರಿವಾರ ॥ 1 ॥**

Rarest Archive

ರತ್ನಮಾಣಿಕ್ಯದ ಕೇಯೂರ - ಕಟ್ಟಿದ ಉಡುದಾರ
ಬಿಟ್ಟಿದ್ದ ನಿಜರ ಪೀತಾಂಬರ - ಕೌಸ್ತುಭಮಣಿಹಾರ
ಗಟ್ಟಿ ಕಂಕಣ ಕುಂಡಲಧಾರ - ಚತುರ್ಭುಜದಲಂಕಾರ।
ವಕ್ಷಸ್ಥಳದಲ್ಲೊಂದಿರುವ
ಶ್ರೀ ಮಹಲಕ್ಷ್ಮೀದೇವಿಯರಿಂದೊಲಿವೋ ಶೃಂಗಾರ ॥ 2 ॥

ಆಕಾಶರಾಜನ ಕಿರೀಟ-ಚಿತ್ರವು ಬಹುಮಾಟ
ಹಾಕಿದ್ದ ಹರಿ ಕಣ್ಣಿನ ನೋಟ - ಭಕ್ತರ ಕುಣಿದಾಟ
ಬೇಕಾದ ಭಜಕರ ಪಡಿಪಾಟ - ಬಿಡಿಸುವ ಯಮಕಾಟ।
ಕೋಟಿ ಜನರ ಓಡ್ಯಾಟವೇ
ನಮ್ಮ ಕಿರೀಟಿಯ ಸಖ ಕೇಶವನ ಮಂದಿರದೊಳೆಷ್ಟೋ ॥ 3 ॥

ತಪ್ಪು ಕಾಣಿಕೆಯ ಬೇಡುವ - ಸರ್ಪಶೈಲದ ತಿಮ್ಮಪ್ಪ
ಕಪ್ಪವೇ ಕಾಸು - ಚಾವಡಿ ಮುಡುಪಾ - ಹಾಕದೆ ತಾನೊಪ್ಪ
ಜಪ್ಪಿಸಿ ನೋಡುವ ಜನರಾ ತಪ್ಪಾ - ಹುಡುಕಾಡುತಲಿಪ್ಪ
ಅಪ್ರತಿ ಮಹಿಮಾ
ಅನಂತಮೂರುತಿ ತಾನೊಪ್ಪಿದರೊಲಿದು ಕೊಡುವ ಸಾರೋಪ್ಯ ॥ 4 ॥

ದೇಶ ದೇಶದೊಳೀತನ ಖ್ಯಾತಿಯು - ತುಂಬಿದ ಕೀರ್ತಿಯು
ಆಸೆಯ ದೈವಾ ಈ ಮೂರುತಿಯು - ಫಲ್ಗುಣ ಸಾರಥಿಯು।
ಲೇಸಾಗಿ ನೋಡುವರತಿಯು - ಕರ್ಪೂರದಾರಲೆಯು ವಾಸವಾಗಿರುವ
ಈ ಶೇಷಾದ್ರಿಯಲಿ ಭೀಮೇಶ ಕೃಷ್ಣ ಕೃಪಾಳು ॥ 5 ॥

## ಭೀಮವ್ವನವರ ಕೃತಿ - ನಾರಾಯಣ ನಾಮಾವಳಿ

"ನಾರಾಯಣ ನಮ್ಮ ನಾಲಿಗೇಲಿರಲಿ ನಾರಾಯಣ
ಘೋರಪಾತಕವೆಲ್ಲ ಹಾರಿಹೋಗುವುದಯ್ಯ ನಾರಾಯಣ"

.................. ಎಂಬ ಸ್ತೋತ್ರ ರೂಪವಾದ ಈ ಹಾಡಿನಲ್ಲಿ ಅವ್ವನವರು ಭಗವಂತನ ನಾನಾ ರೂಪಗಳ ನಾನಾ ಅವತಾರಗಳ, ಭಗವದ್ಭಕ್ತರನ್ನು ಪಾಲಿಸುವ ವಿವರಗಳ, ಭಾರತ, ಭಾಗವತ, ರಾಮಾಯಣ ಮುಂತಾದ ಗ್ರಂಥಗಳಿಂದ ಆಯ್ದ ಬಗೆ ಬಗೆಯ ಲೀಲೆಗಳನ್ನು ಎಳೆ ಎಳೆಯಾಗಿ ಬಿಡಿಸಿ ಪ್ರತಿ ನುಡಿಯಲ್ಲೂ ಕೊನೆಗೆ ನಾರಾಯಣ ಶಬ್ದವನ್ನು ಇಟ್ಟು 54

Rarest Archive

ನುಡಿಗಳಲ್ಲಿ ''ಸಾಸಿರಮುಖ ಶೇಷನಲ್ಲೆ ಶಯನವು ಮಾಡೆ । ಭೀಮೇಶ ಕೃಷ್ಣನ ನೆನೆಕಂಡ್ಯ ಮನವೇ ನಾರಾಯಣ'' ಎಂದು ಮುಗಿಸಿದ್ದಾರೆ.

ತನ್ನ ಇಡೀ ಜೀವನದಲ್ಲಿ ಭಗವಂತನು ತನಗೊಪ್ಪಿಸಿದ ಕಾರ್ಯಗಳನ್ನು ನಿಷ್ಠೆಯಿಂದ, ಪ್ರೀತಿಯಿಂದ, ಆನಂದದಿಂದ ಮುಗಿಸಿ ತೃಪ್ತಿಗೊಂಡ ಎಲ್ಲ ಸುಜೀವರೂ ಕೊನೆಗೆ ತಮ್ಮ ಮುಪ್ಪಿನಲ್ಲಿ ಶ್ರೀಹರಿಯ ಧ್ಯಾನವನ್ನೇ ಮಾಡುತ್ತ ''ಭವದ ಈ ಭವಣೆ ಸಾಕು, ನಾನು ಮಾಡಬೇಕಾದ ಕೆಲಸಗಳನ್ನೇ ನಿನಗರ್ಪಣೆ ಮಾಡಿದ್ದೇನೆ. ಇನ್ನು ಇದರಿಂದ ನನಗೆ ಮುಕ್ತಿಯನ್ನು ಕೊಡು ಎಂದು ಬೇಡುವುದು ಸಹಜ''. ಭೀಮವ್ವನವರ ಈ ಕೃತಿಯನ್ನು ನೋಡಿ:

**ಸಾಕು ನರಹರಿ, ಭವಣೆಯಿಂದ್ಯಾಕೆ ಬಳಲಿಸುವಿ ಶ್ರೀಹರೀ**
**ಶ್ರೀ ಕಮಲಪತಿ, ಶರಣಜನರೊಳಗ್ಯಾರಿ ಪೊರೆಯೆನ್ನ ಹರಿ ಹರೀ ॥ ಪ ॥**

**ದೊರೆಯೆ, ನೀನಿರಲನ್ಯರಿಗೆ ಬಾಯ್ತೆರೆಯಲ್ಯಾಕಿನ್ನು ಹರಿ ಹರೀ**
**ಪರಮ ಆಪ್ತ ನೀನಿರಲು ಕಾಣದೆ ಪರರಿಗಾಲ್ಪರಿಯೇ ಹರಿ ಹರೀ ॥ 1 ॥**

**ಪುತ್ಥಳಿ ಮನೆಯಲ್ಲಿ ಇರಲು ಹಿತ್ತಾಳೆ ಬಯಸುವೆನು ಹರಿ ಹರೀ**
**ಬಿಟ್ಟು ನಿನ್ನೀಗನ್ಯ ವಿಷಯದಿಂದ್ಹುಟ್ಟುವುದೇ ಸುಖ ಹರಿ ಹರೀ ॥ 2 ॥**

**ಬೇಡಿದ್ವರಗಳ ಕೊಡುವೋ ಭೀಮೇಶ ಕೃಷ್ಣ ನೀನಿರಲು ಹರೀ ಹರೀ**
**ನೋಡಿ ಸುಖಿಸದೇ ಬಿಟ್ಟು ಕನ್ನಡಿಗ್ವಾಡಿಗಡರುವೆನ್ಹರೀ ಹರೀ ॥ 3 ॥**

ಎಲ್ಲ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮುಗಿಸಿ ಕೊನೆಗೆ ತಂಗಿಯ ಮನೆಗೆ ಬಂದರು. ವೃದ್ಧಾಪ್ಯದ ದೇಹಾಲಸ್ಯದಲ್ಲೂ ಒಂದು ಘಳಿಗೆ ಹರಿಯ ನಾಮವನ್ನು ಬಿಡಲಿಲ್ಲ. ತಾನು ದಿವಂಗತಳಾಗಲು ಇನ್ನು ಐವತ್ತು ದಿನಗಳಿರುವಾಗ ಭೀಮವ್ವ ''ಚೆನ್ನ ಚಾವಡಿ ಮೇಲೆ ಪನ್ನಂಗಶಯನಾದರೂ ಮಾನ್ಯ ಎನ್ಯಾರೂ ಮುಕ್ತರೂ ಮುತ್ತುವ ನೋಡುತ್ತಲಿ ಮತ್ಯಾರ ಭಯವೂ ನಮಗಿಲ್ಲ'' ಎಂಬ ಐದು ನುಡಿ ಹಾಡನ್ನು ಬರೆಸಿ ಶ್ರೀಹರಿಗೆ ಸಮರ್ಪಿಸಿದರು. ಇನ್ನೇನು ಹೊರಡುತ್ತಾರೆ ಎನ್ನುವಾಗ ಗಂಗಾಧರಸುತ ಗಣಪತಿ ಚರಣಕ್ಕೆ ಎರಗುವೇ ಎಂದು ಹೇಳುತ್ತಾ ತೀವ್ರ ಬಳಲಿ ನಾರಾಯಣ, ನಾರಾಯಣ'' ಎಂದರು. ಹೀಗೆ ದಾಸ ಸಾಹಿತ್ಯ ರಚನೆಯನ್ನು ಮಾಡಿ ಬೆಳಗುತ್ತಿದ್ದ ಜ್ಯೋತಿಯೊಂದು ಮಹಾಜ್ಯೋತಿಯಲ್ಲಿ ಲೀನವಾಯಿತು. ಈಕೆ ಹುಟ್ಟಿದ್ದು ಸ್ವಭಾನು ಸಂವತ್ಸರದ ಜ್ಯೇಷ್ಠ ಬಹುಳ ತ್ರಯೋದಶಿಯಿಂದ. ಲೀನವಾದದ್ದು ಶುಭಕೃತನಾಮ ಸಂವತ್ಸರ ಪೌಷ ಶುದ್ಧ ತ್ರಯೋದಶಿ ಮುಕ್ಕೋಟಿ ದ್ವಾದಶಿ ಮಧ್ಯಾಹ್ನ.

Rarest Archive

# ಓರವಾಯಿ ಲಕ್ಷ್ಮೀದೇವಮ್ಮನವರು (1865-1950)

ಬಳ್ಳಾರಿಯಲ್ಲಿ ಸುಪ್ರಸಿದ್ಧವಾದ ಕೆಲವು ವೈಷ್ಣವ ಮನೆತನಗಳಿವೆ. ಇವು ಸೊಂಡೂರು, ಓರವಾಯಿ, ಗಂಗಾವತಿ, ಬಾದನಹಟ್ಟಿ, ಸೋಮಸುಂದರಂ, ಧಾರವಾಡ ಮತ್ತು ದೊಡ್ಡಿ. ಸೊಂಡೂರು ಒಂದು ಪುಟ್ಟ ಕನ್ನಡದ ಸಂಸ್ಥಾನವಾಗಿತ್ತು. ಇಲ್ಲಿನ ರಾಜರು ದೈವಭಕ್ತರು. ಪ್ರಜಾಪಾಲಕರು. ಇಲ್ಲಿ ಲಕ್ಷ್ಮಣರಾಯರು ಎಂಬುವರು ದಿವಾನರಾಗಿದ್ದರು. ಇವರ ಧರ್ಮಪತ್ನಿಯ ಹೆಸರು ಗೋದಾವರಿ ಬಾಯಿ. ಈ ದಂಪತಿಗೆ 1865ನೇ ಇಸವಿಯಲ್ಲಿ ಒಂದು ಹೆಣ್ಣು ಮಗು ಹುಟ್ಟಿತು. ಈ ಮಗುವಿಗೆ ಲಕ್ಷ್ಮೀದೇವಿ ಎಂದು ನಾಮಕರಣ ಮಾಡಿದರು.

ಮಗು ನೋಡಲು ತುಂಬಾ ಅಂದವಾಗಿತ್ತು. ಬಾಲ ಸಹಜವಾದ ಆಟಪಾಟಗಳಿಂದ ಜನಗಳ ಮನಸ್ಸನ್ನು ಸೂರೆಗೊಳಿಸುವಂತಿತ್ತು. ತಾಯಿ-ತಂದೆಗಳು ಮಗುವನ್ನು ನೋಡಿ ಹಿರಿಹಿರಿ ಹಿಗ್ಗುತ್ತಿದ್ದರು. ಮಗು ಐದು ವರ್ಷದವಳಾಗಿದ್ದಾಗಲೇ ತಂದೆ-ತಾಯಿಗಳು ಹುಡುಗಿಯ ಸೋದರಮಾವನಾದ, ಹನ್ನೊಂದು ವಯಸ್ಸಿನ ಓರವಾಯಿ ಮಧ್ವರಾಯನೊಂದಿಗೆ ಈಕೆಯ ಮದುವೆಯನ್ನು ಮಾಡಿದರು. ಆಗಿನ ಕಾಲದಲ್ಲಿ ಇಂತಹ ಬಾಲ್ಯವಿವಾಹಗಳು ಚಾಲ್ತಿಯಲ್ಲಿದ್ದುವು.

ಕನ್ಯೆಯು ಬೆಳೆಯುತ್ತಿದ್ದಂತೆ ತಾಯಿಯು ಅವಳಿಗೆ ತಮ್ಮ ಪರಂಪರೆ, ಕುಲಾಚಾರ, ಸಂಪ್ರದಾಯದ ಹಾಡು-ಹಸೆಗಳನ್ನು ಆಚಾರ-ವಿಚಾರ ನೇಮ-ನಿಷ್ಠೆಗಳನ್ನೆಲ್ಲಾ ಕಲಿಸಿಕೊಡುತ್ತಿದ್ದರು. ಮದುವೆಯಾಗಿದ್ದ ಹುಡುಗಿಗೆ ಇವೆಲ್ಲಾ ಅವಶ್ಯಕವಾಗಿ ಬೇಕಾಗಿತ್ತು. ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಆದ್ದರಿಂದ ತಂದೆಯೇ ಅವಳಿಗೆ ಕನ್ನಡ ಮತ್ತು ಸಂಸ್ಕೃತವನ್ನು ಹೇಳಿಕೊಡುತ್ತಿದ್ದರು. ಹುಡುಗಿ ಬಹಳ ಚೂಟಿಯಾಗಿದ್ದರಿಂದ ಬಹಳ ಬೇಗನೆ ಗ್ರಹಿಸುತ್ತಿದ್ದಳು. ವಿಧವಿಧವಾದ ರಂಗೋಲಿಗಳನ್ನು ಹಾಕುವುದು, ಕೈ ಕೆಲಸಗಳನ್ನು ಮಾಡುವುದು, ಕಸೂತಿ, ಮುಂತಾದವುಗಳನ್ನು, ಆಗ ಹರಪನಹಳ್ಳಿಯ ಭೀಮವ್ವನವರು ರಚಿಸಿದ ಹಾಡುಗಳನ್ನೂ ಕಲಿಯುತ್ತಿದ್ದಳು. ಇಲ್ಲಿ ಈಕೆ ಹೀಗೆ ಕಲಿಯುತ್ತಿದ್ದಾಗ ಮಧ್ವರಾಯರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಗುತ್ತಿಯಲ್ಲಿ ವಕಾಲತ್ತನ್ನು ಪ್ರಾರಂಭಿಸಿದರು. ಪ್ರಾಪ್ತ ವಯಸ್ಕಳಾಗಿದ್ದ ಲಕ್ಷ್ಮೀದೇವಿಯು ಪತಿಗೃಹವನ್ನು ಸೇರಿದಳು. ಮಧ್ವರಾಯರು ಗುತ್ತಿಯಲ್ಲಿ ಗಣ್ಯ ವಕೀಲರೆಂದು ಪರಿಗಣಿಸಲ್ಪಟ್ಟಿದ್ದರು. ಸ್ವಲ್ಪ

Rarest Archive

ಕಾಲದನಂತರ ಅವರೀರ್ವರಿಗೊಂದು ಗಂಡುಮಗು ಹುಟ್ಟಿತು. ಶಿಶುವಿಗೆ ಒಂದು ವರ್ಷವಾಗಿರುವಾಗಲೇ ಅದರ ಆಯಸ್ಸು ಮುಗಿದು ಹೋಯಿತು.

ದಂಪತಿಗಳಿಗೆ ಇದರಿಂದ ಅತೀವ ದುಃಖವಾಯಿತು. ತರುಣರಾದ ಇವರು ಇನ್ನೂ ಮಕ್ಕಳನ್ನು ಪಡೆಯಬಹುದಿತ್ತು. ಇವರ ಹಿಂದಿನ ತಲೆಮಾರುಗಳಲ್ಲೆಲ್ಲಾ ಒಬ್ಬೊಬ್ಬ ಮಗನೇ ಇದ್ದುದನ್ನು ಕಂಡು ಇವರಿಗೆ ಇನ್ನು ಮುಂದೆ ತಮಗೆ ಮಕ್ಕಳಾಗುವುದೇ ಇಲ್ಲ ಎಂದು ತಮ್ಮ ವಂಶವಾಹಿನಿಯನ್ನು ಮುಂದುವರೆಸಿಕೊಂಡು ಹೋಗಲು ದತ್ತು ಸ್ವೀಕಾರವೇ ಯೋಗ್ಯವೆಂದು ತಿಳಿದು, ಮಧ್ವರಾಯರು ತಮ್ಮ ತಂಗಿಯಾದ ಭಾಗಮ್ಮ ಮತ್ತು ಅವರ ಪತಿ ಗಂಗಾವತಿ ರಾಘವೇಂದ್ರರಾಯರ ಮನವೊಲಿಸಿ ಅವರ ಕೊನೆಯ ಮಗ ಕೃಷ್ಣಮೂರ್ತಿಯನ್ನು ದತ್ತಕ ಮಾಡಿಕೊಳ್ಳಲು ನಿರ್ಣಯಿಸಿ, ಅದರಂತೆ ಒಂದು ಶುಭ ದಿನದಲ್ಲಿ ಬಂಧು ಬಾಂಧವರನ್ನೆಲ್ಲಾ ಬರಮಾಡಿಕೊಂಡು ದತ್ತಕ ಹೋಮ ಇತ್ಯಾದಿಗಳನ್ನು ಮಾಡಿಕೊಂಡು ಎಲ್ಲರ ಸಮಕ್ಷಮದಲ್ಲಿ ಆ ಬಾಲಕನನ್ನು ಮಗನೆಂದು ಸ್ವೀಕಾರ ಮಾಡಿಕೊಂಡರು.

ಗುತ್ತಿಯಲ್ಲಿ ನೆಲೆಸಿದ್ದುದರಿಂದ ಲಕ್ಷ್ಮೀದೇವಮ್ಮನನ್ನು ಬಂಧು ಬಾಂಧವರೆಲ್ಲಾ 'ಗುತ್ತೆವ್ವ'ನೆಂದೇ ಪ್ರೀತಿಯಿಂದ ಕರೆಯುತ್ತಿದ್ದರು. ಕೆಲವು ಕಾಲದ ನಂತರ ಮಧ್ವರಾಯರು ತಮ್ಮ ವಾಸ್ತವ್ಯವನ್ನು ಆದವಾನಿಗೆ ಬದಲಾಯಿಸಿದರು. ಆದವಾನಿಗೆ 'ಯಾದಗಿರಿ' ಎಂಬ ಹೆಸರಿದೆ. ಇಲ್ಲಿನ ಕ್ಷೇತ್ರದೇವತೆ ಶ್ರೀ ವ್ಯಾಸರಾಜ ಪ್ರತಿಷ್ಠಿತ ಆಂಜನೇಯ ಸ್ವಾಮಿ. ಈ ಸ್ವಾಮಿಗೆ ಮಂಗರಾಯನೆಂಬ ಹೆಸರೂ ಇದೆ. ಮಂಗರಾಯನ ಜಾತ್ರೆ ಬಹಳ ಪ್ರಸಿದ್ಧವಾದುದು. ಇನ್ನೊಂದು ಪುರಾತನ ದೇವಾಲಯ ಊರಿನ ಮಧ್ಯದಲ್ಲಿದೆ. ಅದು ಮಂಗಳಾಪುರ ಹನುಮಂತನ ಮಂದಿರ. ಆದವಾನಿ ಪ್ರಾಂತವು ಮುಸಲ್ಮಾನರಿಗೆ ಸೇರಿದುದಾಗಿದ್ದಿತು. ಆದವಾನಿಯಲ್ಲಿ ಮಧ್ವರಾಯರು ಪ್ರಸಿದ್ಧವಾದ ವಕೀಲರಾಗಿದ್ದರು. ಸಂಘಜೀವಿಗಳಾಗಿದ್ದರು, ರಸಿಕರಾಗಿದ್ದರು. ಕಲಾವಿದರಿಗೆ ಬಹಳ ಪ್ರೋತ್ಸಾಹ ಕೊಡುತ್ತಿದ್ದರು. ಮುಖ್ಯವಾದ ಸಂದರ್ಭಗಳಲ್ಲಿ ಚಪ್ಪರ ಹಾಕಿಸಿ ಸಂಗೀತ, ಹರಿಕಥೆ, ಗಳನ್ನೇರ್ಪಡಿಸುತ್ತಿದ್ದರು. ಆದವಾನಿಗೆ ಬರುವ ನಾಟಕ ಕಂಪೆನಿಗಳಿಗೆ ಪ್ರೋತ್ಸಾಹ ಕೊಡುತ್ತಿದ್ದರು. ನೆರವಾಗುತ್ತಿದ್ದರು. ಕೆಲವು ಸಮಯಗಳಲ್ಲಿ ಸುಶಿಕ್ಷಿತರಾದ ತಮ್ಮ ಸ್ನೇಹಿತರೊಂದಿಗೆ ನಾಟಕಗಳಲ್ಲಿ ತಾವೂ ಭಾಗವಹಿಸುತ್ತಿದ್ದರು. ಲಕ್ಷ್ಮೀದೇವಮ್ಮನವರು ತಮ್ಮ ಪತಿಯ ಸಕಲ ಕಾರ್ಯಗಳಲ್ಲೂ ನೆರವು ನೀಡುತ್ತಿದ್ದರು.

ಲಕ್ಷ್ಮೀದೇವಮ್ಮನವರು ನೋಡಲು ತುಂಬಾ ಸುಂದರಿಯಾಗಿದ್ದರಂತೆ. ಕೇದಿಗೆಯ ಮೈ ಬಣ್ಣ, ವಿಶಾಲವಾದ ದಯಾಪೂರಿತ ನೇತ್ರಗಳು. ಭಕ್ತಿಯನ್ನೇ ಮೈಗೂಡಿಸಿಕೊಂಡ ಮಟ್ಟಸವಾದ ದೇಹಪುಷ್ಟಿ, ಮಾಧ್ವ ಸಂಪ್ರದಾಯದಂತೆ ಹಣೆಗೆ ಉದ್ದವಾದ ತಿಲಕವನ್ನಿಟ್ಟು,

Rarest Archiver

ಹದಿನೆಂಟು ಮೊಳದ ಸೀರೆಯನ್ನು ಮಾಟವಾಗಿ ಕಚ್ಚೆ ಹಾಕಿ ಉಟ್ಟು, ನಿಲುವಾಭರಣಗಳನ್ನು ಧರಿಸುತ್ತಿದ್ದ ಲಕ್ಷ್ಮೀದೇವಮ್ಮ ಸಾಕ್ಷಾತ್ ಲಕ್ಷ್ಮೀದೇವಿಯಂತೆಯೇ ಕಾಣುತ್ತಿದ್ದರಂತೆ. ಅವರ ಆಶ್ರಯದಲ್ಲಿ ಅನೇಕ ಕುಟುಂಬಗಳು ಬಾಳಿ ಬದುಕುತ್ತಿದ್ದುವಂತೆ. ಅವರ ಮನೆ ಅನ್ನದಾನ – ವಿದ್ಯಾದಾನಗಳ ಕೇಂದ್ರವಾಗಿತ್ತು.

ಹರಿ ಗುರುಗಳ ಸೇವೆಯೆಂದರೆ ಲಕ್ಷ್ಮೀದೇವಮ್ಮನವರಿಗೆ ಚತುರ್ಭುಜವಾಗುತ್ತಿತ್ತು. ಸ್ವತಃ ತಂದೆಯವರಿಂದಲೇ ಇವರಿಗೆ ಕನ್ನಡ ಮತ್ತು ಸಂಸ್ಕೃತಗಳ ಕ್ರಮಬದ್ಧವಾದ ವಿದ್ಯಾಭ್ಯಾಸವಾಗಿತ್ತು. ಮಣಿಮಂಜರಿ, ಮಧ್ವವಿಜಯ ಮುಂತಾದ ಗ್ರಂಥಗಳ ಪರಿಚಯವಾಗಿತ್ತು. ಆಗಿನ ಉತ್ತರಾದಿಮಠದ ಸ್ವಾಮಿಗಳಾಗಿದ್ದ, ಶತಮಾನದ ಅದ್ವಿತೀಯ ಪಂಡಿತರಾಗಿದ್ದ, ಪ್ರತಿವಾದಿಗಳನ್ನು ಅನಾಯಾಸವಾಗಿ ನಿಗ್ರಹ ಮಾಡುತ್ತಿದ್ದ ಸಾವಿರಾರು ಶಿಷ್ಯರನ್ನು ಅನ್ನ – ವಸತಿ ಕೊಟ್ಟು ಪೋಷಿಸಿ ಅವರನ್ನು ಶ್ರೇಷ್ಠ ವಿದ್ವಾಂಸರನ್ನಾಗಿ ತಯಾರು ಮಾಡುತ್ತಿದ್ದ, ಭಕ್ತಜನ ವತ್ಸಲರಾಗಿದ್ದ ಸತ್ಯಧ್ಯಾನತೀರ್ಥ ಮಹಾಸ್ವಾಮಿಗಳು ಅವ್ವನವರ ಸದ್ಗುಣಗಳಿಂದ ಸಂತೋಷ ಪಟ್ಟವರಾಗಿ ಅವರ ಮೇಲೆ ವಿಶೇಷ ಅನುಗ್ರಹ ಮಾಡುತ್ತಿದ್ದರು. ಅಲ್ಲದೆ ಮಂತ್ರಾಲಯದ ಗುರುಸಾರ್ವಭೌಮರಲ್ಲಿ ಅವ್ವನಿಗೆ ಬಹಳ ಭಕ್ತಿ. ರಾಘವೇಂದ್ರ ಮಠದ ಶ್ರೀ ಸುಶೀಲೇಂದ್ರ ಹಾಗೂ ಸುಯಮೀಂದ್ರ ಶ್ರೀಗಳೂ ಸಹ ಅವ್ವನವರ ನಿಷ್ಠೆ, ದಯೆ, ವಾತ್ಸಲ್ಯ ಮತ್ತು ಭಕ್ತಿಗಳನ್ನು ಕಂಡು ಇವರ ಮೇಲೆ ಹೆಚ್ಚಿನ ವಿಶ್ವಾಸ ತೋರಿಸುತ್ತಿದ್ದರು. ದೊಡ್ಡ ದೊಡ್ಡ ಪಂಡಿತರು ಇವರ ಮನೆಯಲ್ಲಿ ಸೇರುತ್ತಿದ್ದರು. ಮೇಲಿಂದ ಮೇಲೆ ಮಠಾಧಿಪತಿಗಳ ದರ್ಶನ ಮತ್ತು ಸೇವಾ ಪಂಡಿತ ಪ್ರಕಾಂಡರಿಂದ ನಡೆಯುತ್ತಿದ್ದ ವಿದ್ವತ್ ಗೋಷ್ಠಿಗಳು, ಸ್ವಯಂ ಪಠಣ ಮಾಡಿದ್ದ ಶಾಸ್ತ್ರಗ್ರಂಥಗಳು ಇವೆಲ್ಲಾ ಒಗ್ಗೂಡಿಸಿದ್ದುವು. ಜೊತೆಗೆ ಒಂದು ಸಲ ಅವ್ವನವರು ಆಗಿನ ಸೋದೆ ಸ್ವಾಮಿಗಳ ಪರ್ಯಾಯ ಸಂದರ್ಭಕ್ಕಾಗಿ ಹೋಗಿದ್ದಾಗ ಅಲ್ಲಿ ಬಂದು ಬೀಳುತ್ತಿದ್ದ ತರಕಾರಿ ರಾಶಿಗಳನ್ನೂ, ಈಳಿಗೆಗಳನ್ನು ಮುಂದಿಟ್ಟುಕೊಂಡು ಸುಮಂಗಲಿಯರು ಅವುಗಳನ್ನು ಹೆಚ್ಚುತ್ತಿದ್ದ ಸಂಭ್ರಮವನ್ನು ನೋಡಿ ಅವ್ವನವರು ನೋಡಿ ದಿವ್ಯಾನಂದಗೊಂಡು ಆಗಲೇ ಒಂದು ಪದವನ್ನು ರಚಿಸಿದರಂತೆ. ಸ್ವಾಮಿಗಳು ಬಹಳ ಸಂತೋಷಪಟ್ಟು ಸಾಯಂಕಾಲದಲ್ಲಿ ಅವ್ವನವರನ್ನು ಕರೆಸಿ ಆ ಸಭೆಯಲ್ಲಿ ಮತ್ತೆ ಹಾಡಿಸಿ ಫಲಮಂತ್ರಾಕ್ಷತೆಗಳನ್ನು ದಯಪಾಲಿಸಿದರಂತೆ.

'ಮುನ್ನ ಮಾಡಿದ ಕರ್ಮ ಬೆನ್ನ ಬಿಡದು' ಎಂಬಂತೆ ಅವ್ವನವರ ಐವತ್ತೆರಡನೆಯ ವಯಸ್ಸಿನಲ್ಲಿ ಆಕೆಯ ಮಾಂಗಲ್ಯ ಹರಣವಾಯ್ತು. ಮೊದಲೇ ಭಗವತ್ ಸೇವಾಸಕ್ತರೂ, ವಿರಕ್ತರೂ ಆಗಿದ್ದ ಅವರ ಮನಸ್ಸು ಇನ್ನೂ ವಿರಕ್ತವಾಯಿತು. ನಂತರ ಅವರು ಬಳ್ಳಾರಿಗೆಬಂದು ನೆಲೆಸಿದರು.

Rarest Archiver

'ಅವ್ವನವರು ಮಾನವ ಸೇವೆಯೇ ಮಾಧವ ಸೇವೆ' ಎಂದು ತಿಳಿದಿದ್ದರು. ಅವರಿಗೆ ಗೃಹವೈದ್ಯವು ಚೆನ್ನಾಗಿ ಗೊತ್ತಿದ್ದಿತು. ಆಕೆ ಆಯುರ್ವೇದ ರೀತಿಯಲ್ಲಿ ಅನೇಕ ಔಷಧಿಗಳನ್ನು ಮಾಡಿಟ್ಟುಕೊಂಡು ಯಾವುದೇ ಪ್ರತಿಫಲಾಪೇಕ್ಷತೆಯಿಲ್ಲದೆ ಎಲ್ಲರಿಗೂ ಕೊಡುತ್ತಿದ್ದರಂತೆ. ಅವ್ವನವರು ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದ್ದರು. ತಿರುಪತಿ, ಮಂಗಳಗಿರಿ, ಶ್ರೀಶೈಲ, ಉಡುಪಿ, ಸ್ವಾದಿ ಹೀಗೆ. ಆಯಾ ತೀರ್ಥಕ್ಷೇತ್ರದ ದೇವಮೂರ್ತಿಗಳ ಬಗ್ಗೆ ಹಾಡುಗಳನ್ನು ರಚಿಸಿದರು.

ಅವ್ವನವರದು ಭಾವುಕ ಹೃದಯವಾಗಿತ್ತು. ಶಾಸ್ತ್ರಗಳ ಶ್ರವಣ, ವ್ರತ, ಹರಿಗುರುಗಳ ಮತ್ತು ಜನತಾ ಸೇವೆಯಿಂದ ಶರೀರ ಸಂಸ್ಕಾರಗೊಂಡಿತ್ತು. ಹರಿ ಗುರುಗಳ ವಿಶೇಷ ಅನುಗ್ರಹವಿತ್ತು. ಕುಟುಂಬದವರ ಅಕ್ಕರೆಯಿತ್ತು. ಇವೆಲ್ಲಾ ಒಟ್ಟುಗೂಡಿ ಅದೂ ದೇವಾಲಯ ನಿರ್ಮಾಣದ ನಂತರ ಆಕೆಯಲ್ಲಿ ಸುಪ್ತವಾಗಿದ್ದ ಕಾವ್ಯ ತುಂಗಭದ್ರೆ ಉಕ್ಕಿ ಹರಿಯತೊಡಗಿದಳು. ಒಮ್ಮೆ ಕಿರಿದಾದ ತೊರೆಯಂತೆ, ಭೋರ್ಗರೆವ ಜಲಪಾತದಂತೆ ಸಾಗರದ ವಿಶಾಲತೆಯಂತೆ, ಅಗಾಧತೆಯಿಂದ, ತುಂಬು ಗಂಭೀರದಿಂದ ಆಕೆಯ ಸಾಹಿತ್ಯ ಓತಪ್ರೋತವಾಗಿ ಹರಿಯತೊಡಗಿತು. ನಿಂತರೆ, ಕೂತರೆ, ನೋಡಿದ್ದು, ಕೇಳಿದ್ದು ಎಲ್ಲಾ ಕಾವ್ಯವಾಗತೊಡಗಿದವು. ಇದೇ ಸಮಯದಲ್ಲೆ ಹರಪನಹಳ್ಳಿಯಲ್ಲಿ ಭೀಮವ್ವನವರು ಇದ್ದರು. ಅವರು ಅವ್ವನವರಿಗಿಂತ ವಯಸ್ಕರಾಗಿದ್ದರು. ಅವ್ವನವರ ಹಾಡುಗಳು ಲಕ್ಷ್ಮೀದೇವಮ್ಮನವರ ಮೇಲೆ ಸಹಜವಾಗಿ ಬಿದ್ದಿರಬಹುದು. ಎಂದಲೋ ಭೀಮವ್ವನವರು ರಚಿಸಿದಂತೆ ಲಕ್ಷ್ಮೀದೇವಮ್ಮನವರೂ ಸಹಾ, ಶುಕ್ರವಾರದ ಹಾಡು, ಶನಿವಾರದ ಹಾಡು ಮಂಗಳಗೌರೀ ಹಾಡು, ಕೃಷ್ಣದಾನಾ ವ್ರತ, ಚೇಳಿನ ಹಾಡುಗಳನ್ನು ರಚಿಸಿದ್ದಾರೆ. ವಿಷಯು ಒಂದೇ ಆದರೂ ನಿರೂಪಣೆ ಮತ್ತು ಶೈಲಿಗಳಲ್ಲಿ ಭಿನ್ನತೆಗಳಿವೆ. ಬಳ್ಳಾರಿಯ ಗಡಸುತನದ ಸೊಗಡಿದೆ, ಅನೇಕ ತೆಲುಗು ಶಬ್ದಗಳು ಬೆರೆತು ಕನ್ನಡದ ಶಬ್ದಗಳಂತಾಗಿವೆ. ಭಾಷೆ ಹೃದಯಂಗಮ ಹಾಗೂ ಶುದ್ಧ ಪ್ರಾದೇಶಿಕವಾಗಿದೆ.

ಅವ್ವನವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಆಗಿನವರು ಈಗಿನವರಂತೆ ಬರೆದಿಡುವ ಅಭ್ಯಾಸ ಮಾಡಿಕೊಂಡಿರಲಿಲ್ಲ. ರಚನೆಗಳು ಬಾಯಿಂದ ಬಾಯಿಗೆ ಹರಿದು ಬರುತ್ತಿದ್ದವು. ಅನೇಕ ದೇವರನಾಮಗಳನ್ನು ಅವ್ವನವರು ಬರೆದಿದ್ದಾರೆ. ದೇವರನಾಮಗಳು, ರಾಯರ ಮೇಲಿನ ಹಾಡುಗಳು, ಗೊಲ್ಲತಿ ಹಾಡು, ರಾಮದೇವರ ಕಥೆ, ವರಮಹಾಲಕ್ಷ್ಮಿಯ ಹಾಡು, ಶನಿಮಹಾತ್ಮೆ,ಜಲಕ್ರೀಡೆ ಹಾಡು, ಸಕ್ಕೂಬಾಯಿ ಚರಿತ್ರೆ, ವಾಮನನ ಹುಟ್ಟು– ಹೀಗೆ ಅನೇಕ ರಚನೆಗಳನ್ನು ಆಯಾ ಕ್ಷೇತ್ರಗಳ ದೇವತೆಗಳ ಮೇಲೆ ರಚಿಸಿದ ಹಾಡುಗಳು. ತಿರುಪತಿಯಲ್ಲಿ ಶ್ರೀನಿವಾಸ ಕಲ್ಯಾಣ, ಭದ್ರಾಚಲದಲ್ಲಿ

Rarest Archiver

ಶ್ರೀರಾಮನ ಕಥೆ, ಉಡುಪಿಯಲ್ಲಿ ಸುಧಾಮಚರಿತ್ರೆ, ಗೋಪೀ ಗೀತೆ, ರಾಸಗೀತೆ, ಗೋಕರ್ಣ ಮಹಾಬಲೇಶ್ವರ ಸ್ತೋತ್ರ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಸ್ತೋತ್ರ, ಪಾತಾಳ ಗಂಗಾಸ್ತೋತ್ರ ಸ್ವಾದಿಯಲ್ಲಿ ಶ್ರೀ ವಾದಿರಾಜರ, ಭೂತರಾಜರ, ತ್ರಿವಿಕ್ರಮದೇವರ ಸ್ತೋತ್ರಗಳನ್ನು ರಚಿಸಿದ್ದಾರೆ. ಅನೇಕ ಕೃತಿಗಳು ಲಭ್ಯವಾಗಿಲ್ಲ. ಒಂದೊಂದು ರಚನೆಯ ಹಿಂದೂ ವಿಶಿಷ್ಟ ಘಟನೆಯಿದೆ. ಈಕೆಗೆ ದೃಶ್ಯಗಳು ಕಂಡದ್ದುಂಟು. ದೈವೀ ಪ್ರೇರಣೆಯಾಗಿದ್ದುಂಟು. ಹೀಗೆ ಸುಲಲಿತವಾಗಿ ಅವರ ಬಾಯಿಂದ ಕಾವ್ಯಧಾರೆ ಹೊಮ್ಮಿದೆ. ಈಕೆಯ ಅಂಕಿತ – **ನರಸಿಂಹ ವಿಠಲ.**

ಇವರ ಅನೇಕ ಕೃತಿಗಳನ್ನು ಆದವಾನಿಯ ರಾವ್‌ಜೀ ಶ್ರೀನಿವಾಸರಾಯರು ಪ್ರಕಟಿಸಿದ್ದಾರೆ. ಅದೆಲ್ಲಾ ತೆಲುಗು ಲಿಪಿಯಲ್ಲಿದೆ. ಉಡುಪಿ ಪಾವಂಜೆ ಗುರುರಾಯರು ಕೂಡಾ ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಈಗ ನಮಗೆ ಲಭ್ಯವಾಗಿರುವುದು **32** ಹಾಡುಗಳು. ಇವುಗಳಲ್ಲಿ **10** ದೊಡ್ಡ ಹಾಡುಗಳು ಅಥವಾ ಕಥನ ಕವನಗಳು. ಇನ್ನು **22** ಬಿಡಿ ಹಾಡುಗಳು.

ಈ ರೀತಿಯಾಗಿ ಬಹುಮುಖ ಸೇವೆಯನ್ನು ಸಲ್ಲಿಸುತ್ತಿದ್ದ ಗುತ್ತೆವ್ವನವರು ಎಲೆ ಮರೆ ಕಾಯಿಯಂತೆ ಜೀವನವನ್ನು ನಡೆಸುತ್ತಾ ಪೂರ್ಣ **ಎಂಭತ್ತೈದು** ಸಂವತ್ಸರಗಳನ್ನು ಕಳೆದರು. ಕೊನೆಯ ದಿನಗಳಲ್ಲಿ ದೃಷ್ಟಿಮಾಂದ್ಯವುಂಟಾದರೂ ಯಾವ ನಿತ್ಯ ಕರ್ಮಗಳನ್ನೂ ಲೋಪಗೊಳಿಸಲಿಲ್ಲ. ಸನ್ **1950**ನೇ ಇಸವಿಯಲ್ಲಿ ಜನವರಿ ತಿಂಗಳ ಮೊದಲ ವಾರದಲ್ಲಿ ಈಕೆ ತನ್ನ ಇಹಲೀಲೆಯನ್ನು ಸಮಾಪ್ತಿಗೊಳಿಸಿ ಹರಿಪದವನ್ನೈದಿದರು.

ಬನ್ನಿ, ಈಗ ನಾವು ಓರಬಾಯಿ ಲಕ್ಷ್ಮೀದೇವಮ್ಮನವರ ಕಾವ್ಯ ಮಾಧುರ್ಯವನ್ನು ಸೋಧಾಹರಣವಾಗಿ ಅನುಭವಿಸೋಣ –

ಲಕ್ಷ್ಮೀದೇವಮ್ಮನವರು ಯಾವುದೇ ಶಾಲಾ ಕಾಲೇಜುಗಳಲ್ಲಿ ಓದಿದವರಲ್ಲ. ಚಿಕ್ಕಂದಿನಲ್ಲಿ ತಂದೆಯಿಂದ ಕಲಿತ ಸಂಸ್ಕೃತ ಹಾಗೂ ಕನ್ನಡಗಳಷ್ಟೇ ಆಕೆಯ ವ್ಯಾಸಂಗ. ಆದರೆ ಅವರ ಒಂದೊಂದು ಕೃತಿಗಳೂ ಆದಿ ಪ್ರಾಸ, ಅಂತ್ಯ ಪ್ರಾಸ, ಯತಿ, ಗಣ, ಮಾತ್ರೆ, ಸಾಂಗತ್ಯ, ರಗಳೆಗಳಿಂದ ಕೂಡಿವೆ. ಪ್ರಕೃತಿ ವರ್ಣನೆ, ಶೃಂಗಾರ, ವಿಪ್ರಲಂಬ ಶೃಂಗಾರ, ವೀರ, ಶೋಕ, ಕರುಣೆ ಇತ್ಯಾದಿ ರಸಗಳು ಚೇತೋಹಾರಿಯಾಗಿವೆ. ಉಪಮ, ಶ್ಲೇಷಾಲಂಕಾರಗಳು ಹೇರಳವಾಗಿ ದೊರೆಯುತ್ತವೆ. ಅವ್ವನವರಂತೂ ಒಂದು ಕಡೆ ಕುಳಿತು ಬರೆದವರಲ್ಲ. ಅವರು ಹೇಳಿದ್ದನ್ನು ಕೇಳಿ ಕಲಿತವರು. ಅವರ ಕೃತಿಗಳು ಬಾಯಿಂದ ಬಾಯಿಗೆ ಹರಿದಾಡಿವೆ. ತಮ್ಮ ಕೃತಿಗಳನ್ನು ಲಿಪಿಬದ್ಧ ಮಾಡಬೇಕೆಂಬುದನ್ನು ಅವರು ಅರಿತವರಲ್ಲ. ನುಡಿಮಾತೆ – ನುಡಿಸಿದ್ದನ್ನು ನುಡಿದಿದ್ದಾರೆ.

Rarest Archiver

**ಒಂದೆರಡು ಉದಾಹರಣೆಗಳು:-**

**ಉಪ್ಪರಿಗ್ಹೋಯಿತು - ತಿಪ್ಪಿ ಕುಣಿಯಾಯಿತು**
**ಕಪ್ಪ ಕಾಸುಗಳೆಲ್ಲಾ ಕಳೆದ್ಹೋಯ್ತು**
**ಕಪ್ಪಾಯಿತು ದೇಹ ಕಂದಿ ಕುಂದ್ಹೋಯಿತು**
**ಒಪ್ಪಿತು ಗಾಜಿನ ಬಳೆಯು ಕೈಯಲಿ**

ರಾಮದೇವರ ಕಥೆಯಿಂದ ಆರಿಸಿದ ಈ ಸಾಲುಗಳಲ್ಲಿ ಆದಿಪ್ರಾಸವು ಇದೇರೀತಿ ಎಂಭತ್ತೆರಡು ನುಡಿಗಳಲ್ಲೂ ಕಂಡುಬರುತ್ತದೆ.

## ರುಕ್ಮಿಣಿಯ ವಿರಹ (ಚೇಳಿನ ಹಾಡು)

**ಪ್ರಾಣಸಖೀ ವೇಣುನಾಥನ ಕೂಡಿಸೆಯೀಗ ।**
**ಕಾಣದೆ ಪ್ರಾಣವು ನಿಲ್ಲದೆ, ಜಾಣೆ ಹೋಗೆ ನೀ ॥**

**ಕೃಷ್ಣ ನಿಮ್ಮ ಪಟ್ಟದರಸಿ, ಕಷ್ಟವ ಪಡುವ್ಹೋಳೋ**
**ತಟ್ಟನೆ ಇದಿಷ್ಟು ಸಾರಿ, ಕೃಷ್ಣನ್ನ ಕರೆತಾರೆ ನೀ ॥**

**ಯಾಕೆ ಮುನಿದೆ ಶ್ರೀಪತಿಯೊಳು ನಾನು । ಕಾಳು ಆದೆನೆ**
**ಲೋಕನಾಥ ಬಾರದೆ ದೇವಾ, ಸಾಕು ಮಾಡುವನೇನೇ**
**ಯೆಂತಾ ಆದರೂ ಮಾಡಿ । ಲಕ್ಷ್ಮೀಕಾಂತನಿಗೆ ಸಂತೋಷವಾಗುವಂತೆ**
**ಹೇಳಿ ನೀ ಕರೆತಾರೇ -**

ಆದಿಪ್ರಾಸ, ಅಂತ್ಯಪ್ರಾಸ, ಶಬ್ದಾಲಂಕಾರಗಳಲ್ಲಿ ಮೆರೆಯುವ ಈ ಸರಳ ರಗಳೆಯಲ್ಲಿ ಅಡಗಿರುವ ಶೃಂಗಾರವನ್ನು ಗೊಲ್ಲತಿ ಹಾಡಿನಲ್ಲಿ ನೋಡಬಹುದು.

ಗೋಕುಲದಲ್ಲಿ ಗೊಲ್ಲತಿ ಹುಡುಗಿಯೊಬ್ಬಳನ್ನು ಅವಳ ಅತ್ತೆ ಹೊರಗೆ ಹೋಗಲು ಬಿಡುವುದಿಲ್ಲ, ಏಕೆಂದರೆ ಆ ಹುಡುಗಿ ಅದೇ ತಾನೇ ಮದುವೆಯಾಗಿ ಬಂದಿರುತ್ತಾಳೆ. ಅವಳನ್ನು ಕೃಷ್ಣನು ತನ್ನ ಬುಟ್ಟಿಯಲ್ಲಿ ಹಾಕಿಕೊಂಡುಬಿಡುತ್ತಾನೆಂಬ ಭಯ ಅವಳಿಗೆ. ಆದರೆ ಆ ಹುಡುಗಿಯು ಓರಗೆಯವರಿಂದ ಶ್ರೀಕೃಷ್ಣನ ರೂಪ ಸೌಂದರ್ಯಗಳನ್ನೂ, ಲೀಲೆಗಳನ್ನೂ ಕೇಳಿರುತ್ತಾಳೆ. ನೋಡುವ ಆಸೆಯೂ ಇರುತ್ತದೆ. ಅತ್ತೆಯನ್ನು ಪರಿ ಪರಿಯಾಗಿ ಒಪ್ಪಿಸಿ ತಾನೇನೂ ಅವನಿಗೆ ಮರುಳಾಗುವಷ್ಟು ಹೇಡಿಯಲ್ಲ ಎಂದು ಹೇಳಿ ಹೊರಡುತ್ತಾಳೆ.

Rarest Archiver

ಶೃಂಗಾರವಾದಳು ನಾರಿ, ಗೊಲ್ಲತಿ ಸುಂದಾರಿ
ಶೃಂಗಾರವಾದಳು ಮಂಗಳಮುಖಿಯೆ, ಅಂಗನೆ ತಾನೆ ಜಡೆಗಳ ಬಿಗಿದು
ಛಂದದಿ ಜಡೆ ಭಂಗಾರಗಳ್ಹೆಣೆಯೆ । ಮುಂಗುರುಗಳಲಿ ಚಂದ್ರ ಸೂರ್ಯರು ಹೊಳೆಯೆ
ಅಂಗನೆ ರಂಗನ ಮುಂಗೈ ಗಿಣಿಯೆ ॥ 1 ॥

ವಾಲಿ ಬುಗುಡಿ ವಾರಿಜಾಕ್ಷಿಯು ಇಟ್ಟು - ತೋರಮುತ್ತಿನ ಮೂಗುತಿಯಿಟ್ಟು
ಚಾರು ಕಂಚುಕ ಬಿಗಿ ಬಿಗಿ ತೊಟ್ಟು । ಹಾರ ಪದಕಗಳು ಕೊರಳಲ್ಲಿಟ್ಟು
ಬಾರಿ ಬಾರಿಗೆ ಪೊಗಳುವುದೆಷ್ಟು ॥ 2 ॥

ವಜ್ರದ ಹಸ್ತ ಕಡಗವನಿಟ್ಟು । ಭರ್ಜರಿ ಪೀತಾಂಬರ ಉಟ್ಟು
ಗೆಜ್ಜೆ ಅಂದಿಗೆ ಪಾದದೊಳಿಟ್ಟು, ಹೆಜ್ಜೆ ಹೆಜ್ಜೆಗೆ ಆ ಶಬ್ದಗಳೆಷ್ಟು
ಸಜ್ಜನ ಪ್ರಿಯ ನಮ್ಮ ನರಸಿಂಹವಿಠಲನ । ಕೂಡುವೆ ತ್ವರಿತದಿ ಎಂಬುವ ಗುಟ್ಟು ॥ 3 ॥

## ಭಕ್ತ ಸಬುಬಾಯಿಯ ಧನ್ಯತೆ

ಕಂಡೆ ಕಂಡೆ ಪಂಢರೀಶನಾ । ಶ್ರೀ ಪಾಂಡುರಂಗನಾ
ಪುಂಡರೀಕವರದ ಶ್ರೀ ಪಾಂಡುರಂಗನಾ ॥

ಭೀಮ ತೀರದಿ ಸ್ವಾಮಿ ನಿಂತಿಹ ನೇಮದಿಂದ
ಪ್ರೇಮ ತೋರುತ । ಕಾಮಿತವರದ ನಿಸ್ಸೀಮ-
ಇಟ್ಟ ಕಲ್ಲನು ಕೊಟ್ಟ ಭಕುತನ ಶ್ರೇಷ್ಠ ಪದವಿಯೊಳಟ್ಟ ಮಹಿಮನ ।
ದಿಟ್ಟ ಶ್ರೀ ನರಸಿಂಹ ವಿಠಲನ ॥ 1 ॥

## ಜಲಕ್ರೀಡೆಗೆ ಬಂದ ಗೋಪಿಯರು ಮಾಡುವ ವನದ ವರ್ಣನೆ

ನೋಡಿದ್ಯಾ ಸಖೀ ಕೂಡಿ ಆಡುವಾ ಮೃಗಗಳಾ
ಭೃಂಗ, ಗಿಳಿ, ಸಾರಂಗ, ಮಾತಂಗ, ನೋಡಿದೇವಿಹಂಗಾ
ಕೂರಂಗ ಶಿರಂಗಗಳ ನೋಡಿದ್ಯಾ
ಶಿಸ್ತಿಲಿ ಆಡುವಾ,ಕಸ್ತೂರಿ ಮೃಗಗಳು
ಜತ್ತಿಲಿ ಸ್ವರವೆತ್ತಿ ಕೂಗುವೋ ಗಿಳಿಗಳು
ಥಳ ಥಳಿಸುವಾ ಮಯೂರಿ ಪಿಕಗಳು
ಜಳಪಿಸಿ ಹಾಡುವಾ ಕೋಪಿಲ ಸ್ವರಗಳು

Rarest Archiver

ಕೇತಕಿ ಕ್ಯಾದಿಗಿ ಕಮಲ ಕುಸುಮ ನೋಡಿದ್ಯ
.........................................
ಪರಮಪುರುಷ ನರಸಿಂಹ ವಿಠಲರಾಯನ
ಪಾದ ಧೂಳಿಗಳಿಂದ ಶೋಭಿತವಾಗಿದೀವನ ||

## ಜಲಕ್ರೀಡೆ

ಸಾರಸಾಕ್ಷಿಯೇರು, ನಿಲೂಟವಾಡುವ್ರೋರು ।
ಹಾರಪದಕಾ ವಂದೇ ದ್ವಾರ್ವ ಹೊಳೆಯುತ್ತಾ || ಪ ||

ಸಿಂಗನಂದದಿ ನಾಡುವಂಗ ಬಾಳುಕುತ್ತ
ಅಂಗನೀಯರು ಬ್ಯಾಗೆ । ರಂಗನೆದುರಾಗಿ || 1 ||

ನಗೆಮುಖದಿಂದಲೇ ನಲಿಯುತ್ತಾಲೇ ಬಾಲೆಯರು
ಹಗಲು ಸೂರ್ಯನಂದೆ, ಮಿಗುಲವಾದ ಕಾಂತಿಯರು || 2 ||

ಲಕ್ಷ್ಮೀದೇವಿಗೆ ಸಮಸಾಕ್ಷಿ ಪೋಲುವ್ರೋರು
ಪಕ್ಷಿವಾಹನನಲ್ಲೆ ಲಕ್ಷ್ಯ ಇಡದಾಲೇ || 3 ||

ಕಲಶ ಕುಚ ಬಾಲೆಯೇರು । ಕೀಲಲಾದ ವಾಣೇರು
ಕಾಮನೈಯ್ಯ ಮುಂದೇ । ಕಾಂತೆಯರು ಹಿಂದೆ || 4 ||

ಬಟ್ಟಬಿಟ್ಟುದೂರ । ತೋರುತ ವಯ್ಯಾರ
ದಿಟ್ಟನಾರಸಿಂಹ ವಿಠಲಾನೆದುರು || 5 ||

## ಶ್ರೀಕೃಷ್ಣನ ಬಾಲಲೀಲೆ (ಸಾಂಗತ್ಯ)

ಅಂಬೆಗಾಲಿಕ್ಕುತ । ಅಂಗಳದೊಳಾಡುತ । ಚಂದ್ರನ್ನ ನೋಡಿ ನಲಿಯುತ್ತ
ನಲಿಯುತ್ತಲಾಗೋಪ ಮಂಗಳ ಮುಖವು ತೋರುತ್ತ
ಮಣ್ಣು ಮೆಲ್ಲುವರೇನೋ । ಸಣ್ಣ ಕೃಷ್ಣನೆ ನೀನು
ಚಿನ್ನನೆ ಬಾಯಿ ತೆಗೆಯೆಂದು
ತೆಗೆದು ನೋಡಿದಳು ಬಾಲನ ಬಾಯಿ ಮಹಿಮೆಗಳನು
ಹಯವದನದೊಳು ಹದಿನಾಲ್ಕು ಲೋಕವ ನೋಡಿ ಭಯಗೊಂಡ್ಳು ||

Rarest Archiver

## ತರಕಾರಿ ಹಾಡು (ಶ್ಲೇಷಾಲಂಕಾರ)

ಇಲ್ಲಿಲ್ಲಾದಿದ್ದರೆ ನೀನೆಲ್ಲಿ ಕಾಯೋ ।
ಮಲ್ಲಾಮರ್ದನ ಕೃಷ್ಣ ಮಾದಳ ಕಾಯೋ ।
ಎತ್ತಿದೆ ನೀ ಗೋವರ್ಧನ ಕಾಯೋ ।
ಅಲ್ಲಿ ಸುತ್ತಿ ಸುತ್ತಿ ಆದೆ ನಾ ಬೆಂಡೆ ಕಾಯೋ ।
ಆಪತ್ತಿನಂತೆ ಎನ್ನಾಗಲ ಕಾಯೋ ।
ಈ ಪುಣ್ಯ ಸಂಸಾರದೊಳಿಪ್ಪಳ ಕಾಯೋ ।
ಚೆನ್ನಿಗ ನೀನೆಂಬದನೆ ಕಾಯೋ ।
ಈರೇಳು ಭುವನಕ್ಕೆ ನೀ ಹೀರೆ ಕಾಯೋ ।
ವಾರಿಜಾಕ್ಷನೆ ನಾವು ನಿನ್ನವರೆ ಕಾಯೋ ।
ತೋರಿಸುಖವ ನೀನೆಂಬೆ ಕಾಯೋ ।
ಮಾರಜನಕನೆ ಅಳಿದ ಮೂವನ್ನ ಕಾಯೋ ।
ಸಾರಿ ಕರೆದರೆ ನೀ ಯಾಕೆ ಬಾರೆ (ಬೋರೆ ಹಣ್ಣು) ಕಾಯೋ ।
ನೀ ಮಾಡಿದ್ದೆಲ್ಲವು ಎನಗೆ ಸಮತೆ (ಸೌತೆ) ಕಾಯೋ ।

## ಲಕ್ಷ್ಮೀದೇವಮ್ಮನವರ ಕೊನೆಯ ಹಾಡು

ತಪ್ಪೆಣಿಸುವರೇನೋ ತಾಮರದಳಾಕ್ಷ
ಅಪ್ಪ ನೀ ಒಪ್ಪಿದರೆ ತಪ್ಪೆಲ್ಲಿ ಇಹುದೋ ?
ಅಕ್ಕರದ ಅಜಮಿಳನು ಅಕ್ಕನಾ ಮಗನೇನೋ?
ಚಿಕ್ಕ ಧ್ರುವನಾ ತಾಯಿ ಚಿಕ್ಕಮ್ಮನೇನೋ?
ರಕ್ಕಸಾ ಸುತ ನಿನಗೆ ರೊಕ್ಕ ಕೊಟ್ಟನೋ ಏನೋ?
ಇಕ್ಕೆ ನೀ ಭವದೊಳಗೆ ಹೀಂಗೆ ನೋಡುವರೇನೋ?
ಅಂತ್ಯಜಳ ಕೂಡಿ ಅನಂತ ಕರ್ಮವ ಮಾಡಿ
ಅಂತ್ಯದಲಿ ನಿನ್ನೊಮ್ಮೆ ನೆನೆದನೇನೋ?
ಅಂಥ ಶೋಖಿತನ ಮಗಳ ಕಾಂತನೆಂದೆನಿಸಿದಿ
ಕಂತುಪಿತನೇ ನಿನ್ನ ಕರುಣವಿದ್ದರೆ ಸಾಕೋ?
ನಾ ಮಾಡಿದಪರಾಧ ನೀ ಕ್ಷಮಿಸದಿದ್ದರೆ
ಯಾರು ಪೊರೆವರೋ ಎನ್ನ ನೀರಜಾಕ್ಷ
ಧೀರ ಶ್ರೀ ನರಸಿಂಹವಿಠಲ ನಿನ್ನಾಧೀನನಾದೆನೋ
ಇನ್ನೇನು ಮಾಡಿದರು ಮಾಡೋ ನೀನು ॥

Rarest Archive

# ಶ್ರೀಮತಿ ದೊಡ್ಡಿ ಸುಧಾಬಾಯಿ - 1923

ಶ್ರೀಮತಿ ದೊಡ್ಡಿ ಸುಧಾಬಾಯಿಯವರು ಆಂಧ್ರಮೂಲದವರು. ಇವರು ಬೆಂಗಳೂರಿಗೆ ಬಂದು ಸುಮಾರು ಇಪ್ಪತ್ತೈದು ವರ್ಷಗಳಾಗಿರಬಹುದು. ಆಗಿನಿಂದಲೂ ನಾನು ಇವರನ್ನು ಬಲ್ಲೆ. ತೆಲುಗುಭಾಷೆಯಲ್ಲಿ ಬರೆಯುತ್ತಿದ್ದ ಇವರು ಇಲ್ಲಿಗೆ ಬಂದ ಮೇಲೆ ಕನ್ನಡವನ್ನು ಚೆನ್ನಾಗಿ ಕಲಿತು ಅಗಾಧ ಸಾಹಿತ್ಯವನ್ನು ಬರೆದಿರುವುದನ್ನು ನೋಡಿದರೆ ಯಾರಿಗಾದರೂ ಅಚ್ಚರಿಯಾಗದೆ ಇರದು. ಇವರು ಕನ್ನಡದಲ್ಲಿ ಬರೆದು ಪ್ರಕಟಿಸಿರುವ ಸಮಗ್ರ ಕನ್ನಡ ಗದ್ಯ ಹಾಗೂ ಪದ್ಯಗಳ ಬೃಹತ್ ಪುಸ್ತಕವನ್ನು ಆಮೂಲಾಗ್ರವಾಗಿ ಓದಿದ್ದೇನೆ. ಈಗ ಇವರ ವಿಚಾರವನ್ನು ನನ್ನ ಮುಂದೆಯೇ ಇಟ್ಟುಕೊಂಡಿದ್ದೇನೆ ಅದರ ಹೆಸರು ''ಕಪಿಲಾಂತರಂಗ ಸುಧಾ''. ಇದು ಅವರ ಜೀವನದ ಹರಿದಾಸ ಸಾಹಿತ್ಯದ ಬೆಳಸು.

ಕಪಿಲಾಬಾಯಿಯವರ ತೌರುಮನೆ ಆಂಧ್ರ ಪ್ರಾಂತದ ನೆಲ್ಲೂರಿನಲ್ಲಿ ಜನಿಸಿದರು. ಅವರ ತಂದೆಯ ಹೆಸರು ಶ್ರೀಯುತ ಬದರೀನಾರಾಯಣರಾಯರು. ಬ್ರಿಟಿಷರ ಕಾಲದಲ್ಲಿ ಸಮರ್ಥರಾದ ಕಮೀಷನ್ನರಾಗಿದ್ದರು. ಬ್ರಿಟಿಷ್ ಅಧಿಕಾರಿಗಳಿಗೆ ತುಂಬಾ ಅಚ್ಚುಮೆಚ್ಚಾಗಿದ್ದರಂತೆ. ಸುಧಾಬಾಯಿಯವರು ಹುಟ್ಟಿದ ಮನೆಯಲ್ಲಿ ಬಹಳ ಮಡಿ-ಮೈಲಿಗೆ ಇತ್ಯಾದಿ ಸಾಂಪ್ರದಾಯಿಕ ವಾತಾವರಣವಿತ್ತು. ಇವರ ಮನೆಗೆ ಅನೇಕ ವಿದ್ವಾಂಸರು ಪುರಾಣಿಕರು, ಪೀಠಾಧಿಪತಿಗಳು ಬಂದು ಇಳಿದುಕೊಂಡು ಪಾಠ-ಪ್ರವಚನಗಳನ್ನು ನಡೆಸುತ್ತಿದ್ದರಂತೆ. ಇವರ ತಂದೆ ಮತ್ತು ತಾತನವರು ಪಂಡಿತರಿಂದ ಶಾಸ್ತ್ರಾಭ್ಯಾಸ ಮಾಡುತ್ತಿದ್ದರಂತೆ. ಇವರ ತಾಯಿಯ ತಾಯಿ ಜಾಗೀರ್‌ದಾರ್ ಕಮಲಮ್ಮ ಯಜ್ಞಪತ್ನಿಯಾಗಿದ್ದರು. ಅಂದರೆ ಆಕೆಯ ಯಜಮಾನರಾಗಿದ್ದ ಶಾಮರಾಯರು ಹದಿನೆಂಟು ಯಜ್ಞಗಳನ್ನು ಮಾಡಿದ್ದರಂತೆ. ಹೆಂಗಸರೆಲ್ಲಾ ವಿಷ್ಣುಪಂಚಕ, ಋಷಿಪಂಚಮಿ, ಧಾರಿಣಿ-ಪಾರಿಣಿ, ಅಲವಣ ಮುಂತಾದ ವ್ರತಗಳನ್ನು ಮಾಡುತ್ತಾ ತೊಂಭತ್ತು ವರ್ಷಗಳವರೆಗೂ ಬದುಕಿದ್ದರಂತೆ. ಸುಧಾಬಾಯಿಯವರು ಇವರುಗಳಿಂದ ಅನೇಕ ಧಾರ್ಮಿಕ ವಿಷಯಗಳನ್ನೂ, ದಾಸರ ಪದಗಳನ್ನೂ ಕಲಿಯುತ್ತಿದ್ದರಂತೆ. ಇವರ ತಂದೆಯ ಮುತ್ತಜ್ಜಿಯವರಾದ ವೇಮುಗಂಟಿ ಬೊಜ್ಜಮ್ಮ ಎಂಬುವವರಿಗೆ ಒಂದು ದಿನ ಸ್ವಪ್ನದಲ್ಲಿ ತುಳಸೀದೇವಿ ಕಾಣಿಸಿಕೊಂಡು ''ನಾನು ಇಂತಹ ಸ್ಥಳದಲ್ಲಿ ಇದ್ದೇನೆ. ನನ್ನನ್ನು ಪೂಜಿಸು'' ಎಂದು ಹೇಳಿದಂತಾಯಿತಂತೆ.

Rarest Archiver

ಪೆನ್ನಾರು ನದೀ ತೀರದಲ್ಲಿರುವ ನೆಲ್ಲೂರು ಪಟ್ಟಣದಲ್ಲಿ ಶ್ರೀ ರಂಗನಾಥ ದೇವರ ದೇವಸ್ಥಾನದ ಹಿಂಭಾಗದಲ್ಲಿ ಭೂಮಿಯನ್ನು ಅಗೆದು ನೋಡಿದಾಗ ಅಲ್ಲಿ ಗಿಡ ಸಹಿತ ತುಳಸೀ ಬೃಂದಾವನ ಸಿಕ್ಕಿತಂತೆ. ನಂತರ ಅವರಿಗೆ ತುಂಬ ಭಾಗ್ಯ ಬಂದಿತಂತೆ. ಅಂದಿನಿಂದ ಇಂದಿನವರೆಗೆ 180 ವರ್ಷಗಳಿಂದ ಪ್ರತಿ ಉತ್ಥಾನ ದ್ವಾದಶಿಯಂದು ಶ್ರೀರಂಗನಾಥನಿಗೆ ತುಳಸಿಯನ್ನು ಕೊಟ್ಟು ವಿವಾಹಮಾಡುವ ಸಂಪ್ರದಾಯ ಬಂದಿತಂತೆ. ಅದು ಈಗಲೂ, ಇಂದಿಗೂ ಅವಿಚ್ಛಿನ್ನವಾಗಿ ನಡೆದು ಬರುತ್ತಿದೆ. ಆಗಿನ ಕಾಲದಲ್ಲಿ ಶ್ರೀಮತಿ ದೊಡ್ಡ ಬೊಜ್ಜಮ್ಮನವರು ಸೋಮವಾರ ಅಮಾವಾಸ್ಯಾ ವ್ರತವನ್ನು ಮಾಡಿ ಕರುವಿನ ಸಹಿತ 108 ಗೋವುಗಳನ್ನು ಸದ್ ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದರಂತೆ. ಲಕ್ಷ ಬ್ರಾಹ್ಮಣ ಭೋಜನ ಮಾಡಿಸುತ್ತಿದ್ದರಂತೆ. ಪ್ರತಿದಿನ ಭಾಗವತ ಗ್ರಂಥ ಶ್ರವಣ ಮಾಡುತ್ತಿದ್ದರಂತೆ. ಇವೆಲ್ಲಾ ಬಾಲಕಿಯಾದ ಸುಧಾಬಾಯಿಯವರ ಮೇಲೆ ಸದ್ ಭಾವನೆಗಳನ್ನು ಮೂಡಿಸಿತು. ಅತ್ತೆ ಮನೆಗೆ ಸೇರಿದ ನಂತರ ಕಪಿಲಮ್ಮನವರು ಸುಧಾಬಾಯಿ ಆದರು. ಇತ್ತಲಾಗಿ ಅತ್ತೆಯ ಮನೆಯಲ್ಲೂ ಸತ್ಸಂಪ್ರದಾಯವಿತ್ತು. ಸುಧಾಬಾಯಿಯವರ ಯಜಮಾನರಾದ ಶ್ರೀಯುತ ದೊಡ್ಡಿ ಗುಂಡೂರಾಯರು ಬಳ್ಳಾರಿಯಲ್ಲಿ ಬಹಳ ಪ್ರಸಿದ್ಧರಾದ ವಕೀಲರಾಗಿದ್ದರು. ಅವರು ತಮ್ಮ ಮನೆಯ ಗುರುಗಳಾದ ಮ॥ ಶಾ॥ ಸಂ॥ ಘೂಳಿ ಕೃಷ್ಣಮೂರ್ತಿ ಆಚಾರ್ಯ ಬಳಿ ಶಾಸ್ತ್ರ ಕಲಿಯುತ್ತಿದ್ದರಂತೆ. ಕುಂದಾಪುರ ಮಠದ ಹಿರಿಯ ಸ್ವಾಮಿಗಳಾಗಿದ್ದ ಪೂಜ್ಯ ಲಕ್ಷ್ಮೀಶತೀರ್ಥರು ಬಹುವರ್ಷಗಳ ಹಿಂದೆ ಬಳ್ಳಾರಿಯಲ್ಲಿ ಶ್ರೀ ಗುಂಡೂರಾಯರ ಮನೆಯಲ್ಲಿ ನಾಲ್ಕು ತಿಂಗಳೂ ಚಾತುರ್ಮಾಸಕ್ಕೆ ಕುಳಿತಿದ್ದರಂತೆ. ಸುಧಾಬಾಯಿಯವರ ಹಿರಿಯು ಕಾಲಕ್ಕೆ ಪೂಜ್ಯ ಸತ್ಯಧ್ಯಾನಸ್ವಾಮಿಗಳು ಸಹಾ ಅವರ ಮನೆಯಲ್ಲಿ ಚಾತುರ್ಮಾಸ್ಯವನ್ನು ಮಾಡಿದ್ದರಂತೆ.

ಇನ್ನು ಶ್ರೀಮತಿ ಸುಧಾಬಾಯಿಯವರ ಅತ್ತೆಯವರಾದ ದೊಡ್ಡಿ ನರಸಮ್ಮನವರು ಪ್ರತಿ ಶುಕ್ರವಾರ ಶ್ರೀ ವರಮಹಾಲಕ್ಷ್ಮೀ ವ್ರತವನ್ನು ಐದು ವರ್ಷ ನಡೆಸಿದರಂತೆ.

ಶ್ರೀಮತಿ ಸುಧಾಬಾಯಿಯವರ ಮಾವಂದಿರ ತಾತ ದೊಡ್ಡಿ ಯೋಗಪ್ಪನವರು ಅಂದಿನ ಕಾಲದಲ್ಲಿ ಅಂದರೆ ಬ್ರಿಟಿಷರ ಕಾಲದಲ್ಲಿ ಮುನ್ಸೀಫರಾಗಿದ್ದರಂತೆ. ಬಳ್ಳಾರಿ ಹತ್ತಿರವಿರುವ 'ನಾರಾಯಣದೇವರ ಕೆರೆ' ಎಂಬ ಗ್ರಾಮದಲ್ಲಿ ದೊಡ್ಡ ಛತ್ರವನ್ನು ಕಟ್ಟಿಸಿ ಭಾವಿಯನ್ನು ತೋಡಿಸಿದ್ದರಂತೆ. ಈಸ್ಟ್ ಇಂಡಿಯಾ ಕಂಪೆನಿಯು ಅವರಿಗೆ ಸಾಲವಾಗಿ ಹಣ ಸಹಾಯ ಮಾಡಿತ್ತಂತೆ. ಶ್ರೀ ಮಧ್ವಾಚಾರ್ಯರ ಶಿಷ್ಯರಾಗಿದ್ದ ಶ್ರೀ ನರಹರಿ ತೀರ್ಥರು ನಾರಾಯಣದೇವರ ಕೆರೆ ಗ್ರಾಮದಲ್ಲಿ ನಾರಾಯಣ ದೇವರನ್ನು ಪ್ರತಿಷ್ಠಿಸಿದ್ದರಂತೆ. ಆಗ ಆ [illegible] ಅಣೆಕಟ್ಟನ್ನು ಕಟ್ಟುವಾಗ ಮುಳುಗಿ ಹೋಯಿತಂತೆ. ನಂತರ ಕೆಲವು

Rarest Archiver

ಕಾಲದ ಮೇನೆ ನಾರಾಯಣ ದೇವರನ್ನು ಸಾರ್ವಜನಿಕರು ಸೇರಿ ನೆರೆಯ ಊರಾದ ಮರಿಯಮ್ಮನ ಹಳ್ಳಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ.

ಇದಿಷ್ಟು ಸುಧಾಬಾಯಿಯವರ ಸಾಂಪ್ರದಾಯಿಕ ಹಿನ್ನೆಲೆಯಾಯಿತು. ಅವರು ಗಂಡನ ಮನೆಗೆ ಬಂದು, ಗೃಹಿಣಿಯ ಜವಾಬ್ದಾರಿಗಳನ್ನು ವಹಿಸಿಕೊಂಡು ಆರು ಜನ ಗಂಡು ಮಕ್ಕಳನ್ನೂ ಒಬ್ಬ ಹೆಣ್ಣುಮಗಳನ್ನೂ ಹಡೆದು ವಂಶವನ್ನು ಮುಂದುವರಿಸಿ ಸುಖ ಬಾಳ್ವೆಯನ್ನು ನಡೆಸುತ್ತಿದ್ದಾಗ ಆಕೆಗೆ ಒಂದು ರಾತ್ರಿ ಸ್ವಪ್ನದಲ್ಲಿ ದೇವರ ಮನೆಯಲ್ಲಿ ಅರುಣೋದಯಕ್ಕೆ ಮುಂಚೆ ಒಬ್ಬ ದೇವತಾ ಪುರುಷನು ಕೈಯಲ್ಲಿ ವೀಣೆಯನ್ನು ಹಿಡಿದು ನಿಂತಿದ್ದನ್ನು ಕಂಡರಂತೆ. ಆ ದಿನವೇ ಅವರು ಮಿಂದು ಮಡಿಯುಟ್ಟು ಶ್ರೀ ರಾಘವೇಂದ್ರತೀರ್ಥರ ಬಗ್ಗೆ 'ಎಂಥಾ ಪ್ರತಿಭಾವಂತರು ಈ ರಾಘವೇಂದ್ರತೀರ್ಥರು' ಎಂಬ ಪ್ರಥಮ ಕವನವನ್ನು ಬರೆದರಂತೆ. ಇನ್ನೊಂದು ದಿನ ನಾಲ್ಕು ಮಂದಿ ಹರಿದಾಸರು ಬಂದು ಕತ್ತಲೆಯನ್ನು ಬಿಡಿಸಿದಂಥಾ ಸ್ವಪ್ನವಾಯಿತಂತೆ. ಮತ್ತೊಂದು ದಿನ ಆಕೆ ನದೀ ತೀರದಲ್ಲಿ ಸ್ನಾನ ಮಾಡುತ್ತಿರುವಾಗ ಅಂತರಿಕ್ಷದಲ್ಲಿ ದೇದೀಪ್ಯವಾದ ಕಾಂತಿಯುಳ್ಳ ಮಹನೀಯರು ಮೆಟ್ಟಲೇರುತ್ತಿರುವುದನ್ನು ಕಂಡರಂತೆ. ಕಮಾನು ಬಾಗಿ ಉಳ್ಳ ಮೂರು ಮೆಟ್ಟಿಲುಗಳನ್ನು ಏರಿ ಹೋಗುತ್ತಲಿದ್ದ ಆ ಪುರುಷನು ಆಕೆಯನ್ನು ನೋಡಿ ಹಸನ್ಮುಖದಿಂದ ವೇಂಕಟಾಚಲದ ಕಡೆಗೆ ಹೋದನಂತೆ.

ಇದನ್ನೆಲ್ಲಾ ಸುಧಾಬಾಯಿಯವರು ತಮ್ಮ ಗುರುಗಳಾದ ಮ|| ಶಾ|| ಸಂ|| ಘೂಳೀಕೃಷ್ಣಮೂರ್ತಾಚಾರ್ಯರಿಗೆ ತಿಳಿಸಿ ಅವರಿಂದ ಕಪಿಲನಾಮಕನೆಂಬ ಅಂಕಿತವನ್ನು ಹೊಂದಿ (ಆಕೆಯ ತೌರುಮನೆಯ ಹೆಸರು ಕಪಿಲಮ್ಮ) ಅಂದಿನಿಂದ ಭಗವನ್ನಾಮಗಳನ್ನು ಬರೆಯತೊಡಗಿದರಂತೆ. ಹಿಂದಿನ ಲೇಖನದಲ್ಲಿ ನಾನು ಓರವಾಯಿ ಲಕ್ಷ್ಮೀದೇವಮ್ಮನವರ ವಿಚಾರ ಬರೆದಿದ್ದೇನೆ. ಆ ಮಹಾತಾಯಿಯು ಗಂಡನ ಕಡೆಯಿಂದ ಶ್ರೀಮತಿ ಸುಧಾಬಾಯಿಗೆ ಬಂಧುಗಳಾಗಿದ್ದಾರೆ.

ಇದಿಷ್ಟು ಶ್ರೀಮತಿ ಸುಧಾಬಾಯಿಯವರ ಬಹಳ ಸಂಕ್ಷಿಪ್ತವಾದ ಆತ್ಮಕಥನ. ಇನ್ನು ಮುಂದೆ ನಾವು ಆಕೆಯ ಸಾಹಿತ್ಯದ ಬಗ್ಗೆ ತಿಳಿಯೋಣ.

ಶ್ರೀಮತಿ ದೊಡ್ಡಿ ಸುಧಾಬಾಯಿಯವರ ಪದಗಳ ಒಂದು ಪಕ್ಷಿನೋಟ

ಸುಧಾಬಾಯಿಯವರು ಸ್ವಯಂ ಪ್ರತಿಭಾವಂತರು. ಜೊತೆಗೆ ಎರಡೂ ಮನೆಗಳ ಸಾಂಪ್ರದಾಯಿಕ ಸನ್ನಿವೇಶ, ಆ ಪರಿಸರದಲ್ಲೇ ಇದ್ದ ಹರಪನಹಳ್ಳಿ ಭೀಮವ್ವನ ಹಾಡುಗಳು ಮತ್ತು ಓರಬಾಯಿ ಲಕ್ಷ್ಮೀದೇವಮ್ಮನವರ ಪರಿಚಯ ಮತ್ತು ಹಾಡುಗಳು ಅವರ ಮೇಲೆ

Rarest Archiver

ಬೀರಿದ ಪ್ರಭಾವ ಅಲ್ಲದೆ ಗಂಡನ ಪ್ರೋತ್ಸಾಹಗಳು ಶ್ರೀಮತಿ ಸುಧಾಬಾಯಿಯವರ ಕವಿಚೇತನವನ್ನು ಹೊಡಿದೆಬ್ಬಿಸಿದುವು. ಒಂದು ಅರುಣೋದಯದಲ್ಲಿ ಅವರು ಅಡುಗೆಯ ಮನೆಯಲ್ಲಿ ಒಂದು ಸ್ವಪ್ನವನ್ನು ಕಂಡರು. ಅವರ ಮಾತುಗಳಲ್ಲೇ ಕೇಳೋಣ.

ಸ್ವಪ್ನಪದ

"ಮೂರು ಹತ್ತು ವರ್ಷದ ಹಿಂದೆ ಕಂಡೆ ಸ್ವಪ್ನವ
ಅರುಣೋದಯಕೆ ಮುನ್ನ ದೇವರಾ ಮನೆಯಲ್ಲಿ
ದೇವತಾ ಪುರುಷನು ವೀಣೆ ಕರದಿ ಪಿಡಿದು
ಹಸನ್ಮುಖನಾಗಿ ನಿಂತಿರುವುದನ್ನು ॥ 1 ॥

ಅಂದಿನಾ ದಿನದಲ್ಲಿ ನಾನು ಹರುಷದಿಂದಲಿ ಕೂಡಿ
ಮಿಂದು ದೇವರ ಮನೆಯಲ್ಲಿ ದೀಪವಾ ಹಚ್ಚಿಟ್ಟು
ಪ್ರಥಮ ಕವನವ ಮಾಡಿದೆ ಶ್ರೀ ರಾಘವೇಂದ್ರರ ತೀರ್ಥರ ॥ 2 ॥

ಇನ್ನೊಂದು ದಿವಸದಲಿ ನಾಲ್ಕು ಮಂದಿ ಬಂದು
ಕತ್ತಲೆಯ ಬಿಡಿಸಿದರು ಹರಿದಾಸರು।
ಎಂದು ತಿಳಿದು ಸ್ವಪ್ನವಾರ್ತೆಯ ಹೇಳಿದೆ
ನನ್ನ ಯಜಮಾನರಿಗೆ ನಾನು ॥ 3 ॥

ಇನ್ನೊಂದು ದಿನದಲ್ಲಿ ಅಂತರಿಕ್ಷದಿ ಕಂಡೆ
ಉನ್ನತ ಮಹಾಪುರುಷ ದೇದೀಪ್ಯ ವಾದಂಥ
ಕಾಂತಿ ಮುಖ, ವರ್ಚಸ್ಸು ಉಳ್ಳಂತ ಮಹನೀಯ
ಮೆಟ್ಟಿಲೇರುವುದು ಕಂಡೆ ॥ 4 ॥

ನದಿಯ ತೀರದಲಿ ನನ್ನನ್ನು ತಾ ಕಂಡು ಆ ಮಹಾ ಪುರುಷನು
ತೆರಳಿ ಪೋಗುತಲಿದ್ದ ವೇಂಕಟಾಚಲದ ಕಡೆಗೆ
ಎನ್ನನು ವೀಕ್ಷಿಸುತ ಹಸನ್ಮುಖದಿ ॥ 5 ॥

ಗುರುಗಳ ಆಜ್ಞಾನುಸಾರದಿಂದ ನಾನು
ನಮ್ಮ ಹಿರಿಯರ ಪುಣ್ಯದಿ ನಾನು
ಕಪಿಲನಾಮಕನೆಂದು ಅಂಕಿತವ ಪಡೆದೆ
ಸಕಲ ಶಬ್ದಗಳೆನ್ನ ಮುಖದಿ ಹೊಮ್ಮಿತು ಹರಿಕೃಪದಿ"

Rarest Archiver

ಸುಧಾಬಾಯಿಯವರು ಹೇಳುತ್ತಾರೆ :

"ನಾನು ಆ ಕಪಿಲನಾಮಕ ಪರಮಾತ್ಮನನ್ನು ನನ್ನ ಹಿರಿಯ ಮಗನೆಂಬ ಭಕ್ತಿಯಿಂದ ಭಾವಿಸಿ ಭಜಿಸುವೆನು. ಆ ವಿಶ್ವಕಂದ ವಿರಾಟರೂಪಿ ಪರಮಾತ್ಮನ, ಅನಂತಾನಂತ ರೂಪವುಳ್ಳ ಸರ್ವಶಬ್ದವಾಚ್ಯನಾದ ಆ ಭಗವಂತನಿಗೆ ಸರ್ವಸಮರ್ಪಣೆ ಮಾಡುವೆನು"

ಮುಂದೆ ಶ್ರೀಮತಿ ಸುಧಾಬಾಯಿಯವರು ಪುಂಖಾನುಪುಂಖವಾಗಿ ಬರೆಯತೊಡಗಿದರು.

ಅವರ ಮೊದಲನೆಯ ಕವನ

ಎಂಥಾ ಪ್ರತಿಭಾವಂತರು । ಗುರುರಾಘವೇಂದ್ರರೆಂಥಾ ಪ್ರತಿಭಾವಂತರು
ಇಂಥಾ ಸುಗುಣದಿ ಶಾಂತಾಚಿತ್ತದಿ ಏಕಾಂತಭಕ್ತರಾಗಿ ಶ್ರೀಕಾಂತನನ್ನೊಲಿಸಿಕೊಂಡ ॥1॥

ಪ್ರಹಲಾಗಿ ಇವರು, ಹರಿನಾಮ ಸ್ಮರಣೆ ಅನುಕ್ಷಣ
ಬಿಡದೆ ಮಾಡಿ, ಭಾಗವತ ಧರ್ಮಗಳ ಲೋಕಕ್ಕುಪದೇಶಮಾಡಿ
ಲಕ್ಷ್ಮೀನರಸಿಂಹನ ಪ್ರೀತಿಗೆ ಪಾತ್ರರಾದ ॥ 2 ॥

ವ್ಯಾಸಮುನಿ ಆಗಿ ಇವರು ಸದ್ಗ್ರಂಥಗಳ ಭೂ ಸುರರಿಗರ್ಪಿಸಿ
ವಾಸುದೇವ ಮಹಿಮೆ ಜಗಕೆ ಸಾರುತ ಬಂದು ಮುಂದೆ
ಮಂತ್ರಾಲಯದಿ ನಿಂತ ಮಹನೀಯರಿವರು ॥ 3॥

ಬಂದ ಭಕ್ತರಿಗೆಲ್ಲ, ಇಷ್ಟಾರ್ಥ ಕೊಟ್ಟು ಕಾಪಾಡುವಂಥ ಗುರುಗಳು
ಕಪಿಲನಾಮಕ ಪರಮಾತ್ಮನ್ನ ಭಜಿಸುವರು, ಎಲ್ಲಿ ಕಂಡಿಲ್ಲ
ಇಂಥ ಗುರುಗಳ ಮಹಿಮೆಯ ॥ 5 ॥

ಅಂದಿನಿಂದ ಶ್ರೀಮತಿ ಸುಧಾಬಾಯಿಯವರು ಅವ್ಯಾಹತವಾಗಿ ಪದಗಳನ್ನು ರಚಿಸತೊಡಗಿದರು. ಒಂದೊಂದಾಗಿ ನೋಡೋಣ.

ಪದ 73 ರಾಗ : ವಿಜಯನಾಗರಿ

ಸಣ್ಣ ಸಣ್ಣ ಹೆಜ್ಜೆನಿಟ್ಟು, ಪುಟ್ಟಪುಟ್ಟ ಹೆಜ್ಜೆನಿಟ್ಟು, ಸಣ್ಣ ಕೃಷ್ಣ ಬಾರೋ
ಬೆಣ್ಣೆ ಕೃಷ್ಣ ಬಾರೋ ಪ ॥ ಉಡುಪಿ ಕೃಷ್ಣ ಬಾರೋ ಉರಗಶಯನ
ಬಾರೋ । ಬೇಡಿಕೊಂಬೆನಯ್ಯಾ ಬೇಗ ಬಾರೋ ॥ ಅ ॥ ಪ ॥

Rarest Archiver

ನವನೀತ ಚೋರಾ । ಗೋಪಿಯರ ಜಾರಾ । ಬೃಂದಾವನ ವಿಹಾರಾ
ರಾಧಾ ಮನೋಹರಾ । ಬೃಂದಾವನ ವಿಹಾರಾ । ರಾಧಾ ಮನೋಹರಾ
ಅಸುರ ಸಂಹಾರಾ ಯಶೋದಾ ಕುವರಾ ಬೇಗ ಬಾರೋ ॥ 1 ॥

ದೇವಕೀ ಕಂದಾ । ಯಶೋದಾನಂದಾ । ನಂದನಕಂದಾ । ಬೇಗ ಬಾರೋ ॥ 2 ॥

ಲೋಲ ಕುಂಡಲಧರ । ಲೋಕ ವಿಲಕ್ಷಣ
ಆಶ್ರಿತ ಪಾಲಬಾರೋ । ಕಪಿಲನಾಮಕ ಪರಮಾತ್ಮಾ ಕರುಣಿಸು
ಕಾಮಿತ ಫಲದಾಯಕ ಬಾರೋ ॥ 3 ॥

ಇದೊಂದು ಸುಂದರವಾದ ಹಾಡು.

ಆಂಧ್ರದ ಸನ್ನತಿಯಲ್ಲಿರುವ ಚಂದ್ರಲಾಂಬೆಯ ಹಾಡು

ಪಾಲಿಸೆ ನೀ ಚಂದ್ರಲಾಂಬೆ ಸೀತಾಮಾತೆ । ಪಾಲಿಸೆ ಚಂದ್ರಲಾಂಬೆ ॥ ಪ ॥

ಬಾರೇ ಭಾಮಿನಿ ಲೀಲೆ ತೋರುತ ಬೇಗ ಭಕ್ತರ ಭಾವವರಿತು
ಬಾರಿ ಬಾರಿಲಿ ನಿನ್ನ ಸ್ತುತಿಸುವೆ ಬೇಗ ತಾಯೇ ಬೇಡಿ ಕೊಂಬೆನೇ ॥ 1 ॥

ಪದ : 33

ಪಾಲಿಸೆ ನೀ ಚಂದ್ರಲಾಂಬೆ ಸೀತಾಮಾತೆ ಪಾಲಿಸೆ ನೀ ಚಂದ್ರಲಾಂಬೆ ॥ ಪ ॥

ಬಾರೆ ಭೂಮಿಲಿ ಲೀಲೆ ತೋರುತ ಬೇಗ ಭಕ್ತರ ಭಾವವರಿತು
ಬಾರಿಬಾರಿಲಿ ನಿನ್ನ ಸ್ತುತಿಸುವೆ - ಬೇಗ ತಾಯೇ ಬೇಡಿಕೊಂಬೆನೆ
ಭೀಮಾ ತಟವಾಸಿನಿ ವೆಂಕಟರಮಣನ ಬಿಂಕದರಾಣಿ
ಬಿಡದೆ ಅಸುರನ ಭೀಮಾನದಿಯಲ್ಲಿ ಭ್ರಮರಗಳಿಂದ ಹತವ ಮಾಡಿಸಿ,
ಸನ್ನತಿ ಕ್ಷೇತ್ರದಿ ನಿರಣ ಉತ್ತುಮ ಪಾದಕ್ಕೆ ನಮಿಪೆ ॥ 2 ॥

ಪಿಠಾಪುರ ಪಿಂಗಳಾಂಬೆ, ಕೊಲ್ಲಾಪುರ ಮಹಾಲಕ್ಷ್ಮಿದೇವಿ
ಕಪಿಲನಾಮಕ ಪರಮಾತ್ಮನ ದಯದಿ ಭಕ್ತರಿಗಭೀಷ್ಟವಿತ್ತು
ಕರವ ಮುಗಿವೆನು ಕರುಣದಿಂದಲಿ ಕರೆದು ವರಗಳ ಕರುಣಿಸಮ್ಮ ॥ 3 ॥

ಶ್ರೀಮತಿ ದೊಡ್ಡಿ ಸುಧಾಬಾಯಿಯವರು **14** ಪುಸ್ತಕಗಳನ್ನು ಬರೆದಿದ್ದಾರೆ.

Rarest Archive

1. ಹರಿಗುರುಭಜನ ಸಭಾ
2. ವ್ರತ ಪಾರಿಜಾತ
3. ಕಪಿಲ ಕೀರ್ತನ ಮಂಜರಿ
4. ವೈಷ್ಣವ ಸ್ತ್ರೀ ಧರ್ಮಗಳು
5. ಪತಿವ್ರತಾ ಶಿರೋಮಣಿಗಳ ಕಥೆಗಳು
6. ಶ್ರೀಮನ್ಮಹಾಭಾರತ ಉಪಜೀವಿಕಾ
7. ಕ್ಷರಾಕ್ಷರಕ್ಕೆ ಉತ್ತಮ ಪುರುಷ ಶ್ರೀ ಹರಿಮಹಿಮೆ
8. ಕೃಷ್ಣ ಚರಿತಮಧುರಾಮೃತ
9. ಷೋಡಶಕರ್ಮಗಳು
10. ಶ್ರೀಮಧ್ವಲೀಲಾಮೃತ
11. ತೀರ್ಥ ಕ್ಷೇತ್ರಮಹಿಮೆ
12. ಶುಭಪ್ರದಗೌರಿ ಹಾಡುಗಳು
13. ದೇವರ ನಾಮದ ಕ್ಯಾಸೆಟ್ ಬಿಡುಗಡೆಯಾಗಿದೆ.
14. ಓರಬಾಯಿ ಲಕ್ಷ್ಮೀದೇವಮ್ಮನವರ ಕೃತಿಗಳ ಸಂಗ್ರಹ

"ಇವೆಲ್ಲಾ ಕಪಿಲಾಂತರಂಗ ಸುಧಾ" ಪುಸ್ತಕದಲ್ಲಿ ಅಚ್ಚಾಗಿದೆ.

ಪದ 36

ಶ್ರೀಮತಿ ದೊಡ್ಡಿ ಸುಧಾಬಾಯಿಯವರು ಬರೆದ ಈ ಲಕ್ಷ್ಮೀಪದ ತುಂಬಾ ಚೆನ್ನಾಗಿದೆ

**ಎದ್ದು ಬರುತಾಳೆ ನೋಡೆ, ತಾ ಎದ್ದು ಬರುತಾಳೆ**
**ಮುದ್ದು ವರಲಕ್ಷ್ಮಿ ವಜ್ರದಾ ಪೀಠಕೆ** ॥ 1 ॥

**ಮುರಹರನರಸಿ ತಾ । ಮುದದಿಂದ ಬರುತಾಳೆ**
**ಮೂರ್ಜಗದೊಡೆಯನ ಮುದ್ದು ಮಹಾಲಕ್ಷ್ಮಿ** ॥ 2 ॥

Rarest Archive

ಕಾಲಲ್ಲಿ ಕಿರುಗೆಜ್ಜೆ। ನಡುವಿಗೆ ವಡ್ಯಾಣ
ಮುತ್ತಿನ ಮೂಗುತಿಯಿಟ್ಟು ಘಲ್ ಘಲ್ ಎನುತಲಿ ॥ 3 ॥
ಶ್ರೀರಂಗನೊಡನೆ ಶೃಂಗಾರವಾಗಿ
ಮಂಗಳಾಂಗಿತಾ ಹರುಷದಿಂದಲಿ ॥ 4 ॥

ಕಪಿಲನಾಮಕ ಪರಮಾತ್ಮನ ಪಟ್ಟದರಸಿ
ಉರಗಶಯನನ ಕೂಡಿ ಉದ್ಧರಿಸುವುದಕ್ಕೆ ॥ 5 ॥

ಪದ : 39 ರಾಗ : ತೋಡಿ

ಏನು ಶ್ರೇಷ್ಠಳೋ ಲಕ್ಷ್ಮೀ ಅಷ್ಟಭಾಗ್ಯಳೋ ॥ ಪ ॥

ಗಾನಲೋಲ ಹರಿಯಾ ಹೃದಯ ಸ್ಥಾನದಲಿ ಪ್ರತಿಷ್ಠಳೋ ॥ ಅ ॥ ಪ ॥

ದ್ವಿತೀಯ ಸ್ಥಾನದೊಳಿರುತಿಹಳೋ। ಪ್ರಥಮ ಸ್ಥಾನದ ಹರಿಯಮನವ
ಅರಿತು ತಾನು ಸೇವೆ ಸರ್ವಸೇವೆಯ ಮಾಡಿ ಸರ್ವೇಶನ ಸದಾ ಭಜಿಸುತಿಹಳು ॥ 1 ॥

ಪ್ರಳಯಕಾಲದಿ ಆಲದೆಲೆಯ ಮೇಲೆ ಮಲಗಿದ್ದ ಹರಿಯ ಸುತ್ತ ತಿರುಗಿ
ಶೃತಿಗೀತೆಯನ್ನು ಪಾಡುತಲಿ ಸ್ತುತಿಸುವಳು ಶ್ರೀ ಭೂ ದುರ್ಗೆ ಎನಿಸಿ ॥ 2 ॥

ಸೃಷ್ಟಿಗೊಡೆಯ ಶ್ರೀ ಕಪಿಲನಾಮಕನ। ಅಷ್ಟವಿಧದಿ ಸೇವಿಪ ಲಕ್ಷ್ಮಿಯ
ನಿಷ್ಠೆಯಿಂದ ಕಷ್ಟ ಕಳೆದು ಸೌಭಾಗ್ಯವೀವಳೋ ॥ 3 ॥

ಸುಧಾಬಾಯಿಯವರ ತೌರುಮನೆ ಕಡೆಯ ಬೊಜ್ಜಮ್ಮನವರಿಗೆ ತುಳಸೀದೇವಿಯಿಂದ ಒಂದು ಸೂಚನೆ ಬರುತ್ತದೆ. ತುಳಸಿಯು ತಾನು ರಂಗನಾಥನ ಮಂದಿರದ ಹಿಂದೆ ಇದ್ದೇನೆ. ಅಲ್ಲಿ ನೆಲವನ್ನು ಅಗೆದರೆ ನಾನು ಸಿಗುತ್ತೇನೆ ಎಂದಳು ತುಳಸಿ. ಹಾಗೆ ಅಗೆದು ನೋಡಿದಾಗ ನಿಜವಾಗಿಯೂ ಅಲ್ಲಿ ಗಿಡ ಸಹಿತ ತುಳಸೀ ಬೃಂದಾವನವು ದೊರಕಿತು. ಮನೆಯವರು ಆ ಬೃಂದಾವನವನ್ನು ತಂದು ಪೂಜೆ ಮಾಡಿದರು. ನಂತರ ರಂಗನಾಥನೊಡನೆ ಪ್ರತಿವರ್ಷ ಕಾರ್ತೀಕ ಶುದ್ಧ ದ್ವಾದಶಿಯಂದು ತುಳಸೀ ಕಲ್ಯಾಣವನ್ನು 180 ವರ್ಷಗಳಾಗಿರಬಹುದು. ಪ್ರತಿವರ್ಷವೂ ತಪ್ಪದೆ ಮಾಡುತ್ತಿದ್ದಾರೆ. ಅದರ ಒಂದು ವರ್ಣನೆ ಈ ಹಾಡಿನಲ್ಲಿದೆ.

Rarest Archives

**ಪದ 86** ರಾಗ : ಶಂಕರಾಭರಣ

ದೊಡ್ಡ ಬೀದಿ ಒಳಗಿಂದಾ ತಲ್ವಗಿರಿರಂಗ ಗರುಡನೇರಿ ಬಂದಾ ॥ ಪ ॥

ಉತ್ಥಾನ ದ್ವಾದಶಿ ಬೆಳಗಿನ ಝಾವದಿ ಕಸ್ತೂರಿ ರಂಗಯ್ಯ ಪುನಗು ಜವ್ವಾಜೀ ಹಚ್ಚಿಕೊಂಡು ಅಭಿಷೇಕ ಮಾಡಿಕೊಂಡು ಮುತ್ತಿನಾರ್ತಿ ಹೋಳಿಗಿ ಪಾಯಸ ನೈವೇದ್ಯ ಸ್ವೀಕರಿಸಿದ ಶ್ರೀರಂಗಾ ॥ 1 ॥

ಮೇಳತಾಳಗಳಿಂದ ವಿವಿಧ ವಾದ್ಯಗಳಿಂದ ವೇದಘೋಷ, ಮಂಗಳಾಷ್ಟಕ, ಮಂತ್ರಗಳಿಂದಾ । ಹೂವಿನ ಅಲಂಕಾರ ವಿರಾಜಿಸುತ । ವೈಭವದಿ ಧೂಪ - ದೀಪ ಮಂಗಳಾರ್ತಿ ಮೋಹಿಸುತ್ತ ಬೀದಿಯಲ್ಲಿ ॥ 2 ॥

ವೇಮಗಂಟಿ ವಂಶಜರ ಉತ್ತಮ ಗೃಹಕೆ, ವೆಂಕಟರಾಯ ಬೊಜ್ಜಮ್ಮನವರ ಆಶೀರ್ವಾದದಿ ಸಾಲುದೀಪ ಸಂಭ್ರಮದಿ ವೈಜಯಂತಿ ಮಾಲೆ ಧರಿಸಿ । ನಾರಾಯಣ ಮನೆಗೆ ಬಂದ ವೈಯಾಳಿ ನೀಡುತ್ತ ಬೇಗಾ ॥ 3 ॥

ತೊಟ್ಟಿಲಲ್ಲಿತುಳಸಿ ದೇವಿ ಅಲಂಕೃತಳಾಗಿ । ಗರುಡಾರೋಹಿ ರಂಗನಾಥನ ಎದುರ್ಗೊಂಡು । ವಿವಾಹ ಸಂಭ್ರಮ ವಿಪ್ರರ ವೃಂದವು ಕಪಿಲನಾಮಕ ಪರಮಾತ್ಮನ ನೋಡುವುದೇ ನಯನಾನಂದಾ ॥ 4 ॥

## ಶ್ರೀ ಕೃಷ್ಣಪರಮಾತ್ಮನ ಜಲಕ್ರೀಡೆ ರಾಸಕ್ರೀಡೆಗಳು

ಬೃಂದಾವನದಿ ನಲಿಯುವ ಕೃಷ್ಣನ ಅಂದವು ಚೆಂದವು ನೋಡಿರಿ ನೋಡಿ ಪಾಡಿ ಕೊಂಡಾಡಿ । ಧ್ಯಾನವು ಮಾಡೋಣ ಬನ್ನೀರಿ ॥ 1 ॥

ಒಂದು ದಿವಸ ಯಮುನಾ ತೀರದಿ ಚಂದದ ಕೃಷ್ಣನ ಕೊಳಲದನಿ ಕೇಳಿ ಸುದತಿಯರೆಲ್ಲರು ಮುದದಿ, ತೆರಳಿದರು ಬೇಗ ಕೃಷ್ಣನ ಬಳಿಗೇ ॥ 2 ॥

ಸುಂದರಾಂಗಿಯರು ಮಂದಿರ ಕೆಲಸಗಳೆಲ್ಲವ ಬಿಟ್ಟು ಮೈಮರೆತೂ, ಕೃಷ್ಣನಿದ್ದಲ್ಲಿ ಸುತ್ತುಕಟ್ಟಿ ನಿಂತೂ ಕುಣಿಯುತಲೀ ನಲಿದಾಡುತಲೀ ॥ 3 ॥

ರಮಾಪತಿಯ ಸಹೋದರಿ ಪೂಜೆಯ ಮಾಡಲು ಗೋಪಿಯರೆಲ್ಲರು ಸ್ನಾನ ಮಾಡಲು ಯಮುನೆಯಲ್ಲಿಳಿಯಲು, ಸೀರೆಗಳೆಲ್ಲವು ಮಾಯವಾದುವು ॥ 4 ॥

Rarest Archiver

ಯಮುನಾ ತಟದ ವೃಕ್ಷದ ಮೇಲೆ ವಸ್ತ್ರಗಳೆಲ್ಲವು ಕದ್ದೊಯ್ದನು । ಅಹಂಕಾರ ಬಿಟ್ಟು ಕೈ ಮುಗಿದು ಕೇಳಲು ವಸ್ತ್ರವ ಕೊಟ್ಟನು ಗೋಪಿಯರಿಗೆ ॥ 5 ॥

ವಸ್ತ್ರವ ಧರಿಸಿ ಗೋಪಿಕಾಸ್ತ್ರೀಯರು ಕೃಷ್ಣನೊಡನೆ ನಾಟ್ಯವಾಡಿದರು, ಒಬ್ಬೊಬ್ಬರೊಡನೆ ಒಂದೊಂದು ರೂಪದಿ ನಾಟ್ಯವಾಡಿದನೂ ॥ 6 ॥

ಏನು ಪುಣ್ಯ ಮಾಡಿದರೋ ಗೋಪಿಯರು, ಕೃಷ್ಣನ ಸಂಗಡ ವಿಹರಿಸಲು. ಕಪಿಲನಾಮಕ ಪರಮಾತ್ಮನು ಅವರಿಗೆ ಮುಕ್ತಿಯ ಕೊಟ್ಟು ಸಲಹಿದನು ॥ 7 ॥

ಭಕ್ತಿಯಿಂದ ಕೃಷ್ಣ ಚರಿತೆಯ ಹೇಳಿ ಕೇಳಿದ ಸದ್ಭಕ್ತರನೂ ಶ್ರೀ ಕೃಷ್ಣನು ಮುಕ್ತಿಯ ಕೊಟ್ಟು ಸಲಹುವನು ॥ 8 ॥

(ನಿಸರ್ಗವರ್ಣನೆಯನ್ನೂ ಮಾಡಿ ವಸ್ತ್ರವನ್ನು ಕದ್ದೊಯ್ದದ್ದಕ್ಕೆ ಅದರ ಸಂಕೇತವನ್ನೂ ಹೇಳಬಹುದಿತ್ತು, ಹೆಂಗಸರಾಗಲೀ, ಗಂಡಸರಾಗಲೀ ಮೈಮೇಲೆ ಒದ್ದೆ ಬಟ್ಟೆಯನ್ನು ಉಟ್ಟುಕೊಂಡೇ ಸ್ನಾನ ಮಾಡಬೇಕು. ಬರಿಯ ಮೈಯಲ್ಲಿ ಮಾಡಬಾರದೆಂಬುದನ್ನೂ ತಿಳಿಸಬೇಕಿತ್ತು).

ಶ್ರೀಮತಿ ದೊಡ್ಡಿ ಸುಧಾಬಾಯಿಯವರ ಇಷ್ಟದೈವ ಶ್ರೀರಾಮಚಂದ್ರ ಅವನನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿದ್ದಾರೆ. ಈ ಕೆಳಗೆ ಕೊಟ್ಟಿರುವ ಹಾಡಿನಲ್ಲಿ ಇಡೀ ರಾಮಾಯಣವನ್ನು ಹಿಡಿದಿಟ್ಟಿದ್ದಾರೆ :

**ಪದ - 64** **ಹಿಂದೋಳ ರಾಗ - ಆದಿತಾಳ**

ಶ್ರೀರಾಮನ ಚರಿತೆಯ ಕೇಳಿ ಜನರು । ಶ್ರೀ ರಾಮನ ನೆನೆದರೆ ಅನುದಿನ ಪಾಪಗಳೆಲ್ಲವು ಪರಿಹರಿಸುವುದು ॥ ಪ ॥

ದಶರಥರಾಜ ಪುತ್ರಕಾಮೇಷ್ಟಿ ಮಾಡಿ । ಶ್ರೀರಾಮಚಂದ್ರನಾದಿ ಪುತ್ರ ರತ್ನಗಳ ಪಡೆದಾ । ರಘುರಾಮನ ಚರಿತೆಯ ಕೇಳಿ ಜವರು ॥ 1 ॥

ಕೌಸಲ್ಯಾ ಸುತ ಸೌಮಿತ್ರಿ ಸಹಿತ ತಪಸಿಯಾಗವ ಕಾಯ್ದು ತಾಟಕಿ ಸಂಹರಿಸಿ, ಕೋದಂಡರಾಮನ ಚರಿತೆಯ ಕೇಳಿ ಜನರು ॥ 2 ॥

ಶಿಲೆಯನು ಸ್ತ್ರೀ ಮಾಡಿ ಶಿವಧನುವನು ಮುರಿದು ಸೀತೆಯ ಕೈ ಪಿಡಿದು ಕಲ್ಯಾಣವಾದಂಥ ಸೀತಾ ರಾಮರ ಚರಿತೆಯ ಕೇಳಿ ॥ 3 ॥

Rarest Archive

ಕೈಕೆಯಾಜ್ಞೆಯಂತೆ ಸೀತಾಲಕ್ಷ್ಮಣರ ಸಹಿತ ವನವಾಸಕೆ ಪೋಗೀ
ಭರತಗೆ ಪಾದುಕೆ ಕೊಟ್ಟ ಕೋದಂಡರಾಮನ ಚರಿತೆಯ ಕೇಳಿ ॥ 4 ॥

ಅಸುರ ಮೋಹಕನಾಗಿ ಸೀತೆಯ ಕಳೆದುಕೊಂಡು ಜಟಾಯುಗೆ
ಮುಕ್ತಿ ಕೊಟ್ಟ ಜಾನಕಿ ರಾಮನ ಚರಿತೆಯ ಕೇಳೀ ॥ 5 ॥

ಸೀತೆ ವಿರಹದಿಂದ ನೊಂದ ಶ್ರೀರಾಮನು ವಾಲಿ ನಿಗ್ರಹ ಮಾಡಿ
ಸುಗ್ರೀವಗೆ ಅಭಯವ ಕೊಟ್ಟ ರಘುರಾಮನ ಚರಿತೆಯ ಕೇಳೀ ॥ 6 ॥

ಲಂಕೆಗೆ ಹಾರಿ ಹನುಮ ಸೀತೆಗೆ ಮುದ್ರಿಕೆ ಕೊಟ್ಟು ಲಂಕಾ ಪಟ್ಟಣ
ಸುಟ್ಟು ಚೂಡಾಮಣಿ ತಂದ ಸೀತಾರಾಮ ಚರಿತೆಯ ಕೇಳೀ ॥ 7 ॥

ಸೀತಾ ವಾರ್ತೆಯ ಕೇಳಿ ಹರುಷದಿ ರಾಮನು ಕಪಿಗಳ ಸಹಾಯದಿ
ಸೇತುವೆ ಕಟ್ಟಿಸಿದಂಥಾ ಹನುಮಂತನ ಪ್ರಭುವಾದ ರಾಮಚರಿತೆಯ ಕೇಳೀ ॥ 8 ॥

ದುಷ್ಟ ರಾವಣನನ್ನು ಕೊಂದು ಸೀತೆಯ ಸೆರೆ ಬಿಡಿಸಿ ಅಗ್ನಿ ಪರೀಕ್ಷೆ ಮಾಡಿಸಿ ।
ವಿಭೀಷಣಗೆ ಪಟ್ಟ ಗಟ್ಟುವ ಕಟ್ಟಿದ ಶ್ರೀ ರಾಮಚಂದ್ರನ ಕತೆಯನು ಕೇಳಿ ॥ 9 ॥

ಪುಷ್ಪಕ ವಿಮಾನದಲಿ ಸೀತಾದೇವಿಯ ಸಹಿತ ಅಯೋಧ್ಯೆಗೆ
ಮರಳಿ ಬಂದ ಅಯೋಧ್ಯರಾಮನ ಕತೆಯನು ಕೇಳೀ ॥ 10 ॥

ಕಪಿಲನಾಮಕ ಪರಮಾತ್ಮನು ತಾನು ಪಟ್ಟಾಭಿಷಿಕ್ತನಾಗಿ
ರಾಮರಾಜ್ಯವಾಳಿದಂಥ ಪಟ್ಟಾಭಿರಾಮನ ಚರಿತೆಯ ಕೇಳಿ ॥ 11 ॥

**ಪದ - 111 ವಿಜಯ ಕವಚದ ಧಾಟಿ**

ಸ್ಮರಣೆ ಮಾಡಿರೋ ದಿವ್ಯ ಹರಿಯ ನಾಮವಾ
ಶಿರಿಯ ರಮಣನಾದ ಶ್ರೀರಾಮನಾಮವಾ ॥ 1 ॥

ಹರಿಯ ನಾಮ ಪ್ರಹ್ಲಾದನಾ ಮೊರೆಯ ಕೇಳಿವದಗಿತೂ
ಹರಿಯ ನಾಮ ಧ್ರುವನಿಗೇ ರಾಜ್ಯವನ್ನು ಕೊಟ್ಟಿತೂ ॥ 2 ॥

ಹರಿಯ ನಾಮ ದ್ರೌಪದಿಗೆ ಅಕ್ಷಯ ವಸ್ತ್ರ ನೀಡಿತೂ
ಹರಿಯ ನಾಮ ಶಿಲೆಯನ್ನು ಸ್ತ್ರೀಯಾಗಿ ಮಾಡಿತೂ ॥ 3 ॥

Rarest Archiver

ಹರಿಯ ನಾಮ ಭೀಷ್ಮಕನಾ ಸ್ತುತಿಗಳಿಗೆ ಮೆಚ್ಚಿತೂ
ಹರಿಯ ನಾಮ ಶಬರಿಗೇ ಮುಕ್ತಿಯನ್ನು ಕೊಟ್ಟಿತೂ ॥ 4 ॥

ಹರಿಯ ನಾಮ ವಿದುರನಾ ಹಾಲಿಗೆ ಹಿಗ್ಗಿತೂ
ಹರಿಯ ನಾಮ ಅಂಬರೀಷನ ವ್ರತವ ಸಂರಕ್ಷಿಸಿತೂ ॥ 5 ॥

ಹರಿಯ ನಾಮ ವಿಭೀಷಣಗೆ ಪಟ್ಟವನ್ನು ಕಟ್ಟಿತ್ತೂ
ಹರಿಯ ನಾಮ ಕರಿರಾಜನ ಕಷ್ಟ ಬಿಡಿಸಿತೂ ॥ 6 ॥

ಹರಿಯ ನಾಮ ಪಾಂಡವರನ್ನು ಸಂರಕ್ಷಿಸಿತೂ ।
ಹರಿಯ ನಾಮ ಭಕ್ತರ ಅಭೀಷ್ಟಗಳ ಫಲಿಸಿತೂ ॥ 7 ॥

ಕಪಿಲನಾಮಕ ಪರಮಾತ್ಮನ್ನ ಭಕ್ತಿಯಿಂದ ಭಜಿಸುತ
ಮುಕ್ತಿ ಪಡೆಯಿರಿ ಸದ್ಭಕ್ತರೆಲ್ಲರೂ ॥ 8 ॥

**ಪದ 100** ಸುಳಾದಿ

ಸಿರಿರಮಣನ ಚರಣ ಸ್ಥಿರವಾಗಿ ನಂಬಿ ದೃಢಭಕುತಿ ಮಾಡುವರು ಧನ್ಯರೂ ಧನ್ಯರು
ನಖದರುಶನದಿ ನರಕಭಯವಿಲ್ಲ, ಪಾದದರುಶನದಿ ಪಾಪಲೇಪಿಸುವುದಿಲ್ಲ ।
ಕಿರೀಟ ದರುಶನದಿ ಕರವೆತ್ತಿ ಕಾಪಾಡುವ ಕಪಿಲಾಖ್ಯನು ॥ 1 ॥

ಶಂಖ ಚಕ್ರಗದೆ ಪದ್ಮಾಂಕಿತ ಸಚ್ಚಿದಾನಂದ ಸ್ವರೂಪನಾದ ಸ್ವಾಮಿಯ ।
ಸರ್ವಾಂಗ ದರುಶನದಿ । ಸಕಲಾಭೀಷ್ಟ ಸಿದ್ಧಿಸುವುದು ಕಪಿಲನಾಮಕ ಪರಮಾತ್ಮನ
ದಯದಿ॥ 2 ॥

ಸ್ಥಿರ ವೈಕುಂಠ ಪುರದಲ್ಲಿ ಶ್ರೀ ಭೂದೇವಿಯರ ಸೇವೆಗೊಳ್ಳುತಿಹ ಶ್ರೀಕಾಂತನು,
ಬ್ರಹ್ಮಾದಿ ದೇವತೆಗಳೂ ಸ್ತೋತ್ರ ಮಾಡುತ್ತಿರೆ ಋಷಿಗಳು ಪೊಗಳುತಿರೆ, ಕಪಿಲಾಖ್ಯ
ಸ್ವಾಮಿ ಸದ್ಭಕ್ತರನು ಪೊರೆವ ॥ 3 ॥

ಶ್ರೀನಿವಾಸನ ದಯದಿ ಪಾಪಗಳು ತೀರಿಹೋಗುವುವು
ಶೇಷಾಚಲನು ಪೋಷಿಸುವ ಭಕ್ತರನು, ಕಪಿಲನಾಮಕ
ಪರಮಾತ್ಮನು ಕರುಣದಿಂದ ರಕ್ಷಿಸುವನು ॥ 4 ।.

ಬದರಿನಾರಾಯಣನೆಂದರೆ ಭಯಪರಿಹಾರನು । ಲಕ್ಷ್ಮೀ ನಾರಾಯಣನೆಂದರೆ ಲಕ್ಷ

Rarest Archives

ಪುಷ್ಪ ಅರ್ಪಿಸಿದ ಫಲ ಹರಿನಾರಾಯಣನೆಂದರೆ ಅಭಯ ಪ್ರದಾತನು । ವೆಂಕಟನೆಂದರೆ ಸಂಕಟ ಪರಿಹಾರ । ಕಪಿಲನಾಮಕನ ನೆನೆ ಮನವೆ ಅನುದಿನದಿ ॥ 5 ॥

(ಇದು ಸುಳಾದಿಗೆ ಸರಿಹೊಂದುವುದಿಲ್ಲ. ಸುಳಾದಿ ತಾಳ ಪ್ರಧಾನವಾದುದು. ಸಪ್ತತಾಳಗಳಲ್ಲಿ ಐದಾದರೂ ಇರಬೇಕು. ಕೊನೆಗೆ ಜತೆಯೂ ಇರುತ್ತದೆ.)

## ಉಗಾಭೋಗ

ಒಂದು ಕೈಯಲ್ಲಿ ಕಡಗೋಲು, ಒಂದು ಕೈಯಲ್ಲಿ ನೇಣುಪಿಡಿದು ನಿಂತಿದ್ದ ಅಂದವಾಗಿ ಬಾಲದುಡುಗೆಯನಿಟ್ಟು ಬಾಲೆ ರುಕ್ಮಿಣಿಯ ಅಭೀಷ್ಟದಂತಿದ್ದು। ದ್ವಾರಕಾದಿಂದ ಬಂದು ಉಡುಪಿಯಲಿ ನಿಂತಿಹನು, ಮಧ್ವ ಸರೋವರ ತೀರದಿ, ಬಾಲಕೃಷ್ಣನು ಮಧ್ವರಾಯರ ಕರದಿಂದ ಪ್ರತಿಷ್ಠಿತನಾಗಿ ಸರ್ವ ಸದ್ಭಕ್ತರಿಗೆ ಅಭಯವ ಕೊಡುತ, ಕನಕನ ಕಿಂಡಿಲಿ ದರುಶನ ಕೊಡುವ ಕಪಿಲನಾಮಕ ಪರಮಾತ್ಮನು, ಸರ್ವೋತ್ತಮನು ॥

## ಚಕ್ರಾಬ್ಜಮಂಡಲದ ಹಾಡು

**ಪದ 216** ಸಾವೇರಿ ರಾಗ - ಆದಿತಾಳ

ಘೃಣಿ ನಾಮಕ ಸೂರ್ಯ ನಾರಾಯಣನೇ । ಅಣು ರೇಣು, ತೃಣಕಾಷ್ಠ ಪರಿಪೂರ್ಣ ನೀನೇ
ಘನವಾದ ಚಕ್ರಾಬ್ಜ ಮಂಡಲದಿ ನಿಂತು । ಸುನಾಯಾಸದಿಂದಾಳುವಿ - ವಿಶ್ವವ
ಘೃಣಿನಾಮಕ ಸೂರ್ಯನಾರಾಯಣನೇ ನಿನಗೆ ನಮೋ ॥ 1 ॥

ಅಧಿಷ್ಠಾನ ದೇವತೆ ಪ್ರಥಮ ಗಣೇಶಾ । ತದಭಿಮಾನಿ ದೇವತೆಗಳಿರಾ ।
ಅಂತರ್ಗತ ಮುಖ್ಯಪ್ರಾಣ ಶ್ರೀ ಲಕ್ಷ್ಮೀ ವೆಂಕಟೇಶನೆ ನಿನ್ನ ಪಂಚಗೋಳದಿ ಚಿಂತಿಪೆ
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 2 ॥

ಶ್ರೀಭೂದುರ್ಗೆಯರೊಡಗೂಡಿ ಸೂರ್ಯಚಂದ್ರ ಅಗ್ನಿ ಮಂಡಲದಿಂ ।
ಇಚ್ಛಾಜ್ಞಾನ ಶಕ್ತಿಗಳಿಂದ ತ್ರಿಕೋನ ಮಂಡಲ ತ್ರಿಧಾಮನೆ
ಘೃಣಿ ನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 3 ॥

ಅಜಗಜರಥ ವೀಧಿವಲಯಗಳಲ್ಲಿ ಷಣ್ ಮಹಿಷಿಯರಿರುವ ಷಟ್‌ದಳದಿ । ದ್ವಾದಶ
ರಾಶಿಲಿ ತಿರುಗುತ ಕ್ರಮದಿ ಷಟ್ ಋತುಗಳ ಕೂಡಿ ಕಾಲ ಚಕ್ರವ ನಡೆಸುವಿ ।
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 4 ॥

Rarest Archiver

ಬ್ರಹ್ಮಾಂಡದ ಪಿಂಡಾಂಡದಲಿ ತನು ಚತುಷ್ಟ ಎಂಬೀ ದೇಹದಲಿ
ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ಚತುರೂಪಗಳಿಂದ ಲೋಕಗಳಾಳುವಿ
ಘೃಣಿ ನಾಮಕ ಸೂರ್ಯ ನಾರಾಯಣನೆ ನಿನಗೆ ನಮೋ ನಮೋ ॥ 5 ॥

ಅಷ್ಟ ಕರ್ತೃತ್ವದ ವಿಶ್ವನಾಮಕನೇ ಅಷ್ಟದಳದ ಪ್ರಣವ ಶಬ್ದವಾಚ್ಯನೆ
ಗ್ರಹನಕ್ಷತ್ರಗಳ ನಿಯಂತ್ರಿಸುವಿ. ಶಿಂಶುಮಾರ ಮೂರ್ತಿ ಶ್ರೀ ನಾರಾಯಣಾಯ ನಮಃ

ಘೃಣಿ ನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 6 ॥

ಪದ್ಮಾಸನನಿಗೆ ಶ್ರೀ ಪದ್ಮನಾಭನು ಪದ್ಮನಯನ ಪ್ರಣವ
ಮಂತ್ರವ ಹೇಳಿದನು ಅಕಾರುಕಾರಮಕಾರನಾದ ಬಂದು
ಘೋಷ ಶಾಂತಾತಿ ಶಾಂತಮಹಾ ಮಂತ್ರವು
ಘೃಣಿ ನಾಮಕ ಸೂರ್ಯ ನಾರಾಯಣನೆ ನಿನಗೆ ನಮೋ ನಮೋ ॥ 7 ॥

ವಿಶ್ವ ತೈಜಸ ಪ್ರಾಜ್ಞ ತುರ್ಯಾತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ
ಅಷ್ಟರೂಪದಿಂ ದೃಷ್ಟ ವರ್ಣಗಳಿಂದ ಅಷ್ಟದಿಕ್ಕುಗಳಾಳುವ ಅನ್ನದಾತನೆ
ಘೃಣಿ ನಾಮಕ ಸೂರ್ಯ ನಾರಾಯಣನೆ ನಿನಗೆ ನಮೋ ನಮೋ ನಮೋ ॥ 8 ॥

ದ್ವಾದಶದಳದಲ್ಲಿ, ದ್ವಾದಶರಾಶಿಗಳ ದ್ವಾದಶಮಾಸ ನಿಯಾಮಕನೆ
ಕಾಲನಾಮಕ ಸಪ್ತನಾಮಕನೆಂದೆನಿಸಿ ಆಳುವಿ ಶ್ರೀ ನಮೋ ಭಗವತೇ ವಾಸುದೇವಾಯ
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 9 ॥

ಚತುರ್ವಿಂಶತಿ ದಳದಲ್ಲಿ ಚತುರ್ವಿಂಶತಿ ತತ್ವದಿ, ಚತುರ್ವಿಂಶತಿ ನಾಮಗಳಿಂದ ಕೂಡಿ
ಸೃಷ್ಟಿ, ಸ್ಥಿತಿ, ಲಯ ಮಾಡಿ ಮಾಡಿಸುವಿ ಜ್ಯೋತಿರ್ಮಾಸದ ಮಾಸನಿಯಾಮಕನೆ
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 10 ॥

ಪಂಚಭೂತಗಳು - ಪಂಚೇಂದ್ರಿಯಗಳು, ತನ್ಮಾತ್ರಗಳು, ದಶ ಇಂದ್ರಿಯಗಳು, ನಾಲ್ಕು
ತತ್ವಗಳು, ನವವಲಯಗಳು, ಅನಂತಾನಂತ ಗುಣರೂಪನಾಮನೆ
ಘೃಣಿ ನಾಮಕ ಸೂರ್ಯ ನಾರಾಯಣನೆ ನಿನಗೆ ನಮೋ ನಮೋ ॥ 11 ॥

ಐವತ್ತೊಂದು ದಳ ಅಕ್ಷರ ನಾಮಕನೆ, ಐವತ್ತೊಂದು ರೂಪ ಅಜಿತ ನಾಮಕನೆ,
ಎಪ್ಪತ್ತೆರಡು ಸಹಸ್ರ ಬೃಹತಿ ನಾಮಕನೆ, ಕೃಷ್ಣ ನರಸಿಂಹಾಯ ನಮಃ
ಘೃಣಿ ನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮಃ ॥ 12 ॥

Rarest Archives

ಸಂವತ್ಸರ - ಅಯನ - ಋತುಗಳು - ಮಾಸ, ಪಕ್ಷ, ವಾರ, ತಿಥಿ, ನಕ್ಷತ್ರಗಳು -
ಸೂರ್ಯ - ಚಂದ್ರ - ಮಿಂಚು - ಅಗ್ನಿಗಳಲ್ಲಿ ಪರಮಾತ್ಮನ ಬಹುರೂಪಗಳುಂಟು.
ಘೃಣಿನಾಮಕ ಸೂರ್ಯನಾರಾಯಣನೆ ನಮೋ ನಮಃ ॥ 13 ॥

ಸರ್ವಚೇತನದಲ್ಲಿ ವಿದ್ಯಮಾನನಾಗಿದ್ದು ಸರ್ವಾಂತರ್ಯಾಮಿ ಬಲಗಣ್ಣಿನಲಿ ದತ್ತ -
ಸ್ವತಂತ್ರ - ಪರಾಧೀನ ಕರ್ತುತ್ವ ಕೊಟ್ಟು ಕಾಪಾಡುವಿ ಅಧಾರಾಶ್ರಿತನಾಗಿ,
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 14 ॥

ಜಾಗೃತ - ಸ್ವಪ್ನ - ಸುಷುಪ್ತಾವಸ್ಥೆಯಲಿ ನಿಗ್ರಹ ಶಕ್ತಿ ಕೊಡೋ ಬಿಂಬರೂಪಿಯೆ,
ಹರಿಸರ್ವೋತ್ತಮ, ವಾಯುಜೀವೋತ್ತಮ ಎಂಬ ತತ್ವಜ್ಞಾನ ಮರೆಯದೆ ಕೊಡೋಸ್ವಾಮಿ
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 15 ॥

ಪತ್ಯಂತರ್ಗತ, ಭಾರತೀರಮಣ ಮುಖ್ಯಪ್ರಾಣಾಂತರ್ಗತ, ಲಕ್ಷ್ಮೀನಾರಾಯಣ,
ಸದ್ವೈಷ್ಣವ, ಸದ್ವಂಶ, ಸನ್ಮಾರ್ಗಾದಿ ಪುಟ್ಟಿಸಿ ಪತಿಭಕ್ತಿ ಸೌಭಾಗ್ಯ ಕೊಟ್ಟು ಸಲಹೋ ಸ್ವಾಮಿ
ಘೃಣಿನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮೋ ॥ 16 ॥

ಕ್ರಮವಾಗಿ ಚಕ್ರಾಬ್ಜಮಂಡಲ ಬರೆದು ರಮೆ ಅರಸನ ಪೀಠ ಮಧ್ಯದಿ ಕೂಡಿಸಿ,
ಕಂಕಣಾಕಾರ ಸುಳಾದಿಯ ಪಠಿಸುತ ಕಪಿಲ ನಾಮಕನ ಅನುಗ್ರಹ ಪಡೆಯಿರಿ.

ಘೃಣಿ ನಾಮಕ ಸೂರ್ಯನಾರಾಯಣನೆ ನಿನಗೆ ನಮೋ ನಮಃ

ಶ್ರೀಮತಿ ಸುಧಾಬಾಯಿಯವರು ಈ ಚಕಾಬ್ಜಮಂಡಲದ ಹಾಡನ್ನು ಬಹಳ ಸುಲಭವಾಗಿ ಬರೆದು ಮಹಿಳೆಯರಿಗೆ ಮಹದುಪಕಾರಮಾಡಿದ್ದಾರೆ. ಧನ್ಯವಾದಗಳು.

(ನಮ್ಮ ಮನೆಯಲ್ಲಿ ನಮ್ಮ ಅಜ್ಜಿ ಅಂದರೆ ಅಮ್ಮನ ಅಮ್ಮ ಇದನ್ನು ತುಳಸಿ ಕಟ್ಟೆಯ ಎದುರಿಗೆ ಬರೆದು - ಪುಷ್ಪಗಳಿಂದ ಅಲಂಕರಿಸಿ ಬಾಯಲ್ಲಿ ಏನೋ ಮಣಮಣ ಹೇಳಿಕೊಳ್ಳುತ್ತಿದ್ದರು. ನಾವು ತುಂಬಾ ಸಣ್ಣವರಾಗಿದ್ದೆವು. ಅರ್ಥವಾಗುತ್ತಿರಲಿಲ್ಲ.)

**ಪದ - 29** ಧನ್ಯಾಸಿ ರಾಗ - ಆದಿತಾಳ

ಅನಿಲದೇವ ನೀನಲ್ಲದೆ ಧರೆಯೊಳ-ಅನ್ಯಗುರುಗಳ ಕಾಣೆ ವಿಶ್ವಗುರುವೇ ॥ 1 ॥

ಎನ್ನವಗುಣಗಳ । ಎಣಿಸದೆಲೆನಿಮನ್ನಿಸಿಕಾಯೋ । ಮಂಗೇಶಾ ಚಕ್ರತೀರ್ಥದಿನಿಂತ
ಯಂತ್ರೋದ್ಧಾರಕ
ನಕ್ರ ಹರನ ದಯಕೆ ಪಾತ್ರನಾಗಿ ಹಂಸಮಂತ್ರ ಜಪಿಸೀ ಹರಿಗರ್ಪಿಸಿದೇ ॥ 2 ॥

Rarest Archive

ವ್ಯಾಸತೀರ್ಥರಿಂದೇಳುನೂರು ಪ್ರತಿಷ್ಠಿತ ನೀನಾದೇ
ರಾಮಕೃಷ್ಣಶ್ರೀ ವೇದವ್ಯಾಸರ ದಾಸರಾದ ಹನುಮ ಭೀಮ, ಮಧ್ವಾ ॥ 3 ॥

ನಾಮಕಲ್ಲಿ ನೆಲೆಸಿರುವಾ ವೀರಾಗ್ರೇಸರ ಹನುಮಾ
ಎಲಗೂರು ಹನುಮಾ। ಹೊನ್ನಳ್ಳಿ ಹನುಮ ಕೋಟಿ ಪ್ರಾಣ ದೇವರ ಕಸಾಪುರ
ಹನುಮಾ ॥ 4 ॥

ಉಪ್ಪಿನ ಕಾಯಿ ಹನುಮ। ಇಬ್ರಾಹಿಂ ಪುರದ 'ಅಪ್ಪ' ಅವರ ಅಮೃತಹಸ್ತದಿ ನೀನು,
ಪ್ರತಿಷ್ಠಿತನಾದೆ। ಕುಂಪಣಿಪುರದಿ ಜಾಗೀರ್‌ದಾರ್ ಮನೆತನದವರಿಂದ ॥ 5 ॥

ವೀರಾಂಜನೇಯ - ಹುಚ್ಚಾಂಜನೇಯ - ಬುರುಗಾಂಜನೇಯ
ಗುಂಡಿ ವೀರಾ ಹನುಮಾ - ಜೂಲಾ ಹನುಮಾ - ಧೀರ ವೀರ ಜಗದಿ ಪ್ರಬುದ್ಧ
ಪ್ರಭಂಜನಾ ॥ 6 ॥

ಬೊಮ್ಮಗಟ್ಟಿ - ಮೊದಲಗಟ್ಟಿ ಹುಲಿಕುಂಟಮಾರುತೀನೀ
ಕಪಿಲ ಪರಮಾತ್ಮನ ದಯದಿ ನೀ ಭಗವತ್ ಕಾರ್ಯ ಸಾಧಕನೆನಿಸಿದೆ ॥

ಶ್ರೀಮತಿ ದೊಡ್ಡಿ ಸುಧಾಬಾಯಿಯವರ ತೆಲುಗು ಕೃತಿ
ದಂಡಮೊಕ್ಕಟಿ ನೀಕು, ದೈತ್ಯ ಸಂಹಾರಕಾ।
ಪದಿ ದಂಡಮುಲು ನೀಕು - ಪದುಮನಾಭಾ
ನೂರು ದಂಡಂಬುಲು ಶಾರದಾಪತಿ ತಂಡ್ರಿ
ವೇಯಿ ದಂಡಂಬುಲು ವೇದವೇದ್ಯ
ಪದಿವೇಲ ದಂಡಮುಲು ಫಣಿರಾಜ ಸುತಗಾತ್ರ
ಲಕ್ಷ ದಂಡಂಮುಲು ಪಕ್ಷಿಗಮನ
ದಶಲಕ್ಷ ದಂಡಂಬಲು ಅಕ್ರೂರವರದಾ
ಕೋಟಿ ದಂಡಂಮುಲು ಕಮಲನಯನ
ಇನ್ನಿ ದಂಡಂಮುಲ ಪೆಟ್ಟಿ ನೀ ಪಾದ ಜೇರ
ನಿನ್ನ ನಮ್ಮುಕೊನಿವುಂದರಾ ನೀರಜಾಕ್ಷ
ನೀಲನೀರದ ಗಾತ್ರ ವಿಶಾಲನೇತ್ರ
ಕಪಿಲನಾಮಕ ಪರಮಾತ್ಮ ಬ್ರೋವುತಂಡ್ರಿ ॥

Rarest Archiver

**ಪದ - 164** ಮರಾಠಿ ಭಕ್ತಿಗೀತೆ - ರಾಗ ಭೀಮಪಲಾಸ್ - ಆದಿತಾಳ

ತೂಮುಜದೇವರೇ ಮಾತುಜ ಸೇವಕಿ
ಮಜಹಾತ ಸೋಡು ನಕೊ ಹೇ ರಾಮಚಂದ್ರ ಪ್ರಭು ॥ 1 ॥

ಆಶಾಮೋಹಕ್ರೋಧಪಾಶನಹಿ ಸರ್ಕಕರೂನೆ
ತುಜಭಕ್ತಿ ದೇವೂನೆ ರಕ್ಷಾಕರೆ ರಂಗಪ್ರಭೊ ॥ 2 ॥

ಸತ್ಸಂಗ ದೇವೂನೆ ಸದಾಚಾರ ಅಸುನೆ ।
ಸತ್ಯವಾಕ್ಯ ಬೋಟಾಸರ್ಕಕರೆ ಕೃಷ್ಣ ಕೃಪಾಳೋ ॥ 3 ॥

ತುಜಸರ್ಕದೇವನಹಿ । ಹನುಮಸರ್ಕಗುರುನಹಿ
ತುಜದಾಸಿಮಲತುಜಸ್ಮರಣದೇ ಪ್ರಭೋ ॥ 4 ॥

ಸದಾತುಜಧ್ಯಾನಮಲ ದೇವೂನೆ ಮಜಬಾಪ
ರಾಜ ರಂಗನಾಥ ಪ್ರಭೋ ಮಲರಕ್ಷಕರೆರಾಮ ॥ 5 ॥

ತೂ ಎಲ್ಲೆಸಗಳ ವಸ್ತು ಆತ್ಮಾರ್ಪಣ ಕರಸರ್ಕಾ
ಬುದ್ಧಿ ಮನದೇವೂನೆ ರಕ್ಷಾ ಕರೆ ರಾಮಪ್ರಭು ॥ 6 ॥

ಸಾಧು ಸಂತಲೋಕಸಗಳೇ ತುಜ ಕೀರ್ತನ
ಮಣೂನೆ ಸದ ಕಾಳಿ ಭಜನಕರೂನೆ ಮುಕ್ತಿ ಪಾವೂನಗೆಲೆ ॥ 7 ॥

ತುಜ ಪಾದಸೇವ ಮಲ ಸದಾ ಕಾಳಿದೀ ಕೃಷ್ಣಾ
ಪರ್ತೂನೆ ಪರ್ತೂನೆ ಭೂಮಿ ಓರಯೇಣ ಬಂಧಕರೆ ದೇವ ॥ 8 ॥

ಕಪಿಲದೇವ ಸ್ವಾಮಿ ತೂ ಮಲಾ ಮುಕ್ತಿ ದೇವೂನೆ
ಅದಾರ ಮಹಿಮವಿಶ್ವರೂಪಿ ಕೃಪಾಕರೆ ಕೃಷ್ಣ ಪ್ರಭೋ ॥ 9 ॥

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಾತಿದೆ. ಕನ್ನಡದ ಕವಿಗಳು ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತರರ್ ನಮ್ಮ ಹಿಂದಿನ ತಲೆಮಾರಿನವರಿಗೆ ಎಷ್ಟು ಜನಕ್ಕೆ ವಿದ್ಯಾಭ್ಯಾಸವಿತ್ತು? ಹಾಡುಗಳು ಬಾಯಿಂದ ಬಾಯಿಗೆ ಬರುತ್ತಿದ್ದುವೇ ಹೊರತು ಅಕ್ಷರದ ಪರಿಚಯವೇ ಇರಲಿಲ್ಲ. ಆಮೇಲೆ ದೊಡ್ಡ ದೊಡ್ಡ ನಗರಗಳಲ್ಲಿ ಶಾಲೆ ಇರುತ್ತಿತ್ತು. ಹೀಗೆ ಗ್ರಾಮಾಂತರಗಳಲ್ಲಿರುವ ಸ್ತ್ರೀಯರೂ ಈಗಲೂ ಇದ್ದಾರೆ.

Rarest Archiver

ಸುಧಾಬಾಯಿಯವರು ಐದನೇ ತರಗತಿಯವರೆಗೂ ಓದಿದ್ದಾರೆ. ಅದು ಅವರ ಪುಣ್ಯ. ಮುಂದೆ ಶಾಲೆಗೆ ಹೋಗುವ ಅವಕಾಶವೇ ಇರಲಿಲ್ಲ. ಆದರೆ ಮನೆಯಲ್ಲಾಗಲೀ, ಹೊರಗಡೆಯಲ್ಲಾಗ್ಗಲೀ ಸ್ತ್ರೀಯರು ಪುರಾಣ ಪುಣ್ಯ ಕಥೆಗಳನ್ನು ಕೇಳುತ್ತಾ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಸುಧಾಬಾಯಿಯವರು ಮಾಡಿದ್ದೂ ಅದೇನೇ. ಲೌಕಿಕ ವಿದ್ಯೆ ಬೇಡವೇ ಬೇಡ. ಆದರೆ ಪಾರಲೌಕಿಕ ವಿದ್ಯೆ ಹತ್ತಿರವೇ ಅಂದರೆ ಮನೆಯಲ್ಲಿ ಬೇಕಾದಷ್ಟು ಸಿಕ್ಕಿತಲ್ಲಾ. ಅದು ಹೃದಯದ ತುಂಬಾ ಮನೆ ಮಾಡಿಕೊಂಡಿತ್ತಲ್ಲಾ. ಯಾವುದೋ ಒಂದು ರೀತಿಯಲ್ಲಿ (ಅವರ ಸ್ವಪ್ನ ಪದ) ಹೊರಗಡೆ ಬರತೊಡಗಿತು. ತಕ್ಷಣ ಅದನ್ನು ಹಿಡಕೊಂಡರು. ಸುಮ್ಮನೇ ಕೂಡಲಿಲ್ಲ. ಒಂದು ರೀತಿಯ ಸಾರಸ್ವತ ಲೋಕದಲ್ಲಿ ಹೃದಯದಲ್ಲಿ ಮಡುಗಟ್ಟಿದ್ದ ಒಡ್ಡು ಒಡೆದು ಪುಂಖಾನುಪುಂಖವಾಗಿ ಈಚೆ ಬರತೊಡಗಿತು. ರಾಘವೇಂದ್ರ ಸ್ವಾಮಿಗಳೇ ಅವರಿಗೆ ಮಾರ್ಗದರ್ಶಕರಾದರು. ಹೀಗಾಗಿ ಅವರು ಇಪ್ಪತ್ತೈದು ವರ್ಷ ಮಾಡಿದ ತಪಸ್ಸು ಫಲಕೊಟ್ಟಿತು. ಹರಿದಾಸರ ಹಾದಿ ಅವರಿಗೆ ಬಾಗಿಲನ್ನು ತೆರೆಯಿತು.

ಇಲ್ಲದಿದ್ದಲ್ಲಿ ತೀರಾ ತೆಲುಗು ಭಾಷೆಯನ್ನಾಡುತ್ತಿದ್ದ ಅವರಿಗೆ ಗೇಯ ಕೃತಿಗಳು ಹೇಗೆ ಬರಬೇಕು? ಅದೂ ಸಾಮಾನ್ಯ ಕೃತಿಗಳಲ್ಲಿ, ಎಲ್ಲವೂ ಭಗವಂತನಗುಣಗಾನ ಮಾಡುವ ಕೃತಿಗಳೇ. 400 ಪದಗಳು. ದೇವದೇವಿಯರ ವರ್ಣನೆ, ಪುರಾಣದ ಸ್ತ್ರೀಯರು, ಇತಿಹಾಸದ ಮಹಾನುಭಾವರು, ಪೀಠಾಧಿಪತಿಗಳು ಇವರ ಮೇಲೆಲ್ಲ ಸೊಗಸಾದ ಕೀರ್ತನೆಗಳನ್ನು ಬರೆದಿದ್ದಾರೆ. ದೇವರ ಕಲ್ಯಾಣಗಳು, ನೀತಿ ಗೀತೆಗಳು, ಆಶೀರ್ವಾದದ ಹಾಡುಗಳು, ಬಳೆತೊಡಿಸುವ ಹಾಡುಗಳು, ಹಸೆಗೆ ಕರೆಯುವ ಹಾಡುಗಳು, ರಾಮಾಯಣ - ಮಹಾಭಾರತದ ಕಥೆಗಳು, ಭಾಗವತ ಅಕ್ಷಯಾಂಬರ ಕಪಿಲ ಕೀರ್ತನ ಮಂಜರಿ, ಯಾವುದನ್ನು ಕೈಗೆತ್ತಿಕೊಂಡರೂ, ಎಂಥಾ ಸಂದರ್ಭದಲ್ಲೂ ಪರಮಾತ್ಮನ ಹಿನ್ನಲೆ ಇಲ್ಲದಿಲ್ಲ. ಅದರಿಂದಲೇ ಕೀರ್ತನೆಗೆ ಆಪಾಟಿ ಭವ್ಯತೆ. ಕೀರ್ತನೆಗಳು ಎಷ್ಟು ಚೆಂದವೋ ಅದಕ್ಕೂ ಮಿಗಿಲು ಚೆಂದ ಅವರ ಗದ್ಯ ಸಂಗ್ರಹ. ಶ್ರೀ ಕೃಷ್ಣಚರಿತ ಮಧುರಾಮೃತವೇ ಆಗಲಿ, ಕ್ಷರಾಕ್ಷರ ಉತ್ತಮ ಪುರುಷ ಇವೇ ಮೊದಲಾದ ಸಂಗ್ರಹಗಳು ಬಹಳ ಯೋಗ್ಯವಾಗಿವೆ. ಸೃಜನಾತ್ಮಕವಾಗಿವೆ.

ಶ್ರೀಮತಿ ಸುಧಾಬಾಯಿಯವರು ಬಹಳ ಸಜ್ಜನರು. ಜನಗಳಲ್ಲಿ ಸಲೀಸಾಗಿ ಬೆರೆಯುತ್ತಾರೆ. ತಮಗೆ ತಿಳಿದಿದ್ದನ್ನು ಹೇಳುತ್ತಾರೆ. ಇತರರು ಹೇಳಿದ್ದನ್ನು ಕೇಳುತ್ತಾರೆ. ಬಹಳ ದಿಟ್ಟತೆಯಿದೆ. ಹಿಡಿದ ಕೆಲಸವನ್ನು ಸಾಧಿಸುತ್ತಾರೆ. ಎಂಭತ್ತೈದು ಸಂವತ್ಸರಗಳಾದರೂ ಇನ್ನೂ ಬರೆಯಲು ಅಪೇಕ್ಷಿಸುತ್ತಾರೆ. ಮಹತ್ವಾಕಾಂಕ್ಷಿಗಳಾಗಿದ್ದಾರೆ. ಹೀಗೆ ಬರೆಯುತ್ತಾ ಹೋದರೆ

Rarest Archive

ಅದಕ್ಕೆ ಪಾರವೇ ಇಲ್ಲ. 14 ಪುಸ್ತಕಗಳನ್ನು ಬರೆದಿದ್ದಾರೆ. ಇಂತಹ ಒಬ್ಬ ಮಹಿಳೆ ನಮ್ಮ ಮಧ್ಯದಲ್ಲೇ ಇದ್ದಾರೆ. ಭಗವಂತ ಇವರನ್ನು ಕರುಣಿಸಿದ್ದಾನೆ. ಇನ್ನೂ ಕರುಣಿಸಲಿ.

## ಮಹಾನುಭಾವರಾದ ದೊಡ್ಡಿ ಗುಂಡೂರಾಯರು

ಶ್ರೀ ದೊಡ್ಡಿ ಗುಂಡೂರಾಯರು ಸುಧಾಬಾಯಿಯವರ ಯಜಮಾನರು. ಎಲ್ಲ ಕಡೆಯೂ ಗಾಂಧಿ, ಮೋಹನದಾಸಗಾಂಧಿ, ಆತನ ಉದ್ದೇಶ ಬ್ರಿಟೀಷರ ಕಪಿಮುಷ್ಟಿಯಿಂದ ಭಾರತವನ್ನು ಮುಕ್ತಪಡಿಸುವುದು. ಅದೊಂದು ಆಂದೋಲನ. ಈ ಆಂದೋಲನದಲ್ಲಿ ಹುಡುಗರು – ಮುದುಕರು ಯುವಕರು, ಎಲ್ಲ ಜಾತಿ–ಮತ–ಹೊಲೆಯ–ಬ್ರಾಹ್ಮಣ, ಸಿರಿವಂತ–ಬಡವ ಎನ್ನದೆ ಎಲ್ಲರೂ ಭಾಗಿಗಳೇ. ಸ್ವಾತಂತ್ರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡವರೇ. ಸುಪ್ರಸಿದ್ಧವಕೀಲರುಗಳೇ. ಆ ಸ್ವಾತಂತ್ರ ಸಂಗ್ರಾಮದ ಮುಂಚೂಣಿಯಲ್ಲಿದ್ದವರೇ. ಗುಂಡೂರಾಯರೂ ಇದಕ್ಕೆ ಹೊರತಲ್ಲ, ಸುಧಾಬಾಯಿ ಯವರೂ ಯಜಮಾನರ ಜಾಡು ಹಿಡಿದವರೇ ಇರಬಹುದು. ಯಾಕೆಂದರೆ ಅವರ ಕಪಿಲ ಕೀರ್ತನ ಮಂಜರಿಯಲ್ಲಿ 'ಭಾರತ ಭಕ್ತಿ ಗೀತೆ' ಎಂಬ 21 ನುಡಿಗಳ ಹಾಡಿದೆ ಅದು ಇಡೀ ಭಾರತಕ್ಕೆ ಅನ್ವಯವಾಗುವಂತೆ ಬರೆದಿದ್ದಾರೆ. ಅವರು ಮಾಡಿದ ಇನ್ನೊಂದು ಮಹೋಪಕಾರ ಬಳ್ಳಾರಿಯನ್ನು ಕರ್ನಾಟಕಕ್ಕೆ ತಂದು ಕೊಟ್ಟಿದ್ದು.

ಶ್ರೀಯುತ ಗುಂಡೂರಾಯರು ತಮ್ಮ ಧರ್ಮ ಪತ್ನಿ ಕು॥ಸೌ॥ ಸುಧಾಬಾಯಿ ಯವರ ಜೊತೆಯಲ್ಲಿ ಬಡಹೆಣ್ಣುಮಕ್ಕಳಿಗೆ ಉಚಿತ ವಿವಾಹಗಳನ್ನು ಮಾಡಿದ್ದಾರಂತೆ.

ನಾನೇ ನೋಡಿದಂತೆ ಶ್ರೀಯುತ ಗುಂಡೂರಾಯರು ಮಲ್ಲೇಶ್ವರದ ಎಂಟನೇ ಕ್ರಾಸಿನಲ್ಲಿರುವ ಶ್ರೀಮನ್ಮಾಧ್ವಸಂಘಕ್ಕೆ ಪುರಾಣ ಕೇಳಲು ಬರುತ್ತಿದ್ದರು. ಧರ್ಮಕರ್ಮ ಸಂಯೋಗದಿಂದ ಅಲ್ಲಿ ಅವರ ಕಣ್ಣುಗಳಿಗೆ ರಿಟೈರ್ಡ್ ಆದ ಕೆಲವು ಮಹಾನುಭಾವರು ಕಂಡರು. ಗುಂಡೂರಾಯರು ಅವರನ್ನೆಲ್ಲಾ ಕೂಡಿಸಿ ಆಸಕ್ತಿ ಇರುವವರೆಲ್ಲಾ ಯಾರ ಹತ್ತಿರವಾದರೂ ಸುಧಾಪಾಠ ಕಲಿಯೋಣ ಎಂದರು. ಅವರ್ಯಾರಿಗೂ ಈ ಯೋಚನೆಯೇ ಬಂದಿರಲಿಲ್ಲ. ಆಗ ಎಲ್ಲರೂ ಸೇರಿ ಉತ್ತರಾದಿಮಠದ ಗುತ್ತಲರಂಗಾಚಾರ್ಯರ ಬಳಿ ಹೋಗಿ ತಮಗೆ ಅವರ ಬಳಿ ಶ್ರೀ ನ್ಯಾಯಸುಧಾ ಕಲಿಯಲು ಆಸಕ್ತಿಯಿದೆಯೆಂತಲೂ ಆಚಾರ್ಯರು ಅದಕ್ಕೆ ಮನಸ್ಸು ಮಾಡಬೇಕೆಂತಲೂ ಕೇಳಿಕೊಂಡರು. ಗುಂಡೂರಾಯರ ಮುಂದಾಳುತ್ವದಲ್ಲಿ ಈ ಕೆಲಸ ನಡೆಯತೊಡಗಿತು. ಪಾಠ ಮುಗಿದಮೇಲೆ ಗುಂಡೂರಾಯರು ಶ್ರೀ ಆಚಾರ್ಯರ ಮುಂದಾಳುತನದಲ್ಲಿ ಎಲ್ಲರನ್ನೂ ಮಳಖೇಡಕೆ

Rarest Archive

ಕರೆದುಕೊಂಡು ಹೋಗಿ ಟೀಕಾರಾಯರ ಸನ್ನಿಧಾನದಲ್ಲಿ ಅದ್ಭುತವಾಗಿ ಸುಧಾಮಂಗಳ ಮಾಡಿದರು. ಹೀಗೆ ರಾಯರು ತಾವೂ ಪುನೀತರಾಗಿ ಇತರರನ್ನೂ ಪುನೀತರನ್ನಾಗಿಸಿದರು.

ಬಳ್ಳಾರಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಬೇರೆ ಬೇರೆ ಊರುಗಳಿಂದ ಬರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಹೊತ್ತು ಹುಗ್ಗಿ-ಗೊಜ್ಜನ್ನ ಉಚಿತವಾಗಿ ಅನ್ನದಾನ ಮಾಡುತ್ತಿದ್ದರು. ಈಗ ಅವರಿಲ್ಲ ಅವರ ನೆನಪು ಎಂದಿಗೂ ಮರೆಯಲಾಗದು.

– ರುಕ್ಮಿಣಿ ಗಿರಿಮಾಜಿ.

## ಶ್ರೀಮತಿ ದೊಡ್ಡಿ ಸುಧಾಬಾಯಿಯವರು ಪಡೆದ ಪ್ರಶಸ್ತಿಗಳು ಹಾಗೂ ಸನ್ಮಾನಗಳು

1. ಎಲ್ಲದಕ್ಕಿಂತ ಮುಖ್ಯವಾದುದು ಗುಲ್ಬರ್ಗಾ ಯೂನಿವರ್ಸಿಟಿಯ ಒಬ್ಬ ಜ್ಯೋತಿ ಎಂಬ ಯುವ ವಿದ್ಯಾರ್ಥಿನಿಯು ಶ್ರೀಮತಿ ಸುಧಾಬಾಯಿಯವರ 400 ಪದಗಳ ಮೇಲೆ ಎಂ.ಫಿಲ್ ಪದವಿಗಾಗಿ ಕಿರು ಪ್ರಬಂಧವನ್ನು ರಚಿಸಿ ಡಿಗ್ರಿ ಪಡೆದುದು.
2. ಸುಸಂಪ್ರದಾಯ ಕೋವಿದೆ – ಚಾಮರಾಜಪೇಟೆ ಮಾಧ್ವಸಂಘ ಪೇಜಾವರ ಶ್ರೀಗಳಿಂದ.
3. ಮಾಧ್ವ ಮಹಿಳಾ ಚೂಡಾಮಣಿ.
4. ಹರಿದಾಸ ರಾಷ್ಟ್ರ ಸಮ್ಮೇಳನ ಪುರಂದರಪೀಠ ಹಂಪಿ ವಿಶ್ವವಿದ್ಯಾಲಯದಿಂದ ಸನ್ಮಾನ.
5. ಇವರ ಕೃತಿಗಳ ಸಂಗ್ರಹ "**ಕಪಿಲಾಂತರಂಗಸುಧಾ**" ಪುಸ್ತಕವನ್ನು ಶ್ರೀಶ್ರೀ ಸತ್ಯಾತ್ಮ ತೀರ್ಥರು ಅವರ ಅಮೃತ ಹಸ್ತದಿಂದ ಬಿಡುಗಡೆ ಮಾಡಿರುವರು.

ಅಲ್ಲದೆ ಅನೇಕ ಸಂಘ ಸಮ್ಮೇಳನಗಳಿಂದ ಸನ್ಮಾನಗಳು.

Rarest Archiver

# ಶ್ರೀಮತಿ ಕೋಲಾರ್ ಪದ್ಮಾಬಾಯಿಯವರು

ಪರಮ ಪೂಜ್ಯರಾದ ಪೇಜಾವರ ಮಠದ (ಉಡುಪಿ) ಪೂಜ್ಯ ಶ್ರೀಶ್ರೀ ವಿಶ್ವೇಶತೀರ್ಥ ಸ್ವಾಮಿಗಳು ಬೆಂಗಳೂರಿನಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿ ಮಾಡುತ್ತಿರುವ ಅಮೋಘ ಸೇವೆಯನ್ನು ಎಲ್ಲರೂ ಬಲ್ಲರು. ಅದರ ಜೊತೆ ಜೊತೆಗೇ ಅಖಿಲಭಾರತ ಮಾಧ್ವ ಮಹಾಮಂಡಲವನ್ನೂ ಸ್ಥಾಪಿಸಿ ಅದರ ಮೂಲಕ ನಾನಾರೀತಿಯ ಸಂಘಗಳನ್ನು ಅಂದರೆ ಶೈಕ್ಷಣಿಕ -ಸಾಮಾಜಿಕ - ಧಾರ್ಮಿಕ - ರಚನಾತ್ಮಕ ಕೆಲಸ ಮಾಡುತ್ತಾ, ಬಡವ - ಬಲ್ಲಿದ, ಮೇಲು ಕೀಳು ಹೆಂಗಸರು - ಗಂಡಸರು, ವಿದ್ಯಾವಂತರು - ಮೂಢರು, ಎಂಬ ಭೇದಭಾವವಿಲ್ಲದೆ ಸರ್ವರಿಗೂ ತತ್ವ ಜ್ಞಾನದ ಬೆಳಕನ್ನು ಒದಗಿಸುತ್ತಿದ್ದಾರೆ. ರೋಗಿಗಳಿಗಾಗಿ ವೃದ್ಧಾಶ್ರಮ, ವಯಸ್ಸಾದವರಿಗಾಗಿ ವೃದ್ಧಾಶ್ರಮ ಹೀಗೆ ಬಿಡುವಿಲ್ಲದೆ ತಮ್ಮನ್ನು ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಒಮ್ಮೆ ಹೀಗಾಯಿತು. ಪೂಜ್ಯ ಶ್ರೀಗಳು ಮದರಾಸಿನಲ್ಲಿ ಚಾತುರ್ಮಾಸ ವ್ರತವನ್ನು ಕೈಗೊಂಡಿದ್ದರು. ಮಲ್ಲೇಶ್ವರದ, ಬಹು ಜನಪ್ರಿಯರಾಗಿದ್ದ ಶ್ರೀಮತಿ ಇಂದಿರಾಬಾಯಿ ಯವರು (ಯಶೋದಮ್ಮ) ಆಗ ಮಾಧ್ವ ಮಹಾಮಂಡಲದ ಕಾರ್ಯಕಾರೀ ಸಮಿತಿಯಲ್ಲಿದ್ದರು. ನಾನು ಸಾಧಾರಣ ಸದಸ್ಯಳಾಗಿದ್ದೆ. ಇಂದಿರಾಬಾಯಿಯವರು ನನ್ನನ್ನು ಕರೆದು - 'ನೋಡು, ಪೇಜಾವರ ಶ್ರೀಗಳು ಮದರಾಸಿನಲ್ಲಿ ಚಾತುರ್ಮಾಸ ವ್ರತದಲ್ಲಿದ್ದಾರೆ. ಅವರಲ್ಲೇ ಚಾತುರ್ಮಾಸ ವ್ರತ ಕೈಗೊಂಡರೂ ಅಲ್ಲಿಗೆ ನಮ್ಮನ್ನು ಕರೆಯುತ್ತಾರೆ. ನನ್ನ ಜೊತೆಯಲ್ಲಿ ನೀನೂ ಬಾ. ನಾನು ನಿನಗೆ ಅವರ ಪರಿಚಯ ಮಾಡಿಸುತ್ತೇನೆ'' ಎಂದರು. ನಾನು ಬೇಡ ಯಶೋದಮ್ಮ, ನಿಮ್ಮನ್ನು ಕರೆದರೆ ನೀವು ಮಾತ್ರ ಹೋಗಿ ಬನ್ನಿ ನಾನ್ಯಾಕೆ ಎಂದೆ.

ಅವರು ನನಗಿಂತ ಬಹಳ ಹಿರಿಯರಾಗಿದ್ದರು. ಮಾಧ್ವ ಸಂಘದಲ್ಲಿ ಪ್ರಮುಖರಾಗಿದ್ದರು. ಆದ್ದರಿಂದ ಮಾರನೆಯ ದಿನ ನಾನು ಅವರೊಡನೆ ಮದರಾಸಿಗೆ ಹೋದೆ. ಅದೇ ದಿನ ಮಧ್ಯಾಹ್ನ ಸಭೆ ಇತ್ತು. ಎಲ್ಲ ಸದಸ್ಯರೂ ಬಂದಿದ್ದರು. ಮದರಾಸಿನ ಧರ್ಮ ಪ್ರಕಾಶಹಾಲ್‌ನಲ್ಲಿ ಸಭೆಯಿತ್ತು. ನಾಲ್ಕು ಗಂಟೆಗೆ ಸರಿಯಾಗಿ ಶ್ರೀಗಳವರು ಆಗಮಿಸಿದರು. ಎಲ್ಲರೂ ಎದ್ದುನಿಂತರು. ಸ್ವಾಮಿಗಳು ಬಂದಿರುವವರನ್ನೆಲ್ಲಾ

Rarest Archive

ಸಿಂಹಾವಲೋಕನ ಮಾಡಿ ನನ್ನನ್ನು ನೋಡಿ ಇವರು ಯಾರು? ಎಂದರು. ಯಶೋದಮ್ಮನವರು "ನನ್ನ ಜೊತೆಯಲ್ಲಿ ಕರೆದುಕೊಂಡು ಬಂದಿದ್ದೇನೆ. ಬಹಳ ವಿದ್ಯಾವಂತರು. ಎಂ.ಎ. ಪಾಸ್ ಮಾಡಿ ಕೆಲಸದಲ್ಲಿದ್ದಾರೆ. ಬಹಳ ಪ್ರತಿಭಾವಂತರು. ಒಳ್ಳೆಯ ಸಂಘಟನಕಾರರು "ನಾನು ನಿಮಗೆ ಪರಿಚಯ ಮಾಡಿಸೋಣವೆಂದೇ ಕರೆ ತಂದಿದ್ದೇನೆ" ಎಂದರು. ನಂತರ ಆ ದಿನದ ಕೆಲಸವನ್ನು ಅಂದರೆ ಸಭೆಯನ್ನು ನಡೆಸತೊಡಗಿದರು.

ಅದು ಮುಗಿದ ತಕ್ಷಣ ಹೇಳಿದರು "ನನಗೆ ಸ್ವಲ್ಪ ದಿವಗಳ ಹಿಂದೆ ಹೀಗೆನ್ನಿಸಿತು. ನಮ್ಮ ಸಂಘದಲ್ಲಿ ವಿದ್ಯಾವಂತರೂ, ಕಾರ್ಯದುರಂಧರರೂ ಆದ ಅನೇಕ ಮಹನೀಯ ರಿದ್ದಾರೆ. ಆದರೆ ಇಂದಿರಮ್ಮನನ್ನು ಬಿಟ್ಟರೆ ಭಾಗಾ ನಗರದ ಲಕ್ಷ್ಮೀಬಾಯಿಯವರಿದ್ದಾರೆ - ಇಬ್ಬರೂ ವಯಸ್ಸಾದವರು. ಅದಕ್ಕಾಗಿ ಕೆಲವು ವಿದ್ಯಾವಂತ ಮಹಿಳೆಯರನ್ನು ಏಕೆ ತರಬಾರದು. ಅವರಿಗೆ ಮಾರ್ಗದರ್ಶನ ಮಾಡಲು ನೀವೆಲ್ಲಾ ಇದ್ದೀರಿ. ಮಹಿಳೆಯರೂ ತತ್ವಜ್ಞಾನವನ್ನರಿಯಲಿ. ಏನಂತೀರಿ?" ಎಲ್ಲರೂ ಹೌದು ಸ್ವಾಮಿ ಇದು ಯೋಚಿಸಬೇಕಾದ ವಿಷಯವೇ ಎಂದರು. ಇದಕ್ಕೆ ಯೋಗ್ಯರಾದವರು ಯಾರಾದರೂ ಗೊತ್ತಿದ್ದರೆ ಹೇಳಿ" ಎಂದರು. ಆಗ ಶ್ರೀಯುತ ನರಸಿಂಹಮೂರ್ತಿಯೆಂಬುವರು ಎದ್ದು ನಿಂತು. "ಸ್ವಾಮಿ, ಇಲ್ಲಿ ಇಂದಿರಾಬಾಯಿಯವರ ಪಕ್ಕದಲ್ಲಿ ಕುಳಿತಿದ್ದಾರಲ್ಲಾ; ರುಕ್ಮಿಣಿ ಗಿರಿಮಾಜಿಯವರು ಅವರು ಬಹಳ ಸಮರ್ಥರು. ಅವರು ನಮ್ಮ ಮಾಧ್ವ ಸಂಘದ ಕಾರ್ಯಕಾರಿಣೀ ಸಭೆಯಲ್ಲಿದ್ದಾರೆ" ಎಂದರು. ಆಗ ಸ್ವಾಮೀಜಿಯವರು "ಇದನ್ನು ಯಾರು ಅನುಮೋದಿಸುತ್ತೀರಿ ಎಂದಾಗ ಯಾರಾದರೂ ಒಬ್ಬರು ಹೇಳಿ" ಎಂದರು. ಯಶೋದಮ್ಮ ಅನುಮೋದಿಸಿದರು. ಎಲ್ಲರೂ ಚಪ್ಪಾಳೆ ತಟ್ಟಿದರು. ನನಗೆ ಏನೋ ಭಯ. ದಿಗ್ಭ್ರಮೆ, ಆಶ್ಚರ್ಯ, ಆನಂದ. ನಾನು ಗಟ್ಟಿಯಾಗಿ ಯಶೋದಮ್ಮನವರನ್ನು ಹಿಡಿದುಕೊಂಡೆ. ಆಗ ಸ್ವಾಮೀಜೀಯವರು ನನ್ನನ್ನು ನೋಡಿ ಕೇಳಿದರು. 'ಇದು ನಿಮಗೆ ಸಮ್ಮತವೇ?'. ನಾನು "ಸ್ವಾಮೀಜೀ, ಇಂಥ ಅವಕಾಶ ಎಷ್ಟು ಜನಕ್ಕೆ ದೊರೆಯುತ್ತದೆ? ಸಂತೋಷವಾಗಿದೆ. ಆದರೆ ನಾನು ಕೆಲಸದಲ್ಲಿದ್ದೇನೆ. ನಿಮ್ಮ ಎಲ್ಲಾ ಮೀಟಿಂಗುಗಳಿಗೂ ಬರಲಾಗುವುದಿಲ್ಲ. ರಜೆಯಿದ್ದಾಗ ಬಂದು ಖಂಡಿತವಾಗಿ ನೀವು ಹೇಳಿದ ಕೆಲಸ ಮಾಡುತ್ತೇನೆ. ಜೊತೆಗೆ ಇಂದಿರಮ್ಮನವರು ಇದ್ದೇ ಇರುತ್ತಾರಲ್ಲಾ' ಎಂದೆ. 'ಹಾಗೇ ಆಗಲಿ' ಎಂದರು. ಪ್ರಾತಃ ಸ್ಮರಣೀಯರು (ಅಂದಿನಿಂದ ಇಂದಿನವರೆಗೂ ಸ್ವಾಮಿಯವರ ಕೃಪಾ ಕಟಾಕ್ಷದಿಂದ ಅನೇಕ ಕೆಲಸಗಳನ್ನು ಮಾಡಲಾಗಿದೆ) ನಾನು ಮಾಧ್ವಮಹಾಮಂಡಲದಲ್ಲಿ ಇದ್ದೇ ಇದ್ದೇನೆ. ಅದು ಗುರುಗಳ ಅನುಗ್ರಹ.

Rarest Archiver

ಮೊದಲನೆಯ ಕೆಲಸವೆಂದರೆ ಮಹಿಳಾ ಸಂಘಟನೆ. ಎಲ್ಲರೂ ಇದು ಅಸಾಧ್ಯ ಎಂದರು. ''ನಾನೂ ಏನೂ ಇಲ್ಲ. ನಮ್ಮ ಸಂಘದಲ್ಲೇ (ಭಾರತೀಸೇವಾ ಸಂಘ) ಐವತ್ತು ಜನ ಮಹಿಳೆಯರಿದ್ದಾರೆ. ಪೇಜಾವರ ಸ್ವಾಮಿಗಳೆಂದರೆ ಇನ್ನೂ ಬರುತ್ತಾರೆ. ನೋಡುವಿರಿ ತಾಳಿ' ಎಂದೆ. ಒಂದು ದಿನ ಮೀಟಿಂಗ್ ಕರೆದು ವಿಷಯವನ್ನೆಲ್ಲಾ ಹೇಳಿ ''ಏನೂ ಕಷ್ಟವಿಲ್ಲ. ಇಲ್ಲಿ ನಾವು ಮಾಡುತ್ತಿರುವ ಕೆಲಸ ಅಲ್ಲೇ ಮಾಡೋಣ. ನಮ್ಮ ಸಂಘಕ್ಕೆ ಸ್ವಾಮಿಗಳನ್ನು ಕರೆಯೋಣ. ಒಂದು ಚಿಕ್ಕ ಪ್ರೋಗ್ರಾಂ ಮಾಡೋಣ. ಅವರು ಹೇಳುವುದನ್ನು ಕೇಳೋಣ''. ಅಷ್ಟು ದೊಡ್ಡ ಸಂಘಕ್ಕೆ ಮೆಂಬರಾಗಬೇಕಾದರೆ ಎಷ್ಟು ದುಡ್ಡು ಕೊಡಬೇಕಾಗುವುದೋ ಏನೋ ಎಂದರು ಮಹಿಳೆಯರು. ಏನೂ ಇಲ್ಲ ಇಲ್ಲಿಯ ಹಾಗೆ ಅಲ್ಲಿಯೂ ತಿಂಗಳಿಗೆ 12 ರೂಪಾಯಿ ಅಷ್ಟೆ ಎಂದೆ.ಕೆಲವರು ತಕ್ಷಣವೇ ಕೊಡಲು ಮುಂದಾದರು. ನಾನು ಅದೆಲ್ಲಾ ಹಾಗಲ್ಲ. ಅಲ್ಲಿನ ಪ್ರವೇಶ ಪತ್ರಗಳನ್ನು ತುಂಬಿ ಹಣ ಕೊಡಬೇಕು. ಅವರು ರಸೀದಿ ಕೊಡುತ್ತಾರೆ. ಸ್ವಾಮಿಗಳ ಜೊತೆಯಲ್ಲಿ ಅವರ ಸೆಕ್ರೆಟರಿ ಬಂದಿರುತ್ತಾರೆ. ಅವರು ರಸೀದಿ ಬುಕ್ ತಂದಿರುತ್ತಾರೆ. ಆಗ ಕೊಡೋಣ'' ಎಂದೆ.

ಪಾದಪೂಜೆ ಮಾಡಲು ಸಿದ್ಧರಾಗಿ ಬಂದಿದ್ದವರು ಸ್ವಾಮಿಗಳನ್ನು ಕರೆದರು. ''ಸ್ವಾಮಿಗಳು ತುಂಬಾ ಜನರಿದ್ದೀರಿ. ಇವತ್ತು ಬೇಡ. ನಾಡಿದ್ದು ನಾನೇ ಅಲ್ಲಿಗೆ ಬರುತ್ತೇನೆ. ಆಗ ಮಾಡಿ' ಎಂದರು. ಸದಸ್ಯರು ಹಾಗಾ ಆಗಲಿ ಸ್ವಾಮಿ ಎಂದು ಒಪ್ಪಿಕೊಂಡರು.

ಚಾಮರಾಜಪೇಟೆಯಲ್ಲಿ ಒಂದು ಸಂಘವಿತ್ತು. ಅಲ್ಲಿನ ಮಹಿಳಾ ಸಂಘವು ಬಹಳಷ್ಟು ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ನಾನು ಮತ್ತು ನಮ್ಮ ಕಾರ್ಯದರ್ಶಿ ಶ್ರೀಮತಿ. ಸುಶೀಲಾ ರಂಗನಾಥರಾವ್ ಇಬ್ಬರೂ ಅಲ್ಲಿಗೆ ಹೋಗುತ್ತಿದ್ದೆವು. ಆಗ ಒಂದು ದಿನ ರಾಜಲಕ್ಷ್ಮಿಯ ಅಮ್ಮ ಇಂದಿರಮ್ಮನವರು ನಾವು ಬೆಂಗಳೂರಿನ ಮಾಧ್ವ ಮಹಿಳೆಯರೆಲ್ಲಾ ಸೇರಿಕೊಂಡು ''ಬೆಂಗಳೂರು ಮಾಧ್ವ ಮಹಿಳಾ ಸಂಘವನ್ನು ಏಕೆ ಮಾಡಬಾರದು?'' ಎಂದಿದ್ದರು. ಅದು ಶೀಘ್ರದಲ್ಲೇ ಅಸ್ತಿತ್ವಕ್ಕೆ ಬಂದಿದ್ದಿತು. ನಮ್ಮ ಭಾರತೀ ಸಂಘ ಇತರ ಅನೇಕ ಸಂಘಗಳೂ ಸೇರಿದ್ದುವು. ಆಗ ನಮ್ಮಲ್ಲಿ ಕೆಲವರು ನಮಗೂ ಸುಶೀಲಾ ಅವರಿಗೂ ಹೇಳಿದರು - ''ನೀವಿಬ್ಬರು ಮಾತ್ರ ಅಲ್ಲಿಗೆ ಹೋಗುತ್ತೀರಿ. ಅದು ನಮಗೆ ದೂರುವಾಗುತ್ತದೆ. ಬಸ್ಸುಗಳು ಸಿಕ್ಕುವುದಿಲ್ಲ. ನೀವಿಬ್ಬರೂ ಅಲ್ಲಿಗೆ ಹೋದರೆ ಇಲ್ಲ್ಯಾರಿರುತ್ತಾರೆ. ನಮ್ಮ ಮಲ್ಲೇಶ್ವರ ಹಾಗೂ ಈ ಕಡೆಯ ಸಂಘಗಳನ್ನು ಸೇರಿಸಿಕೊಂಡು ನಾವೇ ಏಕೆ ಮಾಧ್ವ ಮಹಿಳಾ ಶಾಖೆಯನ್ನು ತೆಗೆಯಬಾರದು? ಅವರದು ದಕ್ಷಿಣ ಶಾಖೆಯಾಗಲಿ. ಇದು ಉತ್ತರದ ಶಾಖೆಯಾಗಲಿ ಎಂದರು. ''ಅದು ಸತ್ಯವಾಗಿತ್ತು. ನಾವು ಸ್ವಾಮೀಜಿಯವರಿಗೆ ಇದನ್ನು ತಿಳಿಸಿದೆವು. ಅವರು ಯೋಚಿಸಿ ಆಗಲಿ ನಾವು ಮುಂದಿನ

Rarest Archiver

ಮೀಟಿಂಗ್‌ನಲ್ಲಿ ಇದನ್ನು ನಿರ್ಧರಿಸೋಣ'' ಎಂದರು. ಮುಂದೆ ಮೀಟಿಂಗಿನಲ್ಲಿ ಒಪ್ಪಿಗೆ ದೊರೆಯಿತು.

ಎರಡು ಶಾಖೆಗಳು ಚೆನ್ನಾಗಿ ನಡೆಯುತ್ತಿದ್ದವು. ಸ್ವಾಮಿಗಳಿಗೆ ತುಂಬಾ ಸಂತೋಷವಾಯಿತು. ಅವರು ಮಹಿಳಾ ಶಾಖೆಗಳನ್ನು ನಾವು ಸಾಧ್ಯವಾದಷ್ಟು ಶಾಖೆಗಳನ್ನು ಬೇರೆ ಬೇರೆ ನಗರ ಹಾಗೂ ಗ್ರಾಮಾಂತರಗಳಲ್ಲಿ ತೆಗೆಯೋಣ. ನಾವ ಚಾತುರ್ಮಾಸಕ್ಕೆ ಬೇರೆ ಬೇರೆ ಊರುಗಳಿಗೆ ಹೋಗುತ್ತೇವಲ್ಲಾ ಅಲ್ಲಿ ಪ್ರಚಾರ ಮಾಡೋಣ. ನಿಮ್ಮನ್ನು ಆಗ ಕರೆಸುತ್ತೇನೆ ಎಂದರು. ಹಾಗೆ ಮದರಾಸು, ಬೊಂಬಾಯಿ, ಹೈದರಾಬಾದ್‌ಗಳಲ್ಲೂ, ಕಡಪ, ಕರ್ನೂಲು, ಅನಂತಪುರ, ಶಿವಮೊಗ್ಗ, ದಾವಣಗೆರೆ, ಕೋಲಾರ, ಮಾಲೂರು, ಬಳ್ಳಾರಿಗಳಿಗೂ ಗಂಡಸರ ಹಾಗೂ ಹೆಂಗಸರ ಶಾಖೆಗಳು ಅಸ್ತಿತ್ವಕ್ಕೆ ಬಂದುವು. ಧಾರವಾಡ, ಹುಬ್ಬಳ್ಳಿ, ಮುಧೋಳ ಇಲ್ಲಿಯೂ ಶಾಖೆಗಳಾದುವು.

ಶಾಖೆಗಳೆಲ್ಲಾ ಬೆಂಗಳೂರಿನ ಕೇಂದ್ರ ಕಛೇರಿಗೆ ತಿಂಗಳಿಗೊಂದು ಸಲ ತಮ್ಮ ಕಾರ್ಯಕ್ರಮಗಳ ಯಾದಿಯನ್ನು ಕಳಿಸುತ್ತಿದ್ದರು. ಎಲ್ಲ ಊರುಗಳವರೂ ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದರು.

ಒಂದು ದಿನ ಕೇಂದ್ರ ಕಚೇತರಿಗೆ ನನ್ನ ಹೆಸರಿಗೆ ಒಂದು ಪತ್ರ ಬಂದಿತು. ಅದನ್ನು ಬರೆದವರು ಬಳ್ಳಾರಿಯ ಮಹಿಳಾ ಶಾಖೆಯ ಕಾರ್ಯದರ್ಶಿಗಳು. ಅವರು ತಾವು ಮಾಡಿರುವ ಕೆಲಸಗಳನ್ನು ಪರಾಮರ್ಶಿಸಿ ಮಾರ್ಗದರ್ಶನ ಮಾಡಬೇಕೆಂದು ಕೋರಿದ್ದರು. ''ನಾನು ಈ ಪತ್ರವನ್ನು ಸ್ವಾಮೀಜಿಯವರಿಗೆ ತೋರಿಸಿ ಏನು ಮಾಡಬೇಕೆಂದು ಕೇಳಿದೆ. ಸ್ವಾಮೀಜಿಯವರು ನಿಮಗೆ ಅನುಕೂಲವಾಗಿದ್ದರೆ ಯಾರಾದರೂ ಒಬ್ಬಿಬ್ಬ ಸದಸ್ಯರನ್ನು ಕರೆದುಕೊಂಡು ಹೋಗಿಬನ್ನಿ'' ಎಂದರು. ಹಾಗೆಯೇ ಆಗಲಿ ಎಂದು ನಮ್ಮ ಕಾರ್ಯದರ್ಶಿಗಳಾದ ಶ್ರೀಮತಿ ನರ್ಮದಾ ಆನಂದ್ ಮತ್ತು ಸುಶೀಲಾ ರವರನ್ನು ಕರೆದುಕೊಂಡು ಹೋಗಬೇಕೆಂದು ತೀರ್ಮಾನಿಸಿ ಅವರಿಬ್ಬರನ್ನೂ ಜೊತೆಗಿಟ್ಟುಕೊಂಡು ಬೆಳಗಿನ ಬಸ್ಸಿನಲ್ಲಿ ಹೊರಟೆ. ನಾವು ಮಧ್ಯಾಹ್ನದ ಹೊತ್ತಿಗೆ ಸೇರಿದೆವು. ಶ್ರೀಮತಿ. ಸುಧಾಬಾಯಿಯವರ ಮನೆಗೆ ಹೋದೆವು. ಅಲ್ಲಿ ಹೋದಮೇಲೆ ಅಲ್ಲಿನ ಕಾರ್ಯದರ್ಶಿಗೆ ಫೋನ್ ಮಾಡಿ ಹೀಗೆ ನಾಲ್ಕು ಜನ ಬಂದಿದ್ದೇವೆ. ನೀವೆಲ್ಲಾ ರಾಯರ ಮಠದಲ್ಲಿ ಐದು ಗಂಟೆಗೆ ಕಾರ್ಯಕ್ರಮವನ್ನು ಇಟ್ಟುಕೊಳ್ಳಿ ಎಂದು ಹೇಳಿದೆ. ಅವರು ಹಾಗೆಯೆ ಮಾಡಿದರು. ಸಂಜೆಗೆ ಅವರ ಸದಸ್ಯರೆಲ್ಲಾ ಬಂದಿದ್ದರು. ಅವರು ನನ್ನನ್ನು ಯಾಕೆ ಕರೆದರೆಂದು ಹೇಳಿದರು. ಅವರು ಪದಾಧಿಕಾರಿಗಳನ್ನು ಚುನಾಯಿಸಿದ್ದರು. ಅಧ್ಯಕ್ಷ ಚುನಾವಣೆ ಆಗಿರಲಿಲ್ಲ. ಅಲ್ಲಿ ಇಬ್ಬರು ಅದಕ್ಕೆ ತಯಾರಿದ್ದರು. ಇಬ್ಬರೂ ಹಣವಂತರು.

Rarest Archiver

ಇಬ್ಬರ ಗಂಡಂದಿರೂ ಭಾರೀ ಲಾಯರುಗಳಾಗಿದ್ದರು. ಇಬ್ಬರೂ ಪ್ರಭಾವಶಾಲಿಗಳಾಗಿದ್ದರು. ಒಬ್ಬರನ್ನಾರಿಸಿದರೆ ಇನ್ನೊಬ್ಬರಿಗೆ ಕೋಪ ಬರುತ್ತದೆ. ಮೂರನೆಯವರಾದ ನಾವು ಹೋದರೆ ಆಗ ಅವರಿಗೆ ತೊಂದರೆ ಇರುವುದಿಲ್ಲ. ಆದ್ದರಿಂದ ನಾನೇ ಒಬ್ಬರನ್ನು ಆರಿಸಬೇಕೆಂದು ನನಗೂ ಸಂದಿಗ್ಧಕ್ಕಿಟ್ಟುಕೊಂಡಿತು. ನನಗೆ ಗೊತ್ತಿದ್ದುದು ಶ್ರೀಮತಿ. ಸುಧಾಬಾಯಿಯೊಬ್ಬರೇ. ಸುಧಾಬಾಯಿಯವರು ಬೆಂಗಳೂರಿನಲ್ಲಿ ಮಗನ ಮನೆಯಲ್ಲಿದ್ದಾರೆ. ಇವರಿಂದ ದಿನನಿತ್ಯದ ಕಾರ್ಯಕ್ರಮಗಳನ್ನು ನೋಡಿಕೊಳ್ಳಲಾಗುವುದಿಲ್ಲ. ಇನ್ನೊಬ್ಬರು ಇಲ್ಲಿಯೇ ಇದ್ದಾರೆ. ಅವರು ಒಪ್ಪಿದರೆ ಯಾಕಾಗಬಾರದು ಎನ್ನಿಸಿತು. ನಾನು ಸುಧಾಬಾಯಿಯವರನ್ನೇ ಕೇಳಿದೆ. 'ಸುಧಾಬಾಯಿ, ನೀವೇನೆನ್ನುತ್ತೀರಿ' ಎಂದೆ. ಅವರು ''ಅನ್ನುವುದೇನೆ ನಾನಲ್ಲದೆ ಸ್ವಾಮೀಜಿಯವರನ್ನು ಕರೆದಿದ್ದು, ಸಮಾರಂಭ ಮಾಡಿಸಿದ್ದು. ಮೊದಲಿಂದ ನನಗೆ ನಮ್ಮೂರಲ್ಲೂ ಒಂದು ಶಾಖೆಯಾಗಬೇಕು. ಇಲ್ಲಿನ ಜನರಿಗೆ ಸ್ವಾಮೀಜಿಯವರ ಸಹಕಾರ ಆಶೀರ್ವಾದಗಳು ಸಿಗಬೇಕು ಎಂದು ನನಗೆ ಆಸೆಯಾಯಿತು. ನಾನು ಇನ್ನೊಬ್ಬರಿಗಿಂತಲೂ ಹಿರಿಯಳಾಗಿದ್ದೇನೆ. ನಾನು ಯಾಕಾಗಬಾರದು?'' ಎಂದರು. ನಾನು ಆ ಇನ್ನೊಬ್ಬರು ಯಾರು ತೋರಿಸಿ ಎಂದೆ. ಆಗ ಮಂದಸ್ಮಿತವಾದ, ಸರ್ವಲಕ್ಷಣ ಸಂಪನ್ನೆಯಾದ ಖಳೆ ಖಳೆಯಾದವರೊಬ್ಬರು ಎದ್ದು ನಿಂತರು. ನಾನು ಅವರ ಅಭಿಪ್ರಾಯವನ್ನೂ ಕೇಳಿದೆ – ಅವರು ''ನಾನು ಯಾವುದಕ್ಕೂ ಸಿದ್ಧ. ನಮ್ಮ ಬಳ್ಳಾರಿಯಲ್ಲಿ ಶಾಖೆ ಆಗಬೇಕು. ನಮ್ಮ ಯುವತಿಯರಿಗೆಲ್ಲಾ ತತ್ವವಾದದ ಅರಿವಾಗಬೇಕು ಅಷ್ಟೇ ನನ್ನ ಇಚ್ಛೆ. ಇದಕ್ಕೆ ನಾನು ತನು–ಮನ–ಧನಗಳಿಂದ ಸಿದ್ಧಳಾಗಿದ್ದೇನೆ'' ಎಂದರು. ನಾನೀಗ ನೆರೆದಿದ್ದ ಸದಸ್ಯರ ಕಡೆ ನೋಡಿದೆ. ಅವರೆಲ್ಲರ ಮುಖಗಳು ಕೆಳಗೆ ಬಿದ್ದು ಹೋಗಿದ್ದುವು. ಯಾರೂ ಮಾತಾಡಲೇ ಇಲ್ಲ. ಆಗ ನಾನು – ಹೋಗಲಿ ಹೀಗೆ ಮಾಡೋದಾದರೆ ನೋಡಿ. ನಿಮ್ಮ ಕಾರ್ಯಕಾರೀ ಸಮಿತಿಯಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು... ಹೀಗೆ ಇದೆ ಅಲ್ಲವೆ? ಸುಧಾಬಾಯಿಯವರು ಬೆಂಗಳೂರಿನಲ್ಲಿರುವುದರಿಂದ ಅವರಿಗೆ ದಿನ ನಿತ್ಯ ಬರಲಿಕ್ಕಾಗುವುದಿಲ್ಲವೆಂಬುದು ನಿಜ. ಆದ್ದರಿಂದ ಅವರು ಸ್ಥಾಪಕ ಅಧ್ಯಕ್ಷರಾಗಿರಲಿ – ಕೋಲಾರ ಪದ್ಮಾಬಾಯಿಯವರು ಇಲ್ಲಿನ ಕಾರ್ಯಾಧ್ಯಕ್ಷರಾಗಿರಲಿ. ಕಾರ್ಯಕ್ರಮಗಳನ್ನು ಯೋಜಿಸುವುದು, ನಡೆಸುವುದು ಇವೆಲ್ಲಾ ಅವರ ಹೊಣೆಗಾರಿಕೆ. ಇದಕ್ಕೆ ಕಾರ್ಯದರ್ಶಿ ಮತ್ತು ನೀವು ಸದಸ್ಯರುಗಳೆಲ್ಲಾ ಅವರಿಗೆ ಸಹಾಯ ಮಾಡಬೇಕು. ಬಹಳ ಮುಖ್ಯವಾದ ಕೆಲಸಗಳನ್ನು ಮಾಡುವಾಗ ನೀವು ಸುಧಾಬಾಯಿ ಅವರನ್ನು ಸಂಪರ್ಕಿಸಿ ಅನುಮತಿಯನ್ನೂ ಪಡೆದುಕೊಳ್ಳಬೇಕು. ಕಾರ್ಯಕ್ರಮದ ಪಟ್ಟಿಯಲ್ಲಿ ಅವರ ಹೆಸರೂ ಇರಬೇಕು. ಆಗುವುದೇ? ಎಂದೆ. ಎಲ್ಲರಿಗೂ ಬಹಳ ಸಂತೋಷವಾಯಿತು. ಕರತಾಡನವನ್ನು ಜೋರಾಗಿ ಮಾಡಿದರು. ಎಲ್ಲರೂ ''ನಮ್ಮ

Rarest Archiver

ಮನೆಗೆ ಬನ್ನಿ'' ಎಂದು ಕರೆದರು. ನಾನು ಈಗ ಸಾಧ್ಯವಿಲ್ಲ, ನಾವು ನಾಳೆ ಬೆಳಿಗ್ಗೆಯೇ ಹೊರಡಬೇಕು. ಇನ್ನೊಮ್ಮೆ ಬರಬೇಕಾಗುತ್ತದೆ. ಯಾಕೆಂದರೆ ಇನ್ನೂ ನಿಮ್ಮ ಸಂಘದ ಉದ್ಘಾಟನೆ ಆಗಬೇಡವೆ? ಸ್ವಾಮಿಗಳೇ ಬರುತ್ತಾರೆ. ನೀವು ಮೊದಲು ವಿದ್ಯಾಪೀಠಕ್ಕೆ ಸ್ವತಃ ಹೋಗಿ ಅವರನ್ನು ಉದ್ಘಾಟನೆ ಮಾಡಲು ಕೇಳಿಕೊಳ್ಳಬೇಕು. ಸುಧಾಬಾಯಿ ಬೆಂಗಳೂರಿನಲ್ಲೇ ಇರುತ್ತಾರಲ್ಲಾ ಅವರನ್ನು ಕರೆದುಕೊಂಡು ಹೋಗಿ ಸ್ವಾಮೀಜಿಯವರನ್ನು ಇಂಥಾ ದಿನ ಬರಬೇಕು ಎನ್ನಿ. ಅವರು ಬರುತ್ತಾರೆ. ಅವರಿಗೆ ಬೇರೆ ಏನಾದರೂ ಕಾರ್ಯಕ್ರಮವಿದ್ದರೆ ನೀವು ಅವರಿಗೆ ಹತ್ತಿರದ ಒಂದು ತಾರೀಖನ್ನು ಗೊತ್ತು ಮಾಡಿಕೊಳ್ಳಿ. ಇದನ್ನು ಘಟ್ಟಿ ಮಾಡಿಕೊಂಡು ನಿಮ್ಮ ಸಭೆಯ ಮೀಟಿಂಗ್ ಕರೆಯಿರಿ. ಸುಧಾಬಾಯಿಯವರನ್ನೂ ಕರೆಯಿರಿ. ಆಗ ನೀವು ಮಾಡಬೇಕಾದುದಿಷ್ಟು.

ಎಲ್ಲಕ್ಕೂ ಮೊದಲು – ದೇವತಾ ಪ್ರಾರ್ಥನೆ – ಯಾರಾದರೂ ಚೆನ್ನಾಗಿ ದೇವರನಾಮ ಹಾಡುವರು ಒಬ್ಬರೋ ಇಬ್ಬರೋ ಇರಲಿ. ದೇವರನ್ನು ಕರೆದ ಮೇಲೆ ಸ್ವಾಗತ ಮತ್ತು ಉದ್ಘಾಟನೆ.

1. ಪ್ರಾರ್ಥನೆ

2. ಸ್ವಾಗತ – ಇದನ್ನು ಸುಧಾಬಾಯಿಯವರು ಮಾಡಲಿ. ಬಂದಿರುವ ಎಲ್ಲ ಜನರಿಗೂ ಸ್ವಾಗತ ಹೇಳುವುದು.

3. **ಪರಿಚಯ** – ಸುಧಾಬಾಯಿಯವರಿಗೂ, ಪದ್ಮಾಬಾಯಿಯವರಿಗೂ ಇಬ್ಬರಿಗೂ ಸ್ವಾಮಿಗಳು ಚೆನ್ನಾಗಿ ಗೊತ್ತಿದ್ದಾರೆ.

4. ಉದ್ಘಾಟನೆಯಾದ ಮೇಲೆ ನಿಮ್ಮ ಶಾಖೆಯ ಬಗ್ಗೆ ಪದ್ಮಾಬಾಯಿಯವರು ಅದನ್ನು ಮಾಡಬೇಕೆಂಬ ಉದ್ದಿಶ್ಯ ಯಾವಾಗ ಬಂತು? ಅದು ಮುಂದೆ ಯಾವ ಕಾರ್ಯಗಳನ್ನು ಮಾಡಬೇಕೆಂದಿದೆ ಎಂಬುದನ್ನು ಪದ್ಮಾಬಾಯಿಯವರು ಹೇಳಲಿ. ಸ್ವಾಮಿಗಳಿಗೆ ಶಾಖೆಯ ಎಲ್ಲರನ್ನೂ ಪರಿಚಯ ಮಾಡಬೇಕು.

5. ನೀವು ಕರೆದಿರುವ ಅಧ್ಯಕ್ಷರನ್ನು ಭಾಷಣ ಮಾಡಲು ಕಾರ್ಯದರ್ಶಿ ಹೇಳುತ್ತಾರೆ. ಮತ್ತು ವೇದಿಕೆಗೆ ಆಹ್ವಾನಿಸುತ್ತಾರೆ.

6. ಸ್ವಾಮಿಗಳ ಅನುಗ್ರಹ ಭಾಷಣ

7. ನಂತರ ಧನ್ಯವಾದಗಳು – ಯಾರಾದರೂ ಹೇಳಬಹುದು. ಇಷ್ಟು ಕಾರ್ಯಕ್ರಮ ವಾಗಬೇಕು.

Rarest Archiver

ಆಮಂತ್ರಣದ ಪತ್ರಗಳನ್ನು ಮಾಡಿಸಬೇಕು. ಅದರಲ್ಲಿ ಸುಧಾಬಾಯಿ ಮತ್ತು ಪದ್ಮಾಬಾಯಿ ಹೆಸರು ಇರಲೇಬೇಕು. ಶ್ರೀಯುತ ರಾಮರಾಯರು ಇದನ್ನು ಅಚ್ಚುಕಟ್ಟಾಗಿ ಮಾಡಿಕೊಡುತ್ತಾರೆ.

ಶ್ರೀಮತಿ ಕೋಲಾರ ಪದ್ಮಾಬಾಯಿಯವರ ಬಗ್ಗೆ ಬರೆಯುವಾಗ ಅಖಿಲಭಾರತ ಮಾಧ್ವ ಮಹಾಮಂಡಲದ ವಿಷಯವನ್ನೇಕೆ ಬರೆಯುತ್ತಿದ್ದೇನೆಂದರೆ ನಮ್ಮ ಮುಂದಿನ ಪೀಳಿಗೆ ಇದನ್ನೆಲ್ಲಾ ತಿಳಿಯಬೇಕು. ಹಿಂದಿನವರು ಪ್ರಚಾರ ಪ್ರಿಯರಾಗಿರಲಿಲ್ಲ. ಹೆಂಗಸರಿಗೆ ಅವರು ಎಷ್ಟೇ ಮೇಧಾವಿಗಳಾಗಿದ್ದರೂ ಕವಡೆ ಕಿಮ್ಮತ್ತಿರಲಿಲ್ಲ. ಬಹಳ ಹಿಂದೆ ಕೂಡಾ ಅಲ್ಲ. ಈಗ ಸುಮಾರು 30 ವರ್ಷಗಳ ಹಿಂದೆ ಹೆಣ್ಣು ಮಕ್ಕಳು ದೇವರನಾಮವನ್ನು ಹೇಳಿದರೆ ಅವರ ಮನೆಯ ಗಂಡಸರು - ಇನ್ನೊಂದು ಸಲ ನೀವು ದೇವರನಾಮ ಹಾಡುವುದನ್ನು ಕೇಳಿದರೆ - ರಾ, ನಿಮ್ಮನ್ನು ಮನೆ ಬಿಟ್ಟು ಓಡಿಸುತ್ತೇನೆ ಎಂದು ಹೇಳುತ್ತಿದ್ದರಂತೆ. ಅವರಿಗೋ ದಾಸರ ಪದಗಳನ್ನು ಹಾಡಲು ಆಸೆ. ಆದರೆ ಮನೆಯಲ್ಲಿ ಹೀಗೆ. ಆಕೆ ಆಂಧ್ರದವರು. ನಮಗೆ ತುಂಬಾ ಬೇಕಾದವರು. ಅವರ ಹೆಸರನ್ನು ನಾನು ಹೇಳುವುದಿಲ್ಲ. ಇನ್ನು ದೇವರ ನಾಮವನ್ನು ಹೇಳುವುದೇ ಬೇಡ ಎಂದಾಗ ಬರೆಯುವುದೆಲ್ಲಿಂದ ಬಂತು? ಪ್ರಕಟಿಸುವುದೆಲ್ಲಿಂದ ಬಂತು. ಕಾಲ ಬದಲಾಯಿತು. ಶ್ರೀಪಾದರಾಜರು ಮೊಟ್ಟಮೊದಲು ತಮ್ಮ ಹಾಡುಗಳನ್ನು ಹೇಳುವುದಕ್ಕೆ ಹೆಂಗಸರಿಗೂ ಅವಕಾಶ ಕೊಟ್ಟರು. ನಂತರ ಅವರ ಶಿಷ್ಯ ವ್ಯಾಸರಾಜರೂ ಗುರುಗಳ ದಾರಿಯಲ್ಲಿ ನಡೆದರು. ನಂತರ ಪುರಂದರದಾಸರ ಕಾಲದಲ್ಲೂ ಹೆಂಗಸರಿದ್ದರು. ಅವರೇ ಹೇಳಿದರು. "ಹೆಂಡತಿ ಸಂತತಿ ಸಾವಿರವಾಗಲಿ" ಎಂದರು. ಮುಂದುವರಿದು ಮತ್ತೆ ಕಣ್ಣು ಮುಚ್ಚಿತು. ಪುನಃ ತಂದೆ ಮುದ್ದು ಮೋಹನದಾಸರ ಕಾಲದಲ್ಲಿ ಸ್ತ್ರೀಯು ಅವರಿಂದಲೇ ಅಂಕಿತಗಳನ್ನು ಪಡೆದರು. ಹೀಗೆ ಪಡೆದವರು 300 ಮಹಿಳೆಯರು. ಅವರಲ್ಲಿ ದೇವರ ನಾಮಗಳನ್ನು ರಚಿಸಿದವರ ಒಂದು ದಂಡೇ ಇತ್ತು. ಶ್ರೀ ಗುರು ಗೋವಿಂದದಾಸರೂ ಕೂಡಾ ಅನೇಕ ಮಹಿಳೆಯರನ್ನು ದಾಸದೀಕ್ಷೆಯಲ್ಲಿ ತೊಡಗಿಸಿದರು. ಮತ್ತೆ 19 ಮತ್ತು 20ನೇ ಶತಮಾನಗಳಲ್ಲಿ ಅನೇಕ ದಾಸಮಹಿಳೆಯರು ದೇವರನಾಮಗಳನ್ನು ರಚಿಸಲಾರಂಭಿಸಿದರು. ಆದರೂ ಬಹಳ ಕಟ್ಟುನಿಟ್ಟಾದ ವಿದ್ವಾಂಸರಿಗೆ ಹರಿದಾಸರನ್ನು ಕಂಡರೆ ಆಗುತ್ತಿರಲಿಲ್ಲ. ಎಂದು ಅವರಿಗೆ ದಾಸರ ಮೇಲೆ ಕರುಣೆ ಬಂದಿತೋ, ಯಾಕೆಂದರೆ ದೊಡ್ಡ ದೊಡ್ಡ ಪೀಠಾಧಿಪತಿಗಳು ಅವರನ್ನು ಮಾನ್ಯ ಮಾಡತೊಡಗಿದರೋ, ಜಗನ್ನಾಥ ದಾಸರ ಮೇರು ಕೃತಿಯಾದ ಹರಿಕಥಾಮೃತ ಸಾರವು ದಾಸರ ಕಗ್ಗಗಳಲ್ಲದೆ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳ ಪ್ರಮೇಯವನ್ನೆಲ್ಲಾ ದಾಸರು ಬಹಳ ಸುಲಭವಾಗಿ ಅರ್ಥವಾಗುವಂತೆ

Rarest Archiver

ರಚಿಸಿದರೋ - ಅದನ್ನು ನೋಡಿ ವಿದ್ವಾಂಸರು ಹರಿದಾಸರ ತತ್ವವನ್ನು - ಶ್ರೀಹರಿಯನ್ನು - ಸರಳ ಕನ್ನಡದಲ್ಲಿ ಹಿಡಿದಿಟ್ಟುವರೋ ಅಂತಹ ಸಾಹಿತ್ಯ ಪ್ರತಿಭೆಯನ್ನು ಕಂಡು - ಹೆಣ್ಣುಮಕ್ಕಳ ಪ್ರತಿಭೆಯನ್ನೂ ಕಂಡು ಸಂತೋಷಪಟ್ಟರು. ಸನ್ಮಾನ್ಯರಾದ ಪೇಜಾವರ ಶ್ರೀಗಳು ಹೆಂಗಸರಿಗೆ ಅಂತಹ ಜ್ಞಾನದ ಬಾಗಿಲನ್ನು ವಿಶಾಲವಾಗಿ ತೆಗೆದು ಹೆಂಗಸರಿಗೆ ಶಿಬಿರಗಳನ್ನು ಏರ್ಪಡಿಸಿ ಅವರಿಗೆ ಇನ್ನೂ ತಿಳಿಯಾಗಿ ತತ್ವಶಾಸ್ತ್ರವನ್ನು ತಿಳಿಸಲು ತಮ್ಮ ವಿದ್ವಾಂಸ ಶಿಷ್ಯರನ್ನೇ ಪ್ರವಚನಕಾರರಾಗಿ ಕಳಿಸತೊಡಗಿದರು. ನಂತರ ಬಂದದ್ದೇ ತಿರುಪತಿಯ ತಿಮ್ಮಪ್ಪನ ಬಂಗಾರದ ಬಾಗಿಲಿನಲ್ಲಿ ಮಹಿಳೆಯರನ್ನು ನಿಲ್ಲಿಸುವ ಭಜನಾ ಮಂಡಲಿಗಳ ಪ್ರಾಜೆಕ್ಟ್. ಮೊದಲ ಪ್ರಾಜೆಕ್ಟ್ ಆಫೀಸರ್ ಆದ ಅಪ್ಪಣಾಚಾರ್ಯರು ಈ ಅಭಿಯಾನವನ್ನು ಬಹಳ ಸಮರ್ಥವಾಗಿ ನಡೆಸುತ್ತಾ ಬಂದರು. ಈಗ ಅವರು ನಿವೃತ್ತರಾಗಿ ಬೇರೆಯ ಆಫೀಸರು ಬಂದಿದ್ದಾರೆ. ಅದು ಇತೋತ್ಯತಿಶಯದಿಂದ ನಡೆದು ಬರುತ್ತಿದೆ. ಏನೂ ತಿಳಿಯದೆ ಮೂಢರಾಗಿದ್ದ ಹೆಣ್ಣುಮಕ್ಕಳು ತತ್ವಶಾಸ್ತ್ರದ - ಭಗವಂತನ - ಸೊಬಗಿನ ಸೋನೆಯಲ್ಲಿ ಮಿಂದು ಕಳಕಳಿಸುತ್ತಿದ್ದಾರೆ. ನಾನಂತೂ ಎಲ್ಲಿ ಭಾಷಣ ಮಾಡಬೇಕಾದರೂ ಮಹಿಳೆಯರನ್ನು ಈ ದಿವ್ಯಜ್ಞಾನದ ಜ್ಯೋತಿಯ ಹಾದಿಯಲ್ಲಿ ನಡೆಸಿದ ಮಹಾಮಹಿಮರಾದ ನಮ್ಮ ಗುರುಗಳಾದ ಪರಮಪೂಜ್ಯ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ್ವರ ಶ್ರೀಗಳನ್ನು ಮತ್ತು ತನ್ನಲ್ಲಿ ಪ್ರೀತಿಯಿಂಧ ತನ್ನ ದಾಸನ ಮೂಲಕ ಬರಮಾಡಿಕೊಳ್ಳುತ್ತಿರುವ ಸಪ್ತಗಿರಿಯ ಶ್ರೀನಿವಾಸನನ್ನು ನೆನೆದೇ ಮುಂದುವರಿಯುತ್ತೇನೆ.

ಹೀಗೆ ಈ ಭಾಗ್ಯವನ್ನು ಪಡೆದು ಶ್ರೀನಿವಾಸನ ಅಂದರೆ ಹರಿ-ಗುರುಗಳಿಂದ-ಶಾಲು, ಸಕಲಾತಿಗಳ ಜೊತೆಗೆ ಪ್ರಶಸ್ತಿ ಪಡೆದ, ಪಡೆಯುತ್ತಿರುವ ದಾಸಮಹಿಳೆಯರ ಸಾಲಿನಲ್ಲಿ ನಾವೆಲ್ಲಾ ನಿಂತಿದ್ದೇವೆ. ಅದು ಭಗವಂತನು ಕರುಣಿಸಿದ ಭಾಗ್ಯ. ಆ ಸಾಲಿನಲ್ಲಿ ಅನೇಕ ಮಹಿಳೆಯರಿದ್ದಾರೆ. ಅವರಲ್ಲಿ ನನ್ನ ಲೇಖನದ ನಾಯಕಿ ಶ್ರೀಮತಿ. ಕೋಲಾರ ಪದ್ಮಾಬಾಯಿಯವರು ಬರುತ್ತಾರೆ.

ಕೋಲಾರ ಪದ್ಮಾಬಾಯಿಯವರು ತಮ್ಮ ತಂದೆಯ ಬಳಿ ಯಾವತ್ತೂ ಶಾಸ್ತ್ರಗಳನ್ನು ತಿಳಿದುಕೊಂಡವರು. ಅವರ ತಂದೆ ಶ್ರೀಯುತ ನಾಗೇಶರಾಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದರು. ಅವರ ಶಿಷ್ಯರಲ್ಲಿ ಮಹಾರಾಜಾ ಶ್ರೀ ಜಯಚಾಮರಾಜೇಂದ್ರ ಒಡೆಯರು. ಸರ್ವಶ್ರೀ. ನಿಟ್ಟೂರು ಶ್ರೀನಿವಾಸರಾಯರು, ಸೋಮನಾಥ ಅಯ್ಯರ್, ಸದಾಶಿವಯ್ಯರ್, ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರು, ದೇವರಾಜ ಅರಸು ಮೊದಲಾದವರು ದಿ || ಸರ್ವಶ್ರೀ. ಡಿ.ವಿ.ಜಿ. [illegible], ಶ್ರೀ ಮಾಸ್ತಿ, ಟಿ.ಎಸ್. ವೆಂಕಣ್ಣಯ್ಯ ಮೊದಲಾದವರು ಇವರ ಪರಮಮಿತ್ರರು.

Rarest Archiver

ರಾಷ್ಟ್ರಕವಿ ಕೆ.ವಿ. ಪುಟ್ಟಪ್ಪನವರು, ಜಿ.ಪಿ. ರಾಜರತ್ನಂರವರು, ಪ್ರಿನ್ಸಿಪಾಲ್ ಹೋಲ್ಡೋ, ಎ.ಆರ್. ಕೃಷ್ಣಶಾಸ್ತ್ರಿ ಮೊದಲಾದವರು ಇವರ ಸಹೋದ್ಯೋಗಿಗಳು. ಇವರು ಆಂಗ್ಲ ಕವಿಗಳಾದ ಷರ್ಲೆ ಮತ್ತು ಕೀಟ್ ಅವರ ಕವನಗಳನ್ನು ಹೇಳುವುದರಲ್ಲಿ ಅದ್ವಿತೀಯರು.

ನಿತ್ಯಾಹ್ನಿಕ, ದೇವಪೂಜಾ, ಅನುಯಾಗ ಪೂಜಾ, ಏಕಾದಶಿ ಇತ್ಯಾದಿ ವ್ರತೋಪವಾಸಗಳನ್ನು ಮಾಡುತ್ತಾ, ಪ್ರಖ್ಯಾತ ಪಂಡಿತರಲ್ಲಿ ಎಲ್ಲಾ ವೇದಗಳನ್ನೂ ಅಭ್ಯಾಸ ಮಾಡಿ, ಪೂರ್ವ-ಪಾಶ್ಚಾತ್ಯ ಮತಗಳನ್ನು ವಿಮರ್ಶೆ ಮಾಡಿ, ಶ್ರೀಮದಕ್ಷೋಭ್ಯ ತೀರ್ಥ ಮಠದ ಶ್ರೀ ರಘುದಾಂತರಲ್ಲಿಯೂ, ಶ್ರೀಪಾದರಾಜ ಮಠದ ದಯಾನಿಧಿ ತೀರ್ಥರಲ್ಲಿಯೂ, ಶ್ರೀ ಮಧ್ವಶಾಸ್ತ್ರವನ್ನು ವ್ಯಾಸಂಗಮಾಡಿ ಶಾಸ್ತ್ರನಿಶ್ಚಿತ ಜ್ಞಾನ ವುಳ್ಳವರಾಗಿದ್ದರು. ತಂಬೂರಿಯೊಂದಿಗೆ ಸುಶ್ರಾವ್ಯವಾಗಿ ಭಜನೆ ಮಾಡುತ್ತಿದ್ದರು. ದಾಸಸಾಹಿತ್ಯವನ್ನು ವಿಮರ್ಶೆಮಾಡಿ ದಿ || ಸುಬೋಧರಾಮರಾಯರಿಂದ ಪ್ರಕಟವಾದ ಹರಿದಾಸ ತರಂಗಿಣಿಯ ಪರಿಶೋಧಕರಾಗಿದ್ದರು. ಕರ್ನಾಟಕ ಸಾಹಿತ್ಯ ಪರಿಷತ್ತು ಇವರ ಪುರಂದರೋಪನಿಷತ್ತನ್ನು ಪ್ರಕಟಪಡಿಸಿದೆ. ಪದ್ಮಾಬಾಯಿಯವರ ತೀರ್ಥರೂಪರು ನಿವೃತ್ತರಾದ ಮೇಲೆ ಬಳ್ಳಾರಿಯಲ್ಲಿ ರಾಜ ಋಷಿಯಂತೆ ಶಾಸ್ತ್ರಾಧ್ಯಯನದಲ್ಲಿ ಹಾಗೂ ಅಧ್ಯಾತ್ಮ ವಿಚಾರದಲ್ಲಿ ಸದಾ ಕಾಲವನ್ನು ಕಳೆದು ತಮ್ಮ 86ನೇ ವಯಸ್ಸಿನಲ್ಲಿ (26-7-87)ರಲ್ಲಿ ವೈಕುಂಠವಾಸಿಗಳಾದರು.

ಪದ್ಮಾಬಾಯಿಯವರು ತಮ್ಮ 15ನೇ ವಯಸ್ಸಿನಲ್ಲಿ ರಾಮರಾಯರ ಮನೆಗೆ ಬಂದರು. ರಾಮರಾಯರು ಬಹಳ ದೊಡ್ಡ ವಕೀಲರಾಗಿದ್ದರು. ಪದ್ಮಾಬಾಯಿಯವರು ಒಂದು ಕಡೆ ಹೇಳಿದ್ದಾರೆ. ಅವರ ತಾಯಿ ಮೊದಲೇ ಹೋಗಿದ್ದರಂತೆ. ಪದ್ಮಾಬಾಯಿಯರು ಹೇಳುತ್ತಾರೆ - "ಎಳೆಯತನದಲಿ ಎನಗೆ, ಒಲವಿನಿಂ ವಿದ್ಯೆಗಳ ಗಿಳಿಗೊರೆವ ತೆರದಿ ಒರೆದೆ। ಕುಲದೊಳುತ್ತಮರಾದ ವರನಿಗೆನ್ನನು ದಾನ ಬಲು ಸಂಭ್ರಮದಿಂದ ಮಾಡಿದೆ ಬಿಡದೆ".

ಅತ್ತೆಯ ಮನೆಯಲ್ಲೂ ಸಾಂಪ್ರದಾಯಿಕ ಜೀವನಕ್ಕೆ ಕೊರತೆ ಇರಲಿಲ್ಲ. ಅಲ್ಲಿಗೂ ಅನೇಕ ಜನ ಮಾಧ್ವ ಪೀಠಾದಿಪತಿಗಳು ಪಂಡಿತ ಪ್ರಕಾಂಡರಾದ ಶ್ರೀ ವರಖೇಡಿ ನರಸಿಂಹಾಚಾರ್ಯರು, ಜಾಲಿಹಾಳು ಶ್ರೀನಿವಾಸಾಚಾರ್ಯರು, ಕೇಶವಾಚಾರ್ಯರು, ಹರಿಕಥಾ ವಿದ್ವಾಂಸರಾದ ಶ್ರೀ. ವೇಣುಗೋಪಾಲದಾಸರು ಮುಂತಾದವರೆಲ್ಲ ಬರುತ್ತಿದ್ದರು.

ಹೀಗೆ ಪದ್ಮಾಬಾಯಿಯವರ ಹುಟ್ಟಿದ - ಸೇರಿದ ಮನೆಗಳು ಅತ್ಯಂತ ಮುದವನ್ನು ಕೊಟ್ಟವು. ಪದ್ಮಾವತಿ ಬಾಯಿಯವರ ತಂದೆ ಮಗಳ ಮನೆಯಲ್ಲೇ ಇದ್ದರೆಂದು ಕಾಣುತ್ತದೆ.

Rarest Archiver

ಅವರ ಕೊನೆಯ ದಿನಗಳಲ್ಲಿ ಆಕೆ ಅವರು ಕೇಳಿದ ವಿಷಯಗಳನ್ನು ಓದಿ ಹೇಳುತ್ತಿದ್ದರು. ಒಂದು ದಿನ ಅವರು ಅಕ್ಷಯಾಂಬರ ಪ್ರಸಂಗವನ್ನು ಓದಿ ಹೇಳುತ್ತಿದ್ದಾಗ ಇದ್ದಕ್ಕಿದ್ದಂತೆ ಆಕೆಗೆ ನುಡಿಗಳು ಬಾಯಿಂದ ಬರಲಾರಂಭಿಸಿದುವು. ಆಕೆ ಆಶ್ಚರ್ಯದಿಂದ ತಂದೆಗೆ ಹೇಳಿದರಂತೆ. ಅವರು ತುಂಬಾ ಸಂತೋಷಪಟ್ಟು ಆಶೀರ್ವದಿಸಿದರಂತೆ. ಆಗ ಆಕೆಯು ತನಗೆ ತಂದೆಯೂ ಆಗಿ, ಗುರುಗಳೂ ಆಗಿರುವ ಶ್ರೀ ನಾಗೇಶರಾಯರನ್ನು ತನಗೆ **ನಾಗೇಶ ಶಯನ** ಎಂಬ ಮುದ್ರಿಕೆಯನ್ನು ಕೊಡಿ ಎಂದಾಗ ಅವರು ಅಂಕಿತವನ್ನು ಕೊಟ್ಟರಂತೆ. ಅಂದಿನಿಂದ ಪ್ರತಿನಿತ್ಯ ಹಾಡುಗಳು ಬರಲಾರಂಭಿಸಿತಂತೆ. ಹೀಗೆ ದಾಸಸಾಹಿತ್ಯಕ್ಕೆ ದಾಸಪಂಥಕ್ಕೆ ಇನ್ನೊಂದು ಪ್ರತಿಭೆ ಬಂದು ಸೇರಿತು.

ವಿಜಯದಾಸರು ತಮ್ಮ ಒಂದು ಕೀರ್ತನೆಯಲ್ಲಿ ದಾಸ ದಾಸ ದಾಸರ ದಾಸ್ಯವ ಕೊಡು, ದೋಷ ರಾಶಿ ಅಳಿದು ಎಂದು ಹೇಳುತ್ತಾ "ಸರಸ ಸಜ್ಜನರ ಸಂಗದೊಳೆನ್ನನು ನಿರುತ ನಿಲಿಸುವುದು ನೀರಜಾಕ್ಷ ಹರಿ" ಎಂದು ಹೇಳಿದ್ದಾರೆ. ನನಗೆ ಆ ಹಾಡು ಬಹಳ ಇಷ್ಟವಾದದ್ದು - ಯಾಕೆಂದರೆ ಹರಿಗುರುಗಳ ದಯದಿಂದ ನನಗೆ ಇಂತಹ ಅನೇಕ ಮಹಿಳೆಯರ ಅಗಾಧ ಪ್ರೀತಿಯನ್ನೂ ಸ್ನೇಹ ಸೌಹಾರ್ದಗಳನ್ನೂ ಸ್ವಾಮಿ ದೊರಕಿಸಿಕೊಟ್ಟಿದ್ದಾನೆ. ದಾಸ ಮಹಿಳೆಯರ ಮನಸ್ಸು ಯಾವಾಗಲೂ ಶ್ರೀಹರಿಯಲ್ಲೇ ನಿಂತಿರುತ್ತದೆ. ಒಬ್ಬೊಬ್ಬರೂ ಭಗವಂತನನ್ನು ವಿಶೇಷವಾಗಿ ಆಶ್ಚರ್ಯಕರವಾಗಿ ಪ್ರೀತಿ ಪುರಸ್ಸರವಾಗಿ, ಅದ್ಭುತವಾಗಿ ಕೊಂಡಾಡುತ್ತಿರುತ್ತಾರೆ. ಆ ಒಂದು ಕೂಟದಿಂದ, ಒಡನಾಟದಿಂದ, ಜೀವಗಳು ಶಾಂತವಾಗಿ, ತೃಪ್ತವಾಗಿ ಆನಂದ ಪೂರ್ಣವಾಗಿರುತ್ತದೆ. ಮನಸ್ಸು ಯಾವಾಗಲೂ ತಾನು ಚಿಂತಿಸುತ್ತಿರುವ ದೈವದಲ್ಲೇ ನೆಲೆಸಿರುತ್ತದೆ. ಅವರು ಕಂಡ ಕಂಡಲ್ಲಿ ಆ ಹಿರಿಯ ದೈವವನ್ನೇ ನೆನೆಸುತ್ತಿರುತ್ತಾರೆ. ಪ್ರತಿಯೊಂದು ಜಡ ಚೇತನದಲ್ಲೂ ಭಗವಂತನ ಸೃಷ್ಟಿವೈಚಿತ್ರ್ಯದ ಜೊತೆಗೆ ಸ್ವಾಮಿಯು ಅವುಗಳನ್ನು ಕಾಪಾಡುವ ಕೆಲಸವನ್ನೂ ನಿರ್ವಹಿಸುತ್ತಿರುತ್ತಾನೆಂಬುದನ್ನು ಸ್ವತಃ ಅನುಭವಿಸುತ್ತಿರುತ್ತಾರೆ. ಇದು ಈ ಭಾವ ಎಲ್ಲರಲ್ಲೂ ಇರುತ್ತದೆ. ಕನ್ನಡ ಕವಿಯೊಬ್ಬರು ಹೇಳಿದ್ದಾರೆ - "ಲಘುವಾಗೆಲೆ ಮನ, ಗೆಲುವಾಗೆಲೆ ಮನ ಹಾರೂ ಮೇಲೆ ಮೇಲೆ ಹಾರಿ। ಹರಿಯ ಸೇರು" ಹಾಗೆ ಮನಸ್ಸು ಹರಿಯೊಂದಿಗೆ ಸೇರಲು ಸಾಧಕನ ಮನಸ್ಸು ತವಕಗೊಂಡಿರುತ್ತದೆ.

ಪದ್ಮಾಬಾಯಿಯವರ ಕಾಲಕ್ಕೆ ಸ್ತ್ರೀಯರು ಶಾಲೆಗೆ ಹೋಗಲಾರಂಭಿಸಿದ್ದರು. ಜನರ ಜೀವನದಲ್ಲಿ ಸುಧಾರಣೆ ಆಯಿತು. ವಿದ್ವಾಂಸರೂ ವಿಶಾಲ ಮನಸ್ಕರಾದರು. ಸ್ತ್ರೀಯರೂ ಲೌಕಿಕ ವಿದ್ಯೆಯ ಜೊತೆಗೇ ಅಷ್ಟೇ ಉತ್ಸುಕತೆಯಿಂದ ಪಾರಲೌಕಿಕವೂ ಬೇಕೆಂದು ಬಯಸಿದರು. ಓದಿದರು - ಪ್ರವಚನಗಳನ್ನು ಆಲಿಸಿದರು. ಅದರಲ್ಲಿ ಮಗ್ನರಾದರು.

Rarest Archiver

ಪರತತ್ವವನ್ನು ಅರಿಯಲು ಆಶಿಸಿದರು. ಸಂಕುಚಿತ ಮನಸ್ಸು ವಿಶಾಲವಾಯಿತು. ತತ್ವವನ್ನು ಇನ್ನೂ ಅರಿಯಲು, ಮತ್ತೂ ಅರಿಯಲು ಆಶಿಸಿದರು. ವಾತಾವರಣವೂ ಅದಕ್ಕೆ ತಕ್ಕಂತೆ ಬದಲಾವಣೆಗೊಂಡಿತು. ಸ್ತ್ರೀಯರಿಗೆ ಸಾಧ್ಯವಾದಷ್ಟು ಮಾನ್ಯತೆ ದೊರೆಯಿತು. ಮನಸ್ಸು ತುಂಬಿತು.

ಇದೇ ಒಂದು ದೈವಿಕ ವಾತಾವರಣದಲ್ಲಿ ಬೆಳೆದ ಸ್ತ್ರೀಯರು ಹಿಂದಿನ ದಾಸಮಹಿಳೆಯರನ್ನು ಅನುಸರಿಸತೊಡಗಿದರು. ಅನೇಕ ಪುಸ್ತಕಗಳು, ಪ್ರವಚನಗಳು, ವಿಮರ್ಶೆಗಳು, ಮಾಧ್ಯಮಗಳೂ ಸಹಾ ದೈವಿಕ ಭಾವನೆಗಳನ್ನು ವಿಧ ವಿಧವಾಗಿ ಪ್ರಚೋದಿಸಿತು.

ಹೀಗಾಗಿ ನಾವು ಕೋಲಾರ ಪದ್ಮಾಬಾಯಿಯವರ ದಾಸಸಾಹಿತ್ಯದ ವೈವಿಧ್ಯಗಳನ್ನು ಕಾಣುತ್ತೇವೆ. ನನ್ನ ಬಳಿ ಶ್ರೀಮತಿ. ಪದ್ಮಾಬಾಯಿಯವರ ಹಾಡುಗಳ 6 ಸಂಚಿಕೆಗಳು ಮಾತ್ರ ಇವೆ. ಇವೆಲ್ಲವೂ ಪದ್ಮಾಬಾಯಿಯವರೇ ನನಗೆ ಪ್ರೀತಿಯಿಂದ ಕೊಟ್ಟ ಉಡುಗೊರೆಗಳಾಗಿವೆ. ಇನ್ನೂ ಎರಡು ಇವೆಯೆಂದು ತಿಳಿಯಿತು. ಅವು ಲಭ್ಯವಾಗಿಲ್ಲ. ಇರುವುದೇ ಬೇಕಾದಷ್ಟಾಗಿದೆ. ಇವರ ತಾರತಮ್ಯೋಕ್ತ ಭಜನ ಸುಮಮಾಲಾ ಎಂಬ ಆರನೆಯ ಸಂಪುಟಕ್ಕೆ ಮುನ್ನುಡಿಯನ್ನು ಬರೆಯುತ್ತಾ ಸುಪ್ರಸಿದ್ಧ ಪಂಡಿತರಾದ ಪಂಡಿತ ಜಾಲಿಹಾಳ ಕೇಶವಾಚಾರ್ಯರು ಹೀಗೆ ಬರೆದಿದ್ದಾರೆ – 'ಇವರ ಶ್ರೀಹರಿಯ, ಗುರು – ಪತಿ ಮತ್ತು ಪಿತೃಭಕ್ತಿ ಪೂರ್ವಕವಾದ ಭಗವದಾರಾಧನಾ ಫಲವಾಗಿ ಪ್ರತಿಭಾ ಪರಿಪೂರ್ಣ ಪ್ರಸಾದಮಯ. ಪ್ರಾಸ, ಅಲಂಕಾರ, ರಸ, ಸುಮಧುರ, ಸರಸ-ಸಂಕೀರ್ತನೆಗಳು ನಿಜವಾಗಿಯೂ ಆಸಕ್ತಿಕರ. ವಿಶೇಷತಃ ಮಹಿಳೆಯರ ಹೃದಯಗಳಲ್ಲಿ ಭಗವದ್ಭಕ್ತಿ, ಭಾಗವತ ಧರ್ಮಾಸಕ್ತಿ, ಆಸ್ತಿಕ್ಯಮತಿ ನೈತಿಕ ಸನ್ಮತಿ, ಸಾರಾಸಾರ ವಿವೇಕ ಸಹಿತ ಗುರುಭಕ್ತಿ ಕರ್ತವ್ಯನಿಷ್ಠತೆಯನ್ನು ಹುಟ್ಟಿಸುತ್ತವೆಯೆಂದು ಧಾರಾಳವಾಗಿ ಹೇಳಬಹುದು.'

ಶ್ರೀಯುತ ದರ್ಶರತ್ನ ಪ್ರೊಫೆಸರ್. ಕೆ.ಟಿ. ಪಾಂಡುರಂಗಿಯವರು ಶ್ರೀಮತಿ ಪದ್ಮಾಬಾಯಿಯವರ ಸಾಹಿತ್ಯವು ಅವರ ಸಾಮರ್ಥ್ಯವನ್ನು ವ್ಯಕ್ತಪಡಿಸುವುದಾಗಿರುತ್ತದೆ. ಸುಲಭವಾದ, ಸ್ಪಷ್ಟವಾದ ನಿರೂಪಣೆ, ಪರಿಣಾಮಕಾರಿಯಾದ ಉಪಮೆ, ದೃಷ್ಟಾಂತಗಳು, ನಿರಾಯಾಸವಾದ ವಾಗ್‌ಝುರಿ, ಅವರ ಕೃತಿಗಳ ವೈಶಿಷ್ಟ್ಯವಾಗಿವೆ. ತತ್ವಗಳನ್ನು ಶಾಸ್ತ್ರ ಶುದ್ಧವಾಗಿ ನಿರೂಪಿಸಿರುವರು. ಸಾಹಿತ್ಯದ ಆಕರ್ಷಣೆ ತತ್ವನಿರೂಪಣೆಯ ಗಾಂಭೀರ್ಯ ಎರಡನ್ನೂ ಈ ಕೃತಿಗಳಲ್ಲಿ ಕಾಣಬಹುದು.

Rarest Archiver

**ಪೂಜ್ಯ ವಿಶ್ವೇಶ ಸ್ವಾಮಿಗಳ ಅಭಿಪ್ರಾಯ ಹೀಗಿದೆ -**

ಶ್ರೀಮತಿ ಪದ್ಮಾಬಾಯಿಯವರ ಈ ಕೃತಿಯಲ್ಲಿ ಅವರ ಭಕ್ತಿಪೂರ್ಣ ಅಂತರಂಗವನ್ನು ನಾವು ಕಾಣಬಹುದು. ಸುಂದರ ಹೃದ್ಯ ಶೈಲಿಯಲ್ಲಿ ಭಗವಂತನ ಮತ್ತು ಭಕ್ತರ ಮಹಿಮೆಯನ್ನು ಇಲ್ಲಿ ವರ್ಣಿಸಲಾಗಿದೆ. ಶಾಸ್ತ್ರದ ತತ್ವಾರ್ಥವನ್ನು ಈ ಸುಮಧುರ ಕಾವ್ಯದಲ್ಲಿ ಜೋಡಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ -

(ಕೃತಿ - ಭಾಗವತ ಪ್ರಸಂಗ ಕೀರ್ತನ ಸುಮಮಾಲ)

ಪರಮಪೂಜ್ಯ ಶ್ರೀ ವಿದ್ಯಾಮಾನ್ಯತೀರ್ಥ ಸ್ವಾಮಿಗಳು ಫಲಿಮಾರು ಭಂಡಾರಕೇರಿ ಮಠದ ಸ್ವಾಮಿಗಳು -

ಈ ಪದ್ಯಗಳು ಭಕ್ತಿರಸಭರಿತ ದ್ರಾಕ್ಷಾಪಾಕದ ಸುಂದರ ಪದವಿನ್ಯಾಸಗಳಿಂದಲೂ ಸಮುಚಿತ ಉಪಮಾನಗಳಿಂದಲೂ ಶೋಭಿಸುತ್ತಿರುವುಗಳಾಗಿವೆ. ಇವುಗಳನ್ನು ಓದಿದವರು ಪುನಃ ಪುನಃ ಓದಬೇಕೆಂಬ ಲವಲವಿಕೆ ಉಳ್ಳವರಾಗುತ್ತಾರೆ ಎಂದಿದ್ದಾರೆ.

ಇಷ್ಟು ಮಹಾಮಹಿಮರುಗಳಿಂದ ಶ್ಲಾಘನೆಗೆ ಒಳಗಾದ ಶ್ರೀಮತಿ. ಪದ್ಮಾಬಾಯಿಯವರ ರಚನೆ ಹೇಗಿದೆ ಎಂದು ಮುಂದೆ ನೋಡೋಣ.

ಪದ್ಮಾಬಾಯಿಯವರ ರಚನೆಗಳು ತುಂಬಾ ಸರಳವಾಗಿ ಓಡಿಸಿಕೊಂಡು ಹೋಗುತ್ತವೆ. ಇದೇ ಅದರ ವಿಶಿಷ್ಟತೆ. ನಾನೀಗ ಅವರ ಕೆಲವು ರಚನೆಗಳನ್ನು ಬರೆಯುತ್ತಿದ್ದೇನೆ.

''ಇದು ಅವರ ಗೃಹಿಣಿ, ಗೃಹಸ್ಥ ಧರ್ಮವಿವೇಕ'' ಎಂಬ ಪುಸ್ತಕದಲ್ಲಿದೆ, ಮೊದಲು ಈ ಪ್ರಾರ್ಥನೆ ಇದೆ.

## ಭಾಮಿನಿ ಷಟ್ಪದಿ

**ಶ್ರೀ ಕಳತ್ರ ನೀಗಭಿನಮಿಸಿ ನಾ**
**ಜೋಕೆಯಿಂದಲಿ ಪ್ರಾಣ, ವಾಣಿಗೆ**
**ಏಕದಂತನ ಪಾದಪದ್ಮಕೆ ನಮಿಸುವೆನು ಸತತ**
**ಶ್ರೀಕರನ ಮಹಿಮೆಗಳ ಮರೆಯುತ**
**ಕಾಕುಭವದಲಿ ಸಿಲುಕಿರುವ, ಸುವಿ**
**ವೇಕಿ ಗೃಹಿಣಿ, ಗೃಹಸ್ಥ ಸುಜನರಿಗೊರೆ ಹಿತವಚನ ॥ 1 ॥**

Rarest Archiver

ಎರಡು ಸಾವಿರ ಜಿಹ್ವೆಯಿಂದಲಿ
ಹರಿಯ ಮಹಿಮೆ ಸುರೂಪ ಕ್ರಿಯೆಗಳ
ಪರಮ ಭಕ್ತ್ಯುದ್ರೇಕಚಿತ್ತದಿ ಹಿರಿದು ಪೊಗಳುತಿಹ ।
ತರುಣಿ ವಾರಿಣಿ ರಮಣ ಶೇಷನ
ವರ ಸುತಲ್ಪದಿ ಸಿರಿಯ ಸಹಿತದಿ
ಮೆರೆವ ಹರಿಯ ಸುಕರುಣ ಪಡೆಯಲಿ ಸರ್ವಸಜ್ಜನರು ॥ 2 ॥

ಹೀಗೆ ನಾಲ್ಕು ಪದ್ಯಗಳಲ್ಲಿ ಗೃಹಧರ್ಮವನ್ನು ಯಾವ ರೀತಿಯಲಿ ಪಾಲಿಸಬೇಕು ಎಂಬುದನ್ನು ಹೇಳುತ್ತಾರೆ. ಗೃಹಸ್ಥನು ಭಗವಂತನ ಪಾದಪದ್ಮಗಳನ್ನು ಹಿಡಿದು ಅವನನ್ನು ನವವಿಧದ ಭಕ್ತಿಯಿಂದಲಿ ಸೇವಿಸುತ್ತಾ ಪವನ ಶಾಸ್ತ್ರವ ಜವದಿ ನಡೆಸುತ ಈ ಗೃಹಧರ್ಮವನ್ನು ನಾಗೇಶಶಯನನಿಗೆ ಅರ್ಪಿಸಿದರೆ ಭವದ ಸಾಗರವನ್ನು ದಾಟಿಸುವನು ಎನ್ನುತ್ತಾರೆ.

ಇನ್ನು ಗೃಹಿಣಿ ಹೇಗಿದ್ದರೆ ನಾಗೇಶಶಯನನು ಸದ್ಗತಿಯನು ಕರುಣಿಸುತ್ತಾನೆ? ಎಂದರೆ

ರಾಗ: ಸಿಂಹೇಂದ್ರ ಮಧ್ಯಮ

## ಗೃಹಿಣಿ ಹೀಗಿರಬೇಕು

ಇರಬೇಕು, ಇರಬೇಕು, ಇರಬೇಕು ಹೀಗೆ
ಹರಿ ಕರುಣ ಪಡೆದಿರುವ ಪತಿವ್ರತೆಯರ್ರಾಗೆ ॥

ಪತಿಯೊಡನೆ ಇರಬೇಕು ವಸುಧೆ ಸುತೆಯಂತೆ
ಪತಿಯನೊಲಿಸಲು ಬೇಕು ಪಾಂಚಾಲಿಯಂತೆ
ಪತಿಯ ಸೇವಿಸಬೇಕು ಅನಸೂಯೆಯಂತೆ
ಪತಿಯಅರಸಲು ಬೇಕು ದಮಯಂತಿಯಂತೆ ॥ 1 ॥

ಪತಿಯ ವ್ರತವಿರಬೇಕು ಅರುಂಧತಿಯಂತೆ
ಪತಿಯ ಭಯ ಕಳೆಬೇಕು ಸಾವಿತ್ರಿಯಂತೆ
ಪತಿಗೆ ಹಿತಗೈಯಬೇಕು ಚ್ಯವನ ಸತಿಯಂತೆ
ಪತಿಯಲ್ಲಿ ಇರುವ ಹರಿ ರಕ್ಷಿಸುವನಂತೆ ॥ 2 ॥

Rarest Archive

**ಪತಿವ್ರತೆಯರಾದಂಥ ಸುದತಿಯರ ಕಥೆಯ**
**ಹಿತದಿಂದ ಕೇಳಿ ಪಡೆಯಲಿಬೇಕು ಧೃತಿಯ**
**ಮತಿವಂತರಾಗಿ ತಿದ್ದಲುಬೇಕು ಮತಿಯ**
**ಹಿತದಿ ನಾಗೇಶಶಯನನು ಕೊಡುವ ಗತಿಯ** ॥ 3 ॥

ಗೃಹಸ್ಥರಾದವರು ಈ ರೀತಿಯಿಂದಿದ್ದರೆ ನಾಗೇಶಶಯನನು ಸದ್ಗತಿಯನ್ನು ಕೊಡುವನಂತೆ – 3

ಬಹಳ ಸುಲಭವಾದ ನುಡಿಗಳಲ್ಲಿ ಒಬ್ಬೊಬ್ಬ ಪತಿವ್ರತೆಯರ ಜೀವನದ ಮಹಿಮೆಯನ್ನು ಕೊಂಡಾಡಿದ್ದಾರೆ –

ಒಂದುನೂರ ಹನ್ನೊಂದು ಪದಗಳಲ್ಲಿ ಗೃಹಸ್ಥ ಗೃಹಿಣೀ ಧರ್ಮವನ್ನು ಅನೇಕ ಕಥೆಗಳಿಂದ ತಿಳಿಸಿ, ನೀನೂ ಹೀಗೆಯೇ ಮಾಡಬೇಕಮ್ಮ ಎಂದು ಉಪದೇಶಿಸುತ್ತಾರೆ. 101 ಪದಗಳಲ್ಲಿ ಒಬ್ಬೊಬ್ಬ ಪತಿವ್ರತೆಯರ ಕಥೆಗಳನ್ನು ಹಿಡಿದಿಟ್ಟಿರುವುದು ಶ್ಲಾಘನೀಯವಾಗಿದೆ. ಏನೂ ಕಷ್ಟ ಪಡದೆ ಹಾಯಾಗಿ ಈ 101 ಪದಗಳು ಬಹಳ ಚೆನ್ನಾಗಿ ಮೂಡಿಬಂದಿವೆ. ಕೋಲು ಹಾಡೆಂಬ ಈ ಪದಗಳನ್ನು ಹೇಳುತ್ತಾ ಕೋಲಾಟವಾಡಿದರೆ ಚೆನ್ನಾಗಿರುತ್ತದೆ. ಸುಲಭ ಪದಗಳಲಿ ಸುಲಭವಾಗಿ ನಡೆಯಿದೆ.

ಕಾಲಾರ ಪದ್ಮಾಬಾಯಿಯವರ ಪದಗಳು ಲಾಲಿತ್ಯಪೂರ್ಣಗಳು – ಯಾವುದೇ ಪದವನ್ನು ನೋಡಿದಾಗ ಅವು ಎಷ್ಟು ಸುಲಭವಾಗಿ, ಲಾಲಿತ್ಯಪೂರ್ಣವಾಗಿ, ಅರ್ಥಗರ್ಭಿತವಾಗಿ ಇರುತ್ತದೆ ಎಂಬುದನ್ನು ನೋಡಬಹುದು. ಇದು ಅವರ ತಾರತಮ್ಯೋಕ್ತ ಭಜನ ಸುಮಮಾಲಾ ಎಂಬ ಪುಸ್ತಕದಲ್ಲಿ ಬರುವ ಮಂಗಳಾಚರಣ ಪದ್ಯ ಭಾಮಿನಿ ಷಟ್ಪದಿಯಲ್ಲಿ ಇದೆ.

**ಹನ್ನೆರಡು ಮತ್ತೆರಡು ಲೋಕವ**
**ತನ್ನ ಜಠರದೊಳಿಟ್ಟು ಪೂರ್ವದಿ**
**ಘನ್ನ ಮಹಿಮನು ಪ್ರಳಯ ಜಲಧಿಲಿ ಶೇಷತಲ್ಪದಲಿ ।**
**ಕನ್ನೆ ಲಕುಮಿಯ ಬಾಹುಲತೆಗಳ**
**ಲಿನ್ನು ಬಂಧಿತನಾಗಿ ತೋರ್ವ ಪ್ರ**
**ಪನ್ನ ವತ್ಸಲ ಸುಲಭ ಸ್ವರಮಣ ಸಕಲ ಸುಖಪೂರ್ಣ** ॥ 1 ॥

Rarest Archiver

ಚಂದ್ರಮನ ಉರುಕಾಂತಿ ಪಕ್ಷಕೆ
ಕುಂದುವುದು ಶ್ರೀರಾಮಚಂದ್ರನ
ಕುಂದದಿಹ ಸ್ವೈಶ್ವರ್ಯಕಾಂತಿಯು ಸತತ ಉದಿತವದು ।
ಇಂದಿರೇಶ, ಸುಖಾತ್ಮಬಿಂಬ, ಸು
ಮಂದಹಾಸದಿ ನೋಡಿ ಸುಜನಕೆ
ಬಂದ ಸಂತಾಪಗಳ ಕಳೆವನು ಪೂರ್ಣಚಂದ್ರಮನು ॥ 2 ॥

ಹರಿಯ ಪರಿವಾರದ ಸುಭಕ್ತರು
ಸಿರಿ, ವಿರಿಂಚಿ, ಭವಾದಿ ಮುಖ್ಯರ
ಸುರರ ವೈದ್ಯರ ರಮಣಿ ನಾಮಾದೇವಿ ಪರ್ಯಂತ ।
ತರತಮದ ಭಾವದಲಿ ಪೂಜಿಪ
ಪರಮ ಭಕ್ತರಿಗೊಲಿವ ಶ್ರೀಹರಿ
ಸುರರ ಅವಹೇಳನವ ಸಹಿಸನು ಸುಮನಸರ ಪ್ರಿಯ ॥ 3 ॥

ಮೂರು ಅವತಾರಗಳ ತಾಳುತ
ಮೂರು ಆಶ್ರಮ ವಿಧವ ತೋರುತ
ಶ್ರೀ ರಮಾಪತಿ ಈಶ ಉಳಿದರು ದಾಸನೆಂತೆಂದ ।
ಮಾರುತನಮತ ಪಿಡಿದು ಸುರ ಪರಿ
ವಾರ ಮಧ್ಯದಿ ಹರಿಯ ಪೂಜಿಪ
ಸೂರಿಗಳ ಮಮತೆಯಲಿ ಕಾವನು ಮಧ್ವವಲ್ಲಭನು ॥ 4 ॥

## ಶ್ರೀ ಕಡಗೋಲು ಕೃಷ್ಣಲೀಲ ಕಮಲ

ರಾಗ: ಬಿಲಹರಿ - ಆದಿತಾಳ

ಬಿಡು ಬಿಡು ಸೆರಗ ಗೋಪಾಲ
ಕೊಡು ಕೊಡು ಕಡಗೋಲ ಬಾಲ ॥ ಪಲ್ಲವಿ ॥

ಬಿಡು ಬಿಡು ಸೆರಗನು, ಕಡೆದ ಮೊಸರನೀಗ
ಕಡು ರುಚಿ ಬೆಣ್ಣೆಯ ಕೊಡುವೆ ನಿನ್ನ ಕೈಗೆ ॥ಅ.ಪ ॥

Rarest Archiver

ಪೊಳೆವ ಮುಖವ ತೊಳೆವೆ । ರಂಗಯ್ಯ (ನಿನ್ನ)
ಸುಳಿಗೂದಲನು । ಹಿಕ್ಕುವೆ (ಬಾಚುವೆ)
ನಲಿವ ಅರಳೆಲೆ ಮಾಗಾಯ್ಗಳ ಕಟ್ಟಿ
ಚೆಲುವ ಮುಖಕೆ ನಾ । ತಿಲಕವ ತಿದ್ದುವೆ ॥ 1 ॥

ನೀಲದಂಗಿ ತೊಡಿಸಿ । ರಂಗಯ್ಯ ನಿನಗೆ
ತೋಳ ಬಾಪುರಿ ಇಡಿಸಿ
ಕಾಲಿಗೆ ಗೆಜ್ಜೆ ಕಟ್ಟಿ । ಕೈಗೆ ಉಂಗುರವಿಟ್ಟು
ನೀಲವರ್ಣನೆ ನಿನ್ನ ತೋಳ ಮೇಲೆತ್ತುವೆ ॥ 2 ॥

ಹಸುರ ಅಲಗಿಯ ತೊಡಿಸಿ । ಕೃಷ್ಣನೆ ನಿನಗೆ
ಕುಸುರಿ ಬಾಪುರ ಇಡಿಸಿ
ಹಸನಾದ ನವನೀತ । ಹಸಿಹಾಲ ನೊರೆಯನ್ನು
ಬಿಸಿ ಬಿಸಿ ಕಜ್ಜಾಯ । ಹಸುಕಂದ ತರುವೆನು ॥ 3 ॥

ಚಕ್ಕುಲಿ, ಗಿಲಗಂಚಿಯು । ಅತಿರಸವು ।
ಸಕ್ಕರೆ ಪಾಯಸವು
ಚೊಕ್ಕ ಚಿನ್ನದ ಹರಿವಾಣದಲ್ಲಿ ತಂದು
ಅಕ್ಕರದಿ ನಿನ್ನ । ಚಿಕ್ಕ ಬಾಯಲ್ಲಿಡುವೆ ॥ 4 ॥

ಚಂದಮಾಮನ ತೋರುವೆ । ಸುಂದರ ಕೃಷ್ಣ
ಛಂದದಿ ಮೊಲೆಯೂಡುವೆ
ಇಂದಿರೆ ರಮಣಶ್ರೀ । ನಾಗೇಶಶಯನ ಹೃ
ನ್ಮಂದಿರದಲಿ ನಿನ್ನ । ಪೊಂದಿ ಮುದ್ದಾಡುವೆ ॥ 5 ॥

(ಇದನ್ನು ಓದಿದಾಗ ನನಗೆ ಇಂದಿರೇಶ ಮುದ್ರಾಂಕಿತ ಪೂಜ್ಯ ಹುಚ್ಚಾಚಾರ್ಯರ ಇದೇ ತರಹದ ಪದ ಜ್ಞಾಪಕಕ್ಕೆ ಬರುತ್ತದೆ. ಅಂದರೆ ಇದು – ಅದರ ಜೆರಾಕ್ಸ್ ಕಾಪಿ ಎಂದಲ್ಲ, ಭಕ್ತರ ಭಾವನೆಗಳು ಹೇಗೆ ಒಂದೇ ತರಹ ಮಾತಾಡಿಕೊಂಡಿರುತ್ತವೆ ಎನ್ನಿಸುತ್ತದೆ.)

ಕೋಲಾರ ಪದ್ಮಾಬಾಯಿಯವರ ಭಾಗವತದ ಕಥನ ಕವನಗಳಲ್ಲಿ ಪ್ರಾಸ ಮತ್ತು ಶಬ್ದಾಲಂಕಾರ ವೈಭವವನ್ನು ಚೆನ್ನಾಗಿ ಕಾಣಬಹುದು.

Rarest Archive

## ಪ್ರಹ್ಲಾದ ಕಥಾ ಕೇತಕಿ

ರಾಗ: ಅಠಾಣ

ಭಲಾ, ಭಲಾ ನರಕೇಸರಿ
ಇಳೆಯೊಳಗೆ ನಿನಗಾರು ಸರಿ ॥

ತಪವನೆ ಗೈದಕ । ಶ್ಯಪತನುಜ
ಕೃಪೆಯಲಿ । ವರವಿತ್ತ । ನಾ ಅಜ
ಅಪಾರ । ಹರಿಭಕ್ತ । ನಾಗೆ ತನು । ಜ
ಪಾಪ ಬು । ದ್ಧಿಲಿ ಸುತ । ನನು ಜರಿದ ॥ 1 ॥

ಮಳ ಮಳ । ಮರಳುವ । ತೈಲದ । ಲಿ
ಸಳ ಸಳ । ಹರಿಯುವ । ಜಲಗಳ । ಲಿ
ಬೀಳಿಸಿದ । ದನುಪರ್ವ । ತದಿಂದ । ಲಿ
ತುಳಿಸಿದ । ಭಾರಿಕ । ರಿಗಳಿಂದ । ಲಿ ॥ 2 ॥

ಸೆಳೆ ಸೆಳೆ । ದನು ಆ । ಕಂದನ । ನನು
ಪೇಳು ಪೇಳೆಂದ । ನಿನ್ನಿರವ । ನ್ನು
ಥಾಳ್ ಥಾಳ್ । ಕಂಭದಿ । ಇಹನೆನ್ನೆ
ಖೊಳ ಝಾಡಿಸಿದನು । ಪಾದವನೆ ॥ 3 ॥

ಧಡಾ ಧ । ಡಾರೆಂದು । ಕಂಭದೊ । ಳು
ಘುಡಿ ಘುಡಿ । ಸುತ ಬಹು । ರೋಷದೊ । ಳು
ಹೊಡೆದಳೆ । ಯುತ ಅಸು । ರ ನಕರು । ಳು
ಮಿಡಿ ಮಿಡಿ । ಯುತ ರಕ್ತ । ಉಗುರಿನೊ । ಳು ॥ 4 ॥

ಗಡ ಗಡ । ನಡುಗಿತು । ಈ ಜಗ । ವು
ಧುಡು ಧುಡು । ಓಡಿತು । ದೈತ್ಯಕುಲ । ವು
ಬಿಡಿ ಬಿಡಿ । ಸುಮಗಳ । ಸುರಿಸಿದ । ರು
ಸಡಗರ । ದಿಂದಲಿ । ಸುಮನಸ । ರು ॥ 5 ॥

Rarest Archiver

ಬಿಸಿ ಬಿಸಿ । ರಕ್ತವ । ಎಸೆಯುತಿರೆ
ದಿಶೆ ದಿಶೆ । ಗಳಿಗೆಲ್ಲ - ಚೆಲ್ಲುತಿರೆ
ಹಸೀಹ । ಸುಳಿ ಪ್ರ । ಹ್ಲಾದನು । ತಾ
ಪ್ರಸೀದ । ಹರಿ ಎಂದ । ಬೇಡುತ ॥ 6 ॥

ಭಾಗವ । ತಾಗ್ರಣಿ । ಪ್ರಹ್ಲಾದ । ಗೆ
ಆಗ ಪಟ್ಟವ ಕಟ್ಟಿ । ಪೊರೆದವ । ಗೆ
ಭೋಗಲ । ಕ್ಷುಮಿಪತಿ । ನರಹರಿಗೆ । ಜಯ
ಪಾಡಿರೆ ನಾಗೇಶ । ಶಯನನಿ । ಗೆ ॥ 7 ॥

## ಗೋಪಿಕಾ ವಿರಹ

ಜಯ, ಜಯ, ಗೋಪಾಲ । ಜಯ, ಜಯ, ಗೋಪಾಲ ।
ಜಯ ಜಯ, ತ್ರಿಲೋಲ । ಸುರಪಾಲ
ಜಯ ಜಯ ಗೋಪಾಲ । ಜಯ ಜಯ ಯದುಬಾಲ
ಜಯ ಜಯ ತುಲಸೀ ವನಮಾಲಾ ॥ ಪ ॥

ಮಥುರಾ ಪುರಕೆಂದು । ಮಾಧವ ಹೊರಟನು
ಮರಳಿ ಬರುವೆನೆಂದು । ಅಭಯ ಕೊಟ್ಟ ॥ ಸಖಿ ॥
ಮರಳಿ ಬರುವೆನೆಂದು । ಅಭಯವ ತೋರಿದ
ಮರೆತನೇನೆ ನಮ್ಮ ಸಖಿ ಪೇಳೆ ॥ 1 ॥

ಪಟ್ಟಣದ ಸ್ತ್ರೀಯರು । ದಿಟ್ಟ ಹೆಂಗಳೆಯರು
ಬಿಟ್ಟು ಕೊಡುವರೇನೇ । ಕೃಷ್ಣನ್ನ ಸಖೀ
ಬಿಟ್ಟು ಕೊಡವರೇನೆ । ಕೃಷ್ಣನ್ನ । ಎಮ್ಮಯ
ಇಷ್ಟ ದೈವ ಗೋಪಾಲನ್ನ ॥ 2 ॥

ಪೂತನಿಯ ಕೊಂದ । ಶಕಟನಸುವನು ಕೊಂದ
ಘಾತಕಿ, ಧೇನು, ವತ್ಸಾಸುರರ ಕೆಡಹಿ
ಪಾತಕಿ ಕೇಶಿ, ತೃಣಾಸುರನ ಕೊಂದ, ನವ
ನೀತ ಚೋರನ ಕಾಣದಿರಲಾರೆವೆ ॥ 3 ॥

Rarest Archive

ಗೊಲ್ಲರ ಮನೆಯ ಪೊಕ್ಕು । ಕಳ್ಳತನದಿಂದ
ಮೆಲ್ಲನೆ ಪಾಲ ಮೊಸರ । ಕುಡಿದೋಡಿದ ಸಖಿ ।
ಸಲ್ಲಲಿತಾಂಗನ ಪಿಡಿಯ ಪೋದರೆ ನಮ್ಮ
ಗಲ್ಲವ ಕಚ್ಚಿ ನಿಲ್ಲದೆ ಓಡಿದ ॥ 4 ॥

ಕಾಳಿಂಗ ಮರ್ದನನ । ಗೋವರ್ಧನನೋದ್ಧರನ
ತಾಳ ವೃಕ್ಷಗಳನ್ನು । ಕೆಡಹಿದವನ ಸಖಿ ।
ನೀಲ ಮೇಘಶ್ಯಾಮ । ಸುಂದರ ರೂಪ ಶ್ರೀ
ಬಾಲಕೃಷ್ಣನ ಕಾಣದಿರಲಾರೆವೇ ॥ 5 ॥

ಇಂತು ಗೋಪಿಯರು । ಏಕಾಂತ ಭಕ್ತಿಯ ತಾಳಿ
ಕಂತುಪಿತನ ದಿವ್ಯ ಮಹಿಮೆ ಕೊಂಡಾಡುತ
ಕಂತುಪಿತನ ದಿವ್ಯ ಮಹಿಮೆ ಕೊಂಡಾಡುತ್ತ
ಚಿಂತೆಯಲಿ ಮೈ ಮರೆದು ಸ್ತುತಿಸಿದರು ॥ 6 ॥

ವಿಶ್ವರಕ್ಷಕ ಕೃಷ್ಣ । ವಿಶ್ವವ್ಯಾಪಕ ಕೃಷ್ಣ
ವಿಶ್ವವ ಪಾಲಿಪ । ಶ್ರೀಕೃಷ್ಣ ಸಖಿ
ವಿಶ್ವವ ಪಾಲಿಪ ಶ್ರೀಕೃಷ್ಣ ಮೋಹನ್ನ
ವಿಶ್ವಕರ್ತನೆ ಒಲಿದು ಮೈದೋರೊ ॥ 7 ॥

ನಂದಗೋಪ ಗೋಪಿ ಕಂದನು । ನೀನಲ್ಲ
ಇಂದಿರೆ ರಮಣ ಮುಕುಂದ ಹರಿ ಸಖಿ ।
ಇಂದಿರೆ ರಮಣ ಅಖಿಲ ದೇಹಗಳಲ್ಲಿ
ಛಂದದಿ ಇರುವ ಗೋವಿಂದ ಹರಿ ॥ 8 ॥

ಏಸೇಸೊ ಜನ್ಮದಲಿ । ತಪಗಳ ಗೈದು ನಾವ್
ಈಸು ಗೋಕುಲದಲ್ಲಿ । ಪುಟ್ಟಿದೆವು । ಸಖಿ ।
ವಾಸುದೇವನೆ ನಿನ್ನ ಅಂಗಸಂಗವ ಕೊಟ್ಟು
ಮೋಸದಿ ಬಿಟ್ಟು ಪೋಗುವರೇನೋ ॥ 9 ॥

ಕಾತ್ಯಾಯಿನಿ ವ್ರತ । ಭಕ್ತಿಯಿಂದಲಿ ಮಾಡಿ ।
ಭಕ್ತವತ್ಸಲ ನಿನ್ನ । ಪೊಂದಿದೆವೊ ಸ್ವಾಮಿ ।

Rarest Archiver

ಭಕ್ತವತ್ಸಲ ನಿನ್ನ। ಪೊಂದಿ ಸುರತ ಸುಖ
ನಿತ್ಯದಿ ಭೋಗಿಸಿ । ನಲಿದಿದ್ದೆವೊ ॥ 10 ॥

ಅತ್ತೆ ಮಾವನ ಭಯದಿ । ಹಿತ್ತಿಲ ಕದದಿಂದ
ಕತ್ತಲೆಯೊಳು ಓಡಿಬಂದೆವೊ ಸ್ವಾಮಿ ।
ಉತ್ತಮ ಪುರುಷ ನೀನ್ಹತ್ತಿರ ಬರಲು
ಕತ್ತಲು ಬೆಳದಿಂಗಳಾಯಿತೋ ॥ 11 ॥

ಬಾಲೆ ಗೋಪಿಯರು । ತಮ್ಮಾಲಯಗಳ ತೊರೆದು
ಮೇಳೈಸಿ ವನದಲ್ಲಿ ದುಃಖಿಸುತ । ಸಖಿ ।
ತಾಳದೆ ಕೃಷ್ಣನ್ನ । ವಿರಹವನು ರೋದಿಸುತ
ಮೇಲಾದ ಸುಸ್ವರದಿ ಸ್ತುತಿಸಿದರು ॥ 12 ॥

ತಂದೆ ತಾಯ್ಗಳ ತೊರೆದು । ಕಂದರನ್ನೆ ಮರೆತು
ಬಂದೆವೊ ಕೊಳಲ ಸುಸ್ವರ ಕೇಳಿ ಸ್ವಾಮಿ
ಸುಂದರ ವದನನೆ । ಕಂದರ್ಪಜನಕನೆ । ಗೋ
ವಿಂದನೆ ನಿನ್ನನು ಪೊಂದಿ ಸುಖಿಸಿದೆವೊ ॥ 13 ॥

ತನುವು ಪತಿಯ ಬಳಿ । ಮನವು ನಿನ್ನಯ ಬಳಿ
ವನಜಾಕ್ಷ ನಿನ್ನೊಡನೆ । ರಮಿಸಿದೆವೊ ಸ್ವಾಮಿ
ವನಜಾಕ್ಷ ನಿನ್ನೊಡನೆ । ಕಾಮಿಸಿ ರಮಿಸಿದ
ಘನದೋಷ ನಮಗೆಂತು । ಲೇಪಿಸುವುದೊ ॥ 14 ॥

ಜಲರುಹೇಕ್ಷ ನೀ । ಜಲಜಾಕ್ಷಿಯರೊಡನೆ
ಜಲಕ್ರೀಡೆಯಾಡಿ । ಸಂತೈಸಿ ಸ್ವಾಮಿ
ಜಲಕ್ರೀಡೆಯನಾಡಿ ಸಂತೈಸಿ ಕರುಣದಿ
ಕಲಿಮಲ ತಾಪವ ಕಳೆದೆ ಹರಿಯೆ ॥ 15 ॥

ವೇಣುನಾದವ ಮಾಡಿ । ಜಾಣೆಯರೊಡಗೂಡಿ
ಕಾನನದ ಪುಷ್ಪ । ಸುವನಗಳಲಿ ಸ್ವಾಮಿ
ಕಾನನದಿ ರಾಸಕ್ರೀಡೆಯನಾಡಿದ
ಜಾಣನಮ್ಮನು ಹೀಗೆ ಮರೆಯುವರೆ ॥ 16 ॥

Rarest Archiver

ಇಂತಗೋಪಿಯರು ಬಹು ಸಂತಾಪದಿಂದಲಿ
ಕಂತುಪಿತನ ದಿವ್ಯಮೂರುತಿಯ ಆಗ
ಕಂತುಪಿತನ ದಿವ್ಯಮಂಗಳ ಮೂರ್ತಿಯ
ಅಂತರಂಗದಿ ನೆನೆದು ಸ್ತುತಿಸಿದರು ॥ 17 ॥

ಗೋಪಿಯರ ಸಂತಾಪ ಸ್ತುತಿ ಕೇಳಿ
ಗೋಪಿವಲ್ಲಭ ಅಂತರಾತ್ಮ ಹರಿ
ಗೋಪಾಲಕೃಷ್ಣನು । ಪಾಪವಿದೂರನು
ಗೋಪೇರ ಎದುರಲ್ಲಿ ಮೈದೋರಿದ ॥ 18 ॥

ಪೀತಾಂಬರಧರ । ಕೌಸ್ತುಭ ಮಣಿಹಾರ
ವಾತಜ ಸೇವಿತ । ಮುರುಳೀಧರ ।
ಪ್ರೀತನಾಗಿ ಗೋಪಬಾಲೆಯರಿಗೊಬ್ಬ
ನಾಥನಾಗಿ ತೋರಿ ಸಂತೈಸಿದ ॥ 19 ॥

ಜರಿಯ ಪೀತಾಂಬರ ನೆರಿಗೆಗಳೊಲಿಯುತ
ಕರದ ಕಂಕಣಗಳು ಘಲ್ ಘಲ್ಲೆನಲು
ಅರಳು ಮಲ್ಲಿಗೆ ಮಾಲೆ ಹೆರಳು ನಲಿದಾಡಲು
ಸ್ಮರನ ಪಿತನ ಪಾದಕ್ಕೆರಗಿದರು ॥ 20 ॥

ತಪವುಗೈದ ಆ ಚಪಲಾಕ್ಷಿಯರಿಗೆಲ್ಲಾ
ಸುಫಲವ ಕೊಡುತ । ಅಧರಾಮೃತವಿತ್ತನು
ತಪಸಿಗಳೊಡೆಯ ಶ್ರೀ ಹರಿಕೃಷ್ಣ ॥ 21 ॥

ಮಡದಿ ಗೋಪಿಯರೆಲ್ಲ । ಒಡೆಯ ಶ್ರೀ ಕೃಷ್ಣನ
ಕಡುಮೋಹನ ರೂಪ ಕಾಣುತಿರೆ
ಒಡನೆ ಶ್ರೀ ಲಕುಮಿಯ । ಆವೇಶ ಒದಗಲು
ಸಡಗರದಲ್ಲಿ ಹರಿಯನಪ್ಪಿದರು ॥ 22 ॥

ಪದುಮಾಕ್ಷಿಯರ ದಿವ್ಯ ಹೃದಯದಲ್ಲಿದ್ದಂತ
ಮಧುಸೂದನ ಮಾರಜನಕ ಹರಿ

Rarest Archiver

ಮಧುಸೂದನ ಮುಕ್ತಿದಾತ ಶ್ರೀವಲ್ಲಭ
ಮಡದೇರಿಗೆಲ್ಲ ಸದ್ಗತಿ ಇತ್ತನು ॥ 23 ॥

ಜಯ, ಜಯವೆಂದರು । ಸುರರು ಅಂಬರದಲ್ಲಿ
ಜಯವೆಂದು ಪಾಡಿದರು । ಹರುಷದಲಿ
ಜಯವೆಂದು ಪಾಡುತ । ಸುರಿದರು ಸುಮಗಳ
ಪ್ರಿಯನಾದ ಕೃಷ್ಣನಿಗೆ । ಗೋಪಿಯರಿಗೆ ॥ 24 ॥

ನಾಗಮರ್ದನ ಹರಿಯ – ಸಾಗರಸುತೆ ಪತಿಯ
ಮೇಘಶ್ಯಾಮ ಸುಂದರ । ಮೂರ್ತಿಯ
ಯೋಗ ಭೋಗ ಕೊಟ್ಟು । ರಕ್ಷಿಪ ಸ್ವಾಮಿಯ
ನಾಗೇಶಶಯನನ ನೆನೆಮನವೆ ॥ 25 ॥

## ಸ್ವ-ಗುರುಸ್ಮರಣೆ

ಭೂಪಾಳಿ ರಾಗ – ಝಂಪೆ ತಾಳ

ನಾಗೇಶ ಶರ್ಮ ಗುರು । ರಾಘವೇಂದ್ರರ ದಾಸ
ಬಾಗಿ ನಮಿಸುವೆನು । ಕಾಯೋ ॥

ತಂದೆ ನೀನಾಗೆನ್ನ । ತಂದೆ ಈ ಧರಣಿಯಲಿ
ಕಂದರ್ಪಪಿತನ ದಯದಿ
ಅಂದೆನ್ನ ಜನನಿ । ಹರಿಯ ಮಂದಿರಕೆ । ತೆರಳೆ । ದಯ
ದಿಂದ ಬಿಡದಂತೆ ಪೊರೆದೆ । ಬಿಡದೆ ॥ 1 ॥

ಎಳೆಯ ತನದಲಿ ಎನಗೆ । ಒಲವಿನಿಂ ವಿದ್ಯೆಗಳ
ಗಿಳಿಗೊರೆವ ತೆರದಿ । ಒರೆದೆ ।
ಕುಲಿದಲುತ್ತಮರಾದ । ವರನಿಗೆನ್ನನು ದಾನ
ಬಲು ಸಂಭ್ರಮದಿ ಮಾಡಿದೆ ಬಿಡದೆ ॥ 2 ॥

ವಿದ್ವಾಂಸ ಪದವಿಯನು । ಪೊದ್ದಿದೆಯೊ ಆಂಗ್ಲೇಯ
ಪದ್ಧತಿಯ ಭಾಷೆಯಲ್ಲಿ

Rarest Archiver

ವಿದ್ಯಾರ್ಥಿಗಳಿಗೆಲ್ಲ। ಸದ್ಬುದ್ಧಿ ಬೋಧಿಸುತ
ಶುದ್ಧ ಧರ್ಮಗಳ। ನೊರೆದೆ। ಪೊರೆದೆ ॥ 3 ॥

ನಿತ್ಯ ವೇದಾಧ್ಯಯನ। ಮತ್ತೆ ಗಾಯತ್ರಿ ಜಪ।
ಚಿತ್ತದಲಿ ಧ್ಯಾನಯೋಗ
ತೃಪ್ತಿ ಪಡಿಸಿದೆ। ಆದಿತ್ಯರನು ಹೋಮದಲಿ
ಪಿತೃಗಣವನು ತಣಿಸಿದೆ। ತಣಿದೆ ॥ 4 ॥

ಸರ್ವಭೂತಗಳಲ್ಲಿ। ಸರ್ವಸ್ಥಾನಗಳಲ್ಲಿ
ಸರ್ವವಿಧ ಕಾರ್ಯಗಳಲ್ಲಿ
ಸರ್ವೇಶ ಹರಿ ನಿಂತು। ಸರ್ವವನು ಮಾಡಿಸುವ
ಸರ್ವದಾ ಪೊರೆವನೆಂದೆ। ತಂದೆ ॥ 5 ॥

ಶುದ್ಧ ವೈಷ್ಣವನೆನಿಸಿ। ಮಧ್ವಶಾಸ್ತ್ರ ಸುಸಾರ
ತಿದ್ದಿ ಪೇಳಿದೆಯೊ ಎನಗೆ
ಮುದ್ರಿಕೆಯನೊಲಿದಿತ್ತು। ಮಧ್ವವಲ್ಲಭನಂಘ್ರಿ
ಪದ್ಮಕೆನ್ನನು ಸಲಿಸಿದೆ। ನಡೆದೆ ॥ 6 ॥

ಆಷಾಢ ಬಹುಳ ಅಷ್ಟಮಿ ದಿನದಿ ಶ್ರೀ ಭಾರತೀ
ವರದನ। ಪಾದವ
ಲೇಸಾಗಿ ಚಿಂತಿಸುತ। ನೀ ಸಾಗಿ ಪೋದಿ। ನಾ
ಗೇಶ ಶಯನನ। ಸದನಕೆ। ನಿಜಕೆ ॥ 7 ॥

ಶ್ರೀಮತಿ ಕೋಲಾರ ಪದ್ಮಾಬಾಯಿಯವರು ತಮ್ಮ ತಂದೆಯಾದ ಕೀರ್ತಿಶೇಷರಾದ ಶ್ರೀ ನಾಗೇಶರಾಯರ ಪದತಲದಿ ಕುಳಿತು ಸರ್ವಜ್ಞ ಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಿದವರಾಗಿದ್ದಾರೆ. ಅದರಿಂದಲೇ ಅವರ ಕೃತಿಗಳು ಒಂದಕ್ಕಿಂತ ಒಂದು ಹೃದ್ಯವೂ, ರಂಜನೀಯವೂ ಆಗಿದೆ. ಜೊತೆಗೆ ಪತಿಯಾದ ರಾಮರಾಯರ ಪ್ರೋತ್ಸಾಹವೂ ಮಿಳಿತು ಆಕೆ ಅನೇಕ ಸುಮಧುರ ಪದಗಳನ್ನು ಬರೆದವರಾಗಿದ್ದಾರೆ. ನಾನು ಅವರನ್ನು ಚೆನ್ನಾಗಿ ಬಲ್ಲೆ. ಸಜ್ಜನರು, ಸಚ್ಛಾಸ್ತ್ರಗಳನ್ನು ಅರಿತವರು, ಮೇಲಾಗಿ ದೈವಭಕ್ತರು. ನಾನು ನೋಡಿದ ಬಳ್ಳಾರಿಯ ದಾಸಮಹಿಳೆಯರಲ್ಲಿ ಪ್ರಮುಖರಾಗಿ ಎಲೆಮರೆ ಕಾಯಿಯಂತೆಯೇ ಇದ್ದರು. ಅವರಿಗೆ ನಮ್ಮನ್ನೆಲ್ಲಾ ಕಂಡರೆ ತುಂಬಾ ಸಂತೋಷವಾಗುತ್ತಿತ್ತು. ಬದುಕಿರುವವರೆಗೂ

Rarest Archiver

ಬಳ್ಳಾರಿಯ ಮಾಧ್ವ ಮಹಾಮಂಡಲದ ಶಾಖೆಯನ್ನು ಅತ್ಯುತ್ತಮವಾಗಿ ನಡೆಸಿಕೊಂಡು ಬಂದರು. ಕೆಲವು ವರ್ಷಗಳ ಹಿಂದೆ ಏನೋ ಖಾಯಿಲೆಯಿಂದ ನರಳುತ್ತಾ ಬೆಂಗಳೂರಿನ ಒಂದು ನರ್ಸಿಂಗ್ ಹೋಂನಲ್ಲಿ ಭಗವಂತನ ಪಾದಾರವಿಂದವನ್ನು ಸೇರಿದರು.

ಬಳ್ಳಾರಿಯ ಹರಿದಾಸ ಮಹಿಳೆಯರಾದ ಹರಪನ ಹಳ್ಳಿ ಭೀಮವ್ವ, ಓರವಾಯಿ ಲಕ್ಷ್ಮೀದೇವಮ್ಮ, ದೊಡ್ಡಿ ಸುಧಾಬಾಯಿ, ರಾಧಾಬಾಯಿ, ಸೀತಾಬಾಯಿಯವರುಗಳನ್ನು ಒಂದೇ ಮಾಲೆಯಲ್ಲಿ ಹೆಣೆದು ನಮ್ಮ ಕುಲದೈವ ಹಾಗೂ ಇಷ್ಟದೈವನಾದ ತಿರುಪತಿಯ ತಿಮ್ಮಪ್ಪನಿಗೆ ಅರ್ಪಿಸಬೇಕೆಂದು ಇಚ್ಛಿಸಿ ಸಹೃದಯರೂ, ವಿದ್ವಾಂಸರೂ ಆಗಿರುವ 'ಹರಿದಾಸವಾಹಿನಿ' ಸಂಪಾದಕರಾದ ಶ್ರೀಯುತ ಎ.ಬಿ. ಶ್ಯಾಮಾಚಾರ್ಯರನ್ನು ಕೇಳಿದಾಗ ಅವರು ಬಹಳ ಸಂತೋಷದಿಂದ ಒಪ್ಪಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಲಿದ್ದಾರೆ. ಇದೊಂದು ಮಹಿಳಾ ಹರಿದಾಸರ ಬಗ್ಗೆ ಬರೆದ ಸಾಧಾರಣ ಲೇಖನ. ಕನ್ನಡ ಜನತೆ ಇದನ್ನು ಪುರಸ್ಕರಿಸುತ್ತದೆ ಎಂದು ನಂಬಿರುವ.

–ರುಕ್ಮಿಣಿ ಗಿರಿಮಾಜಿ

Rarest Archiver

# ಶ್ರೀಮತಿ ರಾಧಾಬಾಯಿಯವರು

ನಮ್ಮ ಕರ್ನಾಟಕ ಸರಕಾರವು ಕನ್ನಡದಲ್ಲಿ ಸಮಗ್ರ ದಾಸಸಾಹಿತ್ಯವನ್ನು (ಪುರುಷರು ಮತ್ತು ಸ್ತ್ರೀಯರ) ನೆರವನ್ನು ಬಯಸಿ ಅದಕ್ಕೆ ತಕ್ಕಂತಹ ನಿರ್ವಾಹಕರನ್ನು ನೇಮಿಸಿ ಕಾರ್ಯವನ್ನು ಆರಂಭಿಸಿದಾಗ ನಮ್ಮ ಅನೇಕ ವೈಷ್ಣವ ಮಹಿಳಾ ಹರಿದಾಸರು ದೊರಕಿದರು. ಇಷ್ಟೇ ಅಲ್ಲ ಗ್ರಾಮಾಂತರಗಳಲ್ಲಿ ಅಪ್ರಸಿದ್ಧರಾದ ಅನೇಕ ಮಹಿಳಾ ಹರಿದಾಸರು ಇದ್ದಾರೆ ಎಂಬುದನ್ನು ನಾವು ತಿಳಿಯಬಹುದು. ಹೀಗೆ ನಮಗೆ ದೊರೆತವರಲ್ಲಿ ಬಳ್ಳಾರಿಯ ಶ್ರೀಮತಿ ರಾಧಾಬಾಯಿಯವರು ಒಬ್ಬರು.

ಶ್ರೀಮತಿ. ರಾಧಾಬಾಯಿಯವರು ಮೂಲತಃ ಆಂಧ್ರದ ಮದನಪಲ್ಲಿ ಗ್ರಾಮದವರು. ಅತ್ತೆಮನೆ ಬಳ್ಳಾರಿ. ಪತಿ ಶ್ರೀನಿವಾಸರಾಯರು ಓರ್ವ ಸೀನಿಯರ್ ಹುದ್ದೆಯಲ್ಲಿದ್ದರು. ಮೊದಲ ಹೆಂಡತಿಯಲ್ಲಿ ಇಬ್ಬರು ಮಕ್ಕಳಿದ್ದರು. ಆಕೆ ತೀರಿಕೊಂಡಮೇಲೆ ರಾಧಾಬಾಯಿಯವರನ್ನು ವಿವಾಹವಾದರು. ರಾಧಾಬಾಯಿಯವರು ಒಂಭತ್ತು ಮಕ್ಕಳನ್ನು ಪಡೆದರು. ದೊಡ್ಡ ಸಂಸಾರವನ್ನು ಆಕೆ ನಿಭಾಯಿಸುತ್ತಿದ್ದರು. ರಾಧಾಬಾಯಿಯವರು ಮೊದಲಿನಿಂದಲೂ ದೈವಭಕ್ತರಾಗಿದ್ದರು. ಆಕೆ ಯಾವಾಗ ಬರೆಯಲು ಆರಂಭಸಿದರು ಯಾರಿಗೂ ತಿಳಿಯದು. ಅಂತೂ ಆಕೆಯ ಅರವತ್ತು ಹಾಡುಗಳು ಮಾತ್ರ ದೊರಕಿವೆ. ಅವೆಲ್ಲಾ ಆ ಹಾಡುಗಳೆಲ್ಲಾ ಮಹಿಳಾ ಹರಿದಾಸರ ಸಂಪುಟಗಳಲ್ಲಿವೆ. ಅವರ ಮನೆಯವರ ಪ್ರಕಾರ ಆಕೆಯು ತನ್ನ ಎಂಭತ್ತನೇ ವಯಸ್ಸಿನಲ್ಲಿ ಬರೆಯಲಾರಂಭಿಸಿರಬಹುದು ಎನ್ನುತ್ತಾರೆ. ಎಂಭತ್ತೆಂಟು ವರ್ಷಗಳು ಆಕೆ ಬದುಕಿದ್ದರು. ನಮಗೆ ದೊರಕಿದ ಪದಗಳ ಸಂಖ್ಯೆ ಅರವತ್ತು ಮಾತ್ರ. ಅವುಗಳಲ್ಲಿ ಆಕೆ ಶ್ರೀ ರಾಘವೇಂದ್ರ ಸ್ವಾಮಿಗಳ ಪರವಾದ ಪದಗಳೇ ಹೆಚ್ಚು. ಮನೆದೈವನಾದ ತಿರುಪತಿಯ ಶ್ರೀನಿವಾಸನ್ನ ಕುರಿತು ನಾಲ್ಕೈದು ಪದಗಳಿರಬಹುದು. ಆಕೆಯ ಹಾಡುಗಳಲ್ಲಿ ಭಗವಂತನಲ್ಲಿ ಅತೀವ ಶ್ರದ್ಧೆ, ನಂಬಿಕೆ, ಆರ್ತತೆ ಕಂಡುಬರುತ್ತದೆ. ಮಾದರಿಗೆ ಎರಡು ಹಾಡನ್ನು ಅವರ ಮಗ ಶ್ರೀಯುತ. ಬಿ. ಅಚ್ಯುತರಾಯರ ಸೊಸೆ ಕೃಷ್ಣಾ ಬರೆದುಕೊಟ್ಟು ಕಳಿಸಿದ್ದಾರೆ. ಈ ಹಾಡುಗಳಲ್ಲಿ ಬಳ್ಳಾರಿಯ ಕನ್ನಡವನ್ನು ನೋಡಬಹುದು. ಈಕೆಯ ಪದಗಳ ಅಂಕಿತ – ಶ್ರೀ ವೆಂಕಟೇಶವಿಠಲ ಯಾರು ಕೊಟ್ಟರೆಂಬುದು ತಿಳಿದುಬಂದಿಲ್ಲ.

Rarest Archiver

ಶ್ರೀ ರಾಘವೇಂದ್ರರ ಪಾದವ ನಂಬಿರೋ ಜಗದ್ಗುರು ರಾಜರ ಸೇವೆ
ಮಾಡಿರೋ ॥ ಪ ॥

ನಂಬಿದ ಭಕ್ತರ ಪೊರೆಯುವಾ ಹಗಲಿರುಳು ಬೆಂಬಿಡದೆ ಕಾಯುತ್ತಿರುವಾ
ಸಕಲ ಸಂಪತ್ತು ಇತ್ತು ಸಲಹುವಾ ನಮ್ಮ ಕರುಣಾ ದೃಷ್ಟಿಯಿಂದ ನೋಡುತ್ತಲಿರುವಾ
॥1॥

ಬಂದ ಬಂದವರನ್ನು ಮುಂದಕ್ಕೆ ಕರೆವಾ ಬಂದಾಪತ್ತುಗಳನೆಲ್ಲಾ ಕಳೆವಾ
ತಂದೆಯಂದದಿ ಕೈ ಪಿಡಿದಿರುವಾ ಇನ್ನು ಸಂದೇಹವಿಲ್ಲದೆ ರಕ್ಷಿಸುವಾ ॥ 2 ॥

ಶ್ರೀರಾಮಚಂದ್ರನ ಪ್ರಿಯಭಕ್ತರೂ ಶ್ರೀ ರಾಘವೇಂದ್ರರು । ಆಶ್ರಿತ
ಜನ ರಕ್ಷಕರಾಗಿಹರು ಬಂದು ಮಂತ್ರಾಲಯದಿ ನೆಲಸಿಹರು ॥ 3 ॥

ಆನೆ ಬಂದಿತಮ್ಮಾ ಮರಿ ಆನೆ ಬಂದಿತಮ್ಮಾ ॥ ಪ ॥
ಕಿಂಕರರಿಗೆ ಬಂದ ಸಂಕಟ ಕಳೆವಾ ಶ್ರೀ ವೆಂಕಟರಮಣನೆಂಬಾನೆ ॥ ಅ.ಪ ॥

ಸಿರಿಯಿಲ್ಲದಿರಲಾರೆನೆಂದಾತುರದಲಿ ಧರೆಗಿಳಿದಾನೇ
ಪಥದೊಳಗೆಲ್ಲ ಹುಡುಕ್ಯಾನೆ । ವಲ್ಮೀಕದೊಳು ಅಡಗ್ಯಾನೆ ॥ 1 ॥

ಭಕ್ತರ ಸಲಹಲು ಹೋಮನ ಮಾಡ್ಯಾನೇ ಬಕುಳೆ ಮಾತಿಗೆ
ಕಂದನಾಗ್ಯಾನೇ ನೆತ್ತಿಯ ಒಡಕೊಂಡು ನಿಂತ್ಯಾನೇ ಬಹುವಿಧ
ಯೋಚನೆ ಮಾಡ್ಯಾನೇ ॥ 2 ॥

ಬೇಟೆಯಾಡಲು ಹೊರಟ್ಯಾನೆ ದಿಟ್ಟ ಕುದುರೆಯನೇರ್ಯಾನೇ
ಪಟುತರ ಶ್ರೀಹರಿ ನಡೆದಾನೇ ಮುಂದೆ ಮದಗಜ ಒಂದನು ಕಂಡ್ಯಾನೇ ॥ 3 ॥

ಶಾನೆ ಬೆನ್ನಟ್ಟಿಕೊಂಡು ನಡೆದಾನೇ ಎಲ್ಲೆಲ್ಲಿಯು ಕಾಣದೆ ಹೋದಾನೇ
ಬಿಸಿಲಲ್ಲಿ ಬಳಲುತ ದಣಿದ್ಯಾನೇ ಅಲ್ಲಿ ಪದ್ಮಾವತಿಯಳ ಕಂಡಾನೆ ॥ 4 ॥

ಮನದಲ್ಲಿ ಹರುಷಿತನಾದಾನೇ ಮಾತನಾಡಲು ಮುಂದೆ ನಡೆದಾನೇ
ಕಲ್ಲು ಹಳೆಸುವುದ ಕಂಡಾನೇ ತಡಮಾಡದೆ ಹಿಂದೆ ಸರಿದಾನೇ ॥ 5 ॥

ಬಕುಳೆ ಮಾತೆಯ ಕರೆದಾನೇ ಸಕಲ ವೃತ್ತಾಂತವ ತಿಳಿಸ್ಯಾನೇ
ಬೇಗದಿ ಹೋಗಿ ಬಾರೆಂದಾನೇ ಮೌನದಿಂದಲಿ ಮಲಗ್ಯಾನೇ ॥ 6 ॥

Rarest Archive

ಮಾತೆ ಬರುವುದ ಕಂಡಾನೇ । ಮುದದಿಂದಲಿ ಎದ್ದು ಕುಳಿತಾನೇ
ತಂದ ಶುಭವಾರ್ತೆಯ ಕೇಳ್ಯಾನೇ ಮಂದಹಾಸದಿಂದಲಿ ನಲಿದಾನೇ ॥ 7 ॥

ಬಂಧುಗಳೆಲ್ಲರ ಕರಿಸ್ಯಾನೇ ಮುಂದೆ ಮಾಡಿಕೊಂಡು ನಡೆಸ್ಯಾನೇ
ಮದುಮಗನಾಗಿ ನಿಂತಾನೆ । ಪದುಮಾವತಿ ಕೈ ಪಿಡಿದಾನೇ ॥ 8 ॥

ಜಯ ಜಯವೆಂದರು ಸುರಬ್ರಹ್ಮಾದಿಗಳು ವಾಣಿ-ಪಾರ್ವತಿಯರು
ಜಯ ಜಯವೆಂದರು ಗಗನದಿ ಅಮರರು ಮದುಮಕ್ಕಳ ಮೇಲೆ
ಪೂಮಳೆಗರೆದರು ॥ 9 ॥

ಮಂಗಳವೆನ್ನಿರೆ ಪದ್ಮಿನಿ ಅರಸಗೆ ಪನ್ನಗಶಯನಗೆ ಮಂಗಳವೆನ್ನಿರೆ
ಪರಮ ಕಲ್ಯಾಣಗೆ ಮಂಗಳವೆನ್ನಿರೆ ಶ್ರೀ ವೆಂಕಟವಿಠಲಗೆ
ಮಂಗಳ ಜಯ ಮಂಗಳ॥ 10 ॥

Rarest Archiver

## ದೇವಾಲಯವನ್ನು ನಿರ್ಮಿಸಿದ ದಾಸಮಹಿಳೆಯರು

## ಓರವಾಯಿ ಲಕ್ಷ್ಮೀದೇವಮ್ಮನವರು ಬಳ್ಳಾರಿಯಲ್ಲಿ.

ಲಕ್ಷ್ಮೀದೇವಮ್ಮನವರು ಆದವಾನಿಯಿಂದ ಬಳ್ಳಾರಿಗೆ ಬಂದು ನೆಲೆಸಿದರು. ಅವರ ಐವತ್ತೆರಡನೇ ವಯಸ್ಸಿನಲ್ಲಿ ಯಜಮಾನರು ದೈವಾಧೀನರಾದರು. ಮೊದಲೇ ಭಗವಂತನ ಭಕ್ತರಾಗಿದ್ದ ಅವರು ಸದಾ ಭಗವಂತನ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗಿರುವಾಗ ಒಮ್ಮೆ ಅವರಿಗೆ ತಮ್ಮ ಮನೆದೇವರಾದ ಲಕ್ಷ್ಮೀನರಸಿಂಹ ದೇವಾಲಯವನ್ನು ಬಳ್ಳಾರಿಯಲ್ಲಿ ನಿರ್ಮಿಸುವ ಮನಸ್ಸಾಯಿತು. ದೇವಾಲಯ ನಿರ್ಮಾಣವೆಂದರೆ ಸಾಮಾನ್ಯವಲ್ಲ. ಅವ್ವನವರು ಇದಕ್ಕಾಗಿ ಕನಾಪುರದ ಪ್ರಾಣದೇವರಲ್ಲಿಯೂ ಮಂತ್ರಾಲಯದಲ್ಲೂ ಸೇವೆ ನಡೆಸಿದರು.

ಆಗ ಮಂತ್ರಾಲಯದಲ್ಲಿ ವಿಪರೀತವಾಗಿ ಕಾಲರಾ ವ್ಯಾಧಿಯಿತ್ತು. ಜನಗಳೆಲ್ಲಾ ಊರು ಬಿಟ್ಟು ಹೋಗುತ್ತಿದ್ದರು. ಲಕ್ಷ್ಮೀದೇವಮ್ಮನವರು ಮಾತ್ರ ಧೈರ್ಯವಾಗಿ ಸೇವೆ ಮಾಡುತ್ತಿದ್ದರು. ಹೀಗಿರುವಾಗ ಒಂದುದಿನ ಬೆಳಗಿನ ಝಾವದಲ್ಲಿ ರಾಘವೇಂದ್ರ ಸ್ವಾಮಿಗಳು ಗವಾಕ್ಷಿಯಿಂದ ಅವರ ಕಣ್ಣಿಗೆ ಕಂಡಂತಾಯ್ತು. ಅವರು ಅವ್ವನವರನ್ನು ಕುರಿತು 'ನಾನಿದ್ದೇನೆ ಧೈರ್ಯವಾಗಿ ಕೆಲಸ ನಡಸು' ಎಂದಂತಾಯ್ತು. ಆದರೂ ಅವ್ವನವರಿಗೆ ಏನೋ ಅಸಮಾಧಾನ. ರಾಯರಿಂದ ಮಂತ್ರಾಕ್ಷತೆ ದೊರೆಯಲಿಲ್ಲವೆಂದು ದುಃಖವಾಯಿತು. ಎತ್ತಿನ ಗಾಡಿಯಲ್ಲಿ ಕುಳಿತು ಊರಿಗೆ ಹಿಂದಿರುಗುತ್ತಿರುವಾಗ ಸ್ವಲ್ಪ ದೂರ ಸರಿದ ನಂತರ ಎಂಟು ವರ್ಷದ ಬ್ರಹ್ಮಚಾರಿಯೊಬ್ಬನು ಇವರನ್ನು ಕೂಗುತ್ತಾ, ಏರುಸಿರು ಬಿಡುತ್ತಾ ಓಡೋಡಿ ಬರುತ್ತಿದ್ದನು. ಅವ್ವನವರು ಗಾಡಿಯನ್ನು ನಿಲ್ಲಿಸಲು ಹೇಳಿದರು. ಅವ್ವನವರು ಆ ಬಾಲಕನನ್ನು ಕರೆದು ವಿಚಾರಿಸಲು ಅವನು ಅವರಿಗೆ ಒಂದು ಪತ್ರವನ್ನು ಕೊಟ್ಟನಂತೆ. ಕವರಿನ ಮೇಲೆ ಇವರದೇ ಹೆಸರಿತ್ತು. ಒಡೆದು ನೋಡಲಾಗಿ ಅದರ ತುಂಬಾ ಫಲಮಂತ್ರಾಕ್ಷತೆಗಳಿದ್ದುವು. ಆಶ್ಚರ್ಯಚಕಿತರಾಗಿ ಬಾಲಕನನ್ನು ನೋಡಲು ತಲೆಯೆತ್ತಿದಾಗ ಬಾಲಕನು ಇರಲೇ ಇಲ್ಲ. ಇವರು ಮಾಡುವ ಕೆಲಸಕ್ಕೆ ರಾಯರ ಸಮ್ಮತಿ ದೊರೆಯಿತು ಎಂದುಕೊಂಡು ಸಂತೋಷಭರಿತರಾಗಿ ಊರಿಗೆ ಹಿಂದಿರುಗಿದರಂತೆ.

ದೇವಾಲಯದ ಕೆಲಸವು ಆರಂಭವಾಯಿತು. ಬಳ್ಳಾರಿಯ ಅಕ್ಕಸಾಲಿಗರ ಬೀದಿಯಲ್ಲಿ ಮಂದಿರವನ್ನು ನಿರ್ಮಿಸಲು ತೀರ್ಮಾನವಾಯಿತು. ದಿವ್ಯ ಮಂಗಳಕರನಾದ ಲಕ್ಷ್ಮೀನೃಸಿಂಹನ ವಿಗ್ರಹ ಸಿದ್ಧವಾಯಿತು. ಶಾಸ್ತ್ರೋಕ್ತವಾಗಿ ಧನವಾಸ ಜಲವಾಸಗಳಾದವು. ಶ್ರೋತ್ರಿಯ ಬ್ರಾಹ್ಮಣರು ತಂತ್ರಸಾರ ಇತ್ಯಾದಿ ಗ್ರಂಥಗಳನ್ನು ಪಠಿಸತೊಡಗಿದರು.

Rarest Archive

ಹೀಗಿರಲು ಆಶ್ಚರ್ಯಕರವಾದ ಒಂದು ಘಟನೆ ನಡೆಯಿತು. ಅವ್ವನವರ ಮನೆದೇವರು ನೀರಾ ನರಸಿಂಹ. ಗಂಗಾವತಿಯ ಮನೆದೇವರು ಅಹೋಬಲ ನರಸಿಂಹ. ಅವ್ವನವರು ಅನೇಕ ಕ್ಷೇತ್ರಗಳಿಗೆ ಹೋಗಿದ್ದರೂ ಅಹೋಬಲಕ್ಕೆ ಹೋಗಿರಲಿಲ್ಲ. ಇದೇ ಚಿಂತೆ ಆಕೆಯನ್ನು ಕಾಡುತ್ತಿತ್ತು. ಹಿಂದೆ ಮೂರುಸಲ ಹೋಗಬೇಕೆಂದುಕೊಂಡರೂ ಅಲ್ಲಿಗೆ ಹೋಗಬೇಡ ಎಂದು ಸ್ವಪ್ನವಾಗಿತ್ತಂತೆ.

ವಿಗ್ರಹ ಪ್ರತಿಷ್ಠೆಗೆ ಒಂದೆರಡು ದಿನಗಳಿರುವಾಗ ಒಂದು ಬೆಳಗಿನ ಝಾವದಲ್ಲಿ ಖಾಲಿಯಾಗಿದ್ದ ಗರ್ಭಗೃಹದಲ್ಲಿ ಉಗ್ರ ಜ್ವಾಲೆಗಳು ಕಂಡವು. ಅವ್ವನವರು ಭಯಚಕಿತರಾಗಿ ಬ್ರಾಹ್ಮಣರನ್ನು ವಿಚಾರಿಸಲು 'ಅದು ಅಗ್ನಿದೇವನ ದರ್ಶನ. ಅವನು ಕಾಣಿಸಿಕೊಂಡದ್ದರಿಂದ ಈ ಗರ್ಭಗುಡಿ ಶುದ್ಧವಾಗಿದ್ದು, ಇದರಲ್ಲಿ ಪರಮಾತ್ಮನ ಸಾನ್ನಿಧ್ಯವಿರುತ್ತದೆ' ಎಂದರು. ಅವ್ವನವರಿಗೆ ಈ ಉತ್ತರದಿಂದ ಸಮಾಧಾನವಾಗಲಿಲ್ಲ. ಮರುದಿನವೂ ಅದೇ ಅನುಭವವಾಯಿತು. ಅದು ಅವ್ವನವರಿಗೆ ಸ್ವಾಮಿಯ ಉಗ್ರರೂಪವೆಂದು ಭಾಸವಾಯಿತು. ಅವರು ಭಗವಂತನನ್ನು ಪ್ರಾರ್ಥಿಸತೊಡಗಿದರು. ''ನನ್ನ ವಂಶದವರೆಲ್ಲಾ ನಿನ್ನನ್ನು ಸೇವಿಸುತ್ತಾ, ನಿನ್ನ ಅನುಗ್ರಹವನ್ನು ಪಡೆಯಲೆಂದು ನಾನು ನಿನ್ನನ್ನು ಪ್ರತಿಷ್ಠಾಪಿಸುತ್ತೇನೆಂದದ್ದಲ್ಲವೆ? ನೀನು ಈ ರೀತಿ ಉಗ್ರನಾದರೆ ನಾಳೆ ನಿನ್ನನ್ನು ಪೂಜಿಸುವ ಅರ್ಚಕರು ಒಳ್ಳೆ ಜ್ಞಾನವಂತರಾಗಿಲ್ಲದಿರಬಹುದು ಸಾಮಾನ್ಯರಾಗಿರಬಹುದು. ಅವರು ನಿನ್ನ ಮುಟ್ಟಿ ಹೇಗೆ ಪೂಜಿಸಬಲ್ಲರು? ಎಂದು ಬೇಡಲು ಸೌಮ್ಯವಾಗಿ 'ನೀನು ಅಹೋಬಲ ನರಸಿಂಹನ ರೂಪವನ್ನು ನೋಡಬೇಕೆಂದು ಆಶಿಸಿದ್ದರಿಂದ ನಿನಗೆ ಈ ರೀತಿಯ ದರ್ಶನವನ್ನು ಇಲ್ಲೇ ಕೊಟ್ಟಿದ್ದೇನೆ. ಇನ್ನು ಮುಂದೆ ಸೌಮ್ಯರೂಪದಲ್ಲೇ ಇರುತ್ತೇನೆ'' ಎಂದಂತಾಯಿತು. ಬೆಳಿಗ್ಗೆ ನೋಡಲು ಜ್ವಾಲೆಗಳಿರಲಿಲ್ಲ.

ಸನ್ 1905ರಲ್ಲಿ ಶ್ರೀ ಲಕ್ಷ್ಮೀನರಸಿಂಹದೇವರ ಪ್ರತಿಷ್ಠೆಯಾಯಿತು. ನಂತರ ಪ್ರಾಣದೇವರ ಪ್ರತಿಷ್ಠೆಯೂ ರಾಯರ ಮೃತ್ತಿಕಾ ಬೃಂದಾವನದ ಪ್ರತಿಷ್ಠೆಯೂ ನಡೆಯಿತು.

ಅವ್ವನವರು ಪೂಜ್ಯರಾದ ಸತ್ಯಧ್ಯಾನ ಸ್ವಾಮಿಗಳನ್ನು ಬಹುವಿಧವಾಗಿ ಆರಾಧಿಸುತ್ತಿದ್ದುದರಿಂದ ಅವರಿಗೆ ಸತ್ಯಧ್ಯಾನರ ಮೃತ್ತಿಕಾ ಬೃಂದಾವನವನ್ನೂ ಸ್ಥಾಪಿಸಬೇಕೆಂದು ಮನಸ್ಸಾಯಿತು. ಅವ್ವನವರು ಸತ್ಯಧ್ಯಾನ ಸ್ವಾಮಿಗಳ ಮಹಾ ಸಮಾರಾಧನೆಗೆ ಮಿತ ಪರಿವಾರದೊಡನೆ ಪಂಢರಾಪುರಕ್ಕೆ ಹೋಗಿದ್ದರು. ಅಂದು ಸಂಜೆ ತಮಗೆ ಲಕ್ಷ್ಮೀನರಸಿಂಹನ ಮಂದಿರದಲ್ಲಿ ಸತ್ಯಧ್ಯಾನ ಸ್ವಾಮಿಗಳ ಮೃತ್ತಿಕಾ ಬೃಂದಾವನವನ್ನು ಸ್ಥಾಪಿಸಬೇಕೆಂಬ ಆಶೆಯುಂಟಾಗಿರುವುದರಿಂದ ಮೃತ್ತಿಕೆಯನ್ನು ದಯಪಾಲಿಸಬೇಕೆಂದು

Rarest Archiver

ಅಂದಿನ ಶ್ರೀಗಳವರಾಗಿದ್ದ ಪರಮಪೂಜ್ಯ ಸತ್ಯಪ್ರಜ್ಞರನ್ನು ಪ್ರಾರ್ಥಿಸಿದರು. ಪೂರ್ವದಿಂದಲೂ ಈಕೆಯ ಸದ್ಗುಣಗಳನ್ನು ಮೆಚ್ಚಿದ್ದ ಶ್ರೀಗಳು ಸಂತೋಷಿಸಿ ತಾವು ಕೆಲವೇ ದಿನಗಳಲ್ಲಿ ಆತಕೂರಿನಲ್ಲಿ ಮೊದಲನೇ ಮೃತ್ತಿಕಾ ಬೃಂದಾವನವನ್ನು ಸ್ಥಾಪಿಸುವುದಾಗಿಯೂ, ಆನಂತರ ಅವ್ವನವರು ಬಳ್ಳಾರಿಯಲ್ಲಿ ಎರಡನೇ ಬೃಂದಾವನವನ್ನು ಸ್ಥಾಪಿಸಬಹುದೆಂತಲೂ ಹೇಳಿ ಮೃತ್ತಿಕೆಯನ್ನು ದಯಪಾಲಿಸಿದರು. ಅವ್ವನವರು ಹಾಗೆಯೇ ಮಾಡಿ ಧನ್ಯರಾದರು. ಹೀಗಾಗಿ ಮಂದಿರದಲ್ಲಿ ಶ್ರೀಹರಿ - ವಾಯು, ಗುರುಗಳ ನೆಲೆಸಿ ಅದೊಂದು ಪುಣ್ಯಕ್ಷೇತ್ರವಾಗಿದೆ. ಒಂದೇ ಗುಡಿಯಲ್ಲಿ ಈ ರೀತಿ ಶ್ರೀ ಗುರುಸಾರ್ವಭೌಮರ ಬೃಂದಾವನವೂ ಶ್ರೀ ಉತ್ತರಾದಿ ಮಠದ ಪರಂಪರೆಯ ಯತಿಗಳ ಬೃಂದಾವನವಿರುವುದು ಬಹಳ ವಿರಳ. ಹೀಗೆ ಅವ್ವನವರು ಸಾಧಿಸಿದ ಭಾವೈಕ್ಯತೆ ಮೆಚ್ಚಬೇಕಾಗಿದೆ.

## ಮೈಸೂರು ಶ್ರೀಮತಿ ಸೀತಾಬಾಯಿಯವರು ನಿರ್ಮಿಸಿದ ಸತ್ಯನಾರಾಯಣಸ್ವಾಮಿಯ ದೇವಸ್ಥಾನ

ಬಳ್ಳಾರಿಯ ಸತ್ಯನಾರಾಯಣ ಮಂದಿರವಿರುವ ಬೀದಿಗೆ ಸತ್ಯನಾರಾಯಣ ಪೇಟ ಎಂಬ ಹೆಸರಿದೆ. ಅಲ್ಲಿ ಹಿಂದಿನ ತಲೆಮಾರಿನ ಸೀತಾಬಾಯಿ ಎಂಬುವರು ತಮ್ಮ ಮನೆಯ ಮುಂದಿದ್ದ ವಿಶಾಲವಾದ ಸ್ಥಳದಲ್ಲಿ ಒಂದು ಸಾಧಾರಣವಾದ ಸತ್ಯನಾರಾಯಣನ ದೇವಸ್ಥಾನವನ್ನು ಕಲ್ಪಿಸಿದ್ದಾರೆ. ಇದು ಸಾಧಾರಣವಾಗಿದೆ. ನಿತ್ಯದಲ್ಲೂ ಶಾಸ್ತ್ರೋಕ್ತ ಪೂಜಾದಿಗಳು, ಪಾಠ ಪ್ರವಚನಾದಿಗಳು ನಡೆಯುತ್ತಿದೆ.

Rarest Archiver

Rarest Archives